ಬೆಂಗಳೂರು ಗುರುವಾರ, 13 ಜೂನ್ 2024 ಸಂಪುಟ 31, ಸಂಚಿಕೆ 223, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ RNI: 58231/94 REG No.KA/BG GPO/2532/202123 www.hosadigantha.com epaper.hosadigantha.com ₹5

ಜೂ.24ರಿಂದ 18ನೇ ಲೋಕಸಭೆಯ ಮೊದಲ ಅಧಿವೇಶನ: ಕಿರಣ್ ರಿಜಿಜು ಪುಟ 8

ಜಮ್ಮು-ಕಾಶ್ಮೀರದಲ್ಲಿ ಇಬ್ಬರು ಉಗ್ರರ ವಧೆ ಪುಟ 8

ಪುಟ 8 ಲೋಕ ಕಣದ ಯಶಸಿನಲ್ಲಿ ವಾಯುಪಡೆ ಮಹತ್ತರ ಪಾತ್ರ

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಶುಭ ದಿನ

ಕಲಿಯುಗಾಬ್ದ 5126, ಕ್ರೋಧಿ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪೂರ್ವೆ

ದಿನದ ಮಾತು

ಚೈತನ್ಯರಹಿತವಾದ ಭೇರಿ 'ಧನಂ ಧನಂ' ಎಂಬ ಶಬ್ದ ಮಾಡುವುದು. ಚೈತನ್ಯ ಉಳ್ಳ ಕೆಲಜನರು 'ಧನ ಧನ' ಎನ್ನುತ್ತಿರುತ್ತಾರೆ. ಆ ಮೂಲಕ ಚೈತನ್ಯ ಉಳ್ಳ ಮನುಜ ಚೈತನ್ಯರಹಿತ ಭೇರಿಗೆ ಸಮನಾಗಿ ಹೋದ.

–ಹಿತೋಪದೇಶ

ಸಂಘದ ಕುರಿತು 'ಗಾಳಿಪಟ ಹಾರಿಸುವವರು' • ಪುಟ 6

• ರಾಮ್ ಮಾಧವ್

ವಿಶ್ವಕಪ್

ಇಂದಿನ ಪಂದ್ಯ

ವೆಸ್ಟ್‌ಇಂಡೀಸ್ VS ನ್ಯೂಜಿಲ್ಯಾಂಡ್
ಪಂದ್ಯ ಆರಂಭ: ಬೆಳಗ್ಗೆ 6 ಗಂಟೆ

ಬಾಂಗ್ಲಾದೇಶ VS ನೆದರ್‌ಲ್ಯಾಂಡ್
ಪಂದ್ಯ ಆರಂಭ: ರಾತ್ರಿ 8 ಗಂಟೆ

• ವಿವರ ಕ್ರೀಡಾಪುಟ

ಕಿರು ಸುದ್ದಿ

ವಯನಾಡ್, ರಾಯ್‌ಬರೇಲಿ ಆಯ್ಕೆ ಬಗ್ಗೆ ಸಂದಿಗ್ಧತೆ: ರಾಗಾ

ಕೋಝಿಕ್ಕೋಡ್: 18ನೇ ಲೋಕಸಭಾ ಚುನಾವಣೆಯಲ್ಲಿ ಕೇರಳದ ವಯನಾಡ್ ಹಾಗೂ ಉತ್ತರ ಪ್ರದೇಶದ ರಾಯ್‌ಬರೇಲಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಜಯ ಸಾಧಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇವುಗಳಲ್ಲಿ ಯಾವ ಕ್ಷೇತ್ರದ ಸಂಸದರಾಗಿ ಪ್ರತಿನಿಧಿಸಬೇಕೆಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ, ಈ ಬಗ್ಗೆ ಸಂದಿಗ್ಧತೆ ಎದುರಾಗಿದೆ ಎಂದು ತಿಳಿಸಿದ್ದಾರೆ. ಬುಧವಾರ ಕೋಝಿಕ್ಕೋಡ್‌ನ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ನಾಯಕ, ಈ ವಿಚಾರದಲ್ಲಿ ಸಂದಿಗ್ಧತೆಯಿದ್ದು, ಅಂತಿಮ ತೀರ್ಮಾನ ತಲುಪಲು ಸಾಧ್ಯವಾಗುತ್ತಿಲ್ಲ. ವಯನಾಡ್‌ನ ಸಂಸದರಾಗಿ ಪ್ರತಿನಿಧಿಸಬೇಕೆ? ಅಥವಾ ರಾಯ್‌ಬರೇಲಿಯಲ್ಲಿ ಮುಂದುವರಿಯಬೇಕೆ ಎಂದು ತಿಳಿಯುತ್ತಿಲ್ಲ ಎಂದಿದ್ದಾರೆ.

ಉಗ್ರನ ದಯಾಭಿಕ್ಷೆ ಅರ್ಜಿ ತಿರಸ್ಕರಿಸಿದ ರಾಷ್ಟ್ರಪತಿ

ಹೊಸದಿಲ್ಲಿ: 24 ವರ್ಷ ಹಿಂದೆ ದಿಲ್ಲಿ ಕೆಂಪುಕೋಟೆಯಲ್ಲಿ ಕಾವಲಿದ್ದ ಭಾರತೀಯ ಯೋಧರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದ ಪಾಕ್ ಮೂಲದ ಭಯೋತ್ಪಾದಕ, ಮೊಹಮ್ಮದ್ ಆರಿಫ್ ಯಾನೆ ಅಶ್ಫಕ್‌ನ ದಯಾಭಿಕ್ಷೆ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದ್ದಾರೆ. • ವಿವರ ಪುಟ 8

ಮನಿ ಚೈನ್ ಕೇಸ್: ಕೇರಳ ಸೇರಿ ಹಲವೆಡೆ ಇಡಿ ದಾಳಿ

ಪುಟ 8

ಮುಖ್ಯಮಂತ್ರಿಯಾಗಿ ಚಂದ್ರಬಾಬು, ಸಚಿವರಾಗಿ ಪವನ್ ಪ್ರಮಾಣ

ಆಂಧ್ರಕ್ಕೆ ಎನ್‌ಡಿಎ ಆಳ್ವಿಕೆ

- ಚಂದ್ರಬಾಬು ಸೇರಿ 24 ಶಾಸಕರು ಸಚಿವರಾಗಿ ಪ್ರಮಾಣ ಸ್ವೀಕಾರ
- ನಾಯ್ಡು ಸಂಪುಟದಲ್ಲಿ ಬಿಜೆಪಿಗೆ 1, ಜನಸೇನೆಗೆ 3 ಸ್ಥಾನ, 17 ಹೊಸಮುಖ

ಅಮರಾವತಿ: ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಹಿರಿಯ ನಾಯಕರು ಮತ್ತು ಕೇಂದ್ರ ಸಚಿವರು ಭಾಗವಹಿಸಿದ್ದ ಸಮಾರಂಭದಲ್ಲಿ, ನಾಲ್ಕನೇ ಅವಧಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ಜನ ಕೇಂದ್ರಿತ ಆಡಳಿತ ನೀಡಲು ಟಿಡಿಪಿ, ಜನಸೇನಾ ಮತ್ತು ಬಿಜೆಪಿ ಸರ್ಕಾರ ಶ್ರಮಿಸಲಿದೆ ಎಂದು ಅವರು ಭರವಸೆ ನೀಡಿದರು.

ಜನಸೇನಾ ಮುಖ್ಯಸ್ಥ ಮತ್ತು ನಟ ಪವನ್ ಕಲ್ಯಾಣ್ ಮತ್ತು ಚಂದ್ರಬಾಬು ನಾಯ್ಡು ಅವರ ಪುತ್ರ ನಾರಾ ಲೋಕೇಶ್ ಸೇರಿದಂತೆ 24 ಸಚಿವರು ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು. ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ ಮತ್ತು ಜೆ.ಪಿ. ನಡ್ಡಾ, ಮಹಾರಾಷ್ಟ್ರ ಮುಖ್ಯಮಂತ್ರಿ, ಏಕನಾಥ್ ಶಿಂಧೆ ಕೂಡ ಸಮಾರಂಭದಲ್ಲಿ ಭಾಗವಹಿಸಿದ್ದರು. ತಮ್ಮ ಎಕ್ಸ್ ಸಂದೇಶದಲ್ಲಿ ಮೋದಿ, ಆಂಧ್ರ ಪ್ರದೇಶದ ಹೊಸ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಿದ್ದೇನೆ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಾಯ್ಡು ಅವರಿಗೆ ಮತ್ತು ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಇತರ ಎಲ್ಲರಿಗೂ ಅಭಿನಂದನೆಗಳು ಎಂದಿದ್ದಾರೆ. ➡ 9

> ಜನರ ಆಶೋತ್ತರಗಳನ್ನು ಮತ್ತು ಆಶೆಗಳನ್ನು ಈಡೇರಿಸುವ ಮೂಲಕ ಎನ್‌ಡಿಎ ಸರ್ಕಾರವು ಆಂಧ್ರಪ್ರದೇಶವನ್ನು ಸಮೃದ್ಧಿಯ ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂಬುದು ನನ್ನ ದೃಢವಾದ ನಂಬಿಕೆ.
> ■ ಅಮಿತ್ ಶಾ, ಕೇಂದ್ರ ಗೃಹ ಸಚಿವ

ವೈಭವದ ಹೊಸ ಎತ್ತರಕ್ಕೆ ಆಂಧ್ರಪ್ರದೇಶ: ಮೋದಿ

ದಕ್ಷಿಣದ ರಾಜ್ಯದ ಟಿಡಿಪಿ, ಜನಸೇನಾ ಮತ್ತು ಬಿಜೆಪಿ ಸರ್ಕಾರ ಆಂಧ್ರಪ್ರದೇಶವನ್ನು (ಆಂಧ್ರಪ್ರದೇಶ) ವೈಭವದ ಹೊಸ ಎತ್ತರಕ್ಕೆ ಕೊಂಡೊಯ್ಯಲು ಮತ್ತು ರಾಜ್ಯದ ಯುವಕರ ಆಕಾಂಕ್ಷೆಗಳನ್ನು ಈಡೇರಿಸಲು ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮೋದಿ ಆತ್ಮೀಯ ಅಪ್ಪುಗೆ

ಪ್ರಮಾಣವಚನ ಸ್ವೀಕರಿಸಿದ ಚಂದ್ರಬಾಬು ನಾಯ್ಡು ಅವರನ್ನು ಪ್ರಧಾನಿ ಮೋದಿ ಆತ್ಮೀಯವಾಗಿ ಅಪ್ಪಿಕೊಂಡು ಅಭಿನಂದಿಸಿದರು. ಸಮಾರಂಭದ ನಂತರ ತೆಲುಗು ಮೆಗಾ ಸ್ಟಾರ್ ಚಿರಂಜೀವಿ ಮತ್ತು ಪವನ್ ಕಲ್ಯಾಣ್ ಅವರನ್ನು ಅಪ್ಪಿಕೊಂಡು ಅವರ ಕೈಗಳನ್ನು ಹಿಡಿದುಕೊಂಡು ಆತ್ಮೀಯವಾಗಿ ಮಾತನಾಡಿದರು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಪನ್ನೀರ್ ಸೆಲ್ವಂ, ತಮಿಳು ಸೂಪರ್ ಸ್ಟಾರ್ ರಜನಿಕಾಂತ್ ಮತ್ತು ಅವರ ಪತ್ನಿ ಲತಾ ಅವರೊಂದಿಗೆ ವೇದಿಕೆಯಲ್ಲಿ ಸಂಕ್ಷಿಪ್ತ ಮಾತುಕತೆ ನಡೆಸಿದರು.

- ಪ್ರಧಾನಿ ಮೋದಿ, ಶಾ, ರಾಜನಾಥ್ ಉಪಸ್ಥಿತಿ
- ಮಾಜಿ ಸಿಎಂ ನವೀನ್ ಪಟ್ನಾಯಕ್ ಕೂಡ ಭಾಗಿ

ಒಡಿಶಾ ಸಿಎಂ ಆಗಿ ಮಾಝಿ ಪ್ರಮಾಣ

ಭುವನೇಶ್ವರ: ಒಡಿಶಾದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಬುಡಕಟ್ಟು ಜನಾಂಗದ ನಾಯಕ ಮತ್ತು ನಾಲ್ಕು ಬಾರಿಯ ಶಾಸಕ ಮೋಹನ್ ಚರಣ್ ಮಾಝಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಬುಧವಾರ ಸಂಜೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಜೆ.ಪಿ. ನಡ್ಡಾ, ನಿತಿನ್ ಗಡ್ಕರಿ, ಮಾಜಿ ಸಿಎಂ ನವೀನ್ ಪಟ್ನಾಯಕ್ ಅವರ ಉಪಸ್ಥಿತಿಯಲ್ಲಿ ನಡೆದ ಸಮಾರಂಭದಲ್ಲಿ ಮೋಹನ್ ಚರಣ್ ಮಾಝಿ, ಕೆ.ವಿ. ಸಿಂಗ್ ದೇವ್ ಮತ್ತು ಪ್ರವತಿ ಪರೀದಾ ಪ್ರಮಾಣ ಸ್ವೀಕಾರ ಮಾಡಿದರು. ದೇವ್ ಮತ್ತು ಪರೀದಾ, ಮಾಝಿ ಸಂಪುಟದಲ್ಲಿ ಉಪಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಒಟ್ಟು 16 ಮಂದಿ ಶಾಸಕರು ಸಚಿವರಾಗಿ ಪ್ರಮಾಣ ಸ್ವೀಕಾರ ಮಾಡಿದ್ದಾರೆ. ➡ 9

ಮೊದಲ ಕಡತಕ್ಕೆ ಎಚ್‌ಡಿಕೆ ಸಹಿ

ರಾಜ್ಯ ಗಣಿಗಾರಿಕೆ ಯೋಜನೆಗೆ ಅಸ್ತು

ಬೆಂಗಳೂರು: ಕೇಂದ್ರದಲ್ಲಿ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾಗಿ ಎಚ್.ಡಿ. ಕುಮಾರಸ್ವಾಮಿ ಅಧಿಕಾರ ವಹಿಸಿಕೊಂಡ ನಂತರ ಬುಧವಾರ ಮೊದಲ ಕಡತಕ್ಕೆ ಸಹಿ ಹಾಕಿದ್ದು, ಅದು ತವರು ರಾಜ್ಯ ಕರ್ನಾಟಕಕ್ಕೆ ಸಂಬಂಧಿಸಿದ್ದಾಗಿದೆ.



ಉಕ್ಕು ಖಾತೆಗೆ ಸಂಬಂಧಿಸಿದ ಈ ಕಡತವು ಬಳ್ಳಾರಿ ಜಿಲ್ಲೆಯಲ್ಲಿ ಉದ್ದೇಶಿತ ಗಣಿಗಾರಿಕೆ ಯೋಜನೆಯದು. ಬಳ್ಳಾರಿಯಲ್ಲಿ ದೇವದಾರಿ ಕಬ್ಬಿಣ ಅದಿರು ಗಣಿಗಾರಿಕೆ ಯೋಜನೆಯ ಕಡತಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಹಿ ಹಾಕಿದ್ದಾರೆ.

ಕೇಂದ್ರ ಸಚಿವರು ಸಹಿ ಮಾಡಿರುವ ಈ ಕಡತಕ್ಕೆ ಕರ್ನಾಟಕ ಸರ್ಕಾರ ಕೂಡ ಒಪ್ಪಿಗೆ ಕೊಡಬೇಕು. ಅಲ್ಲದೇ ಈ ಕಡತವು ಕೇಂದ್ರದ ಹಣಕಾಸು ಇಲಾಖೆ ಅನುಮೋದನೆಗೆ ಹೋಗಬೇಕು. ಅದಕ್ಕೆ ಮುನ್ನ ಈ ಕಡತಕ್ಕೆ ಸಹಿ ಹಾಕಲಾಗಿದೆ. ದೇವದಾರಿ ಕಬ್ಬಿಣ ಅದಿರು ಗಣಿಗಾರಿಕೆ ಯೋಜನೆಯ ಈ ಕಡತವು ಹಲವು ಸಮಯದಿಂದ ಮುಂದುವರಿಯದೇ ಬಾಕಿ ಉಳಿದಿತ್ತು. ಈ ಯೋಜನೆಯನ್ನು ಕುದುರೆಮುಖ ಕಬ್ಬಿಣ ಅದಿರು ಕಂಪನಿ (ಕೆಐಒಸಿಎಲ್ ಲಿಮಿಟೆಡ್) ಜಾರಿ ಮಾಡಲಿದೆ. ಉದ್ಯೋಗ ಭವನದ ಉಕ್ಕು ಸಚಿವಾಲಯದ ಕಾರ್ಯದರ್ಶಿ ನಾಗೇಂದ್ರನಾಥ ಸಿನ್ಹಾ ಅವರೊಂದಿಗೆ ಸಮಾಲೋಚನೆ ನಡೆಸಿದ ನಂತರ ಈ ಕಡತಕ್ಕೆ ಎಚ್.ಡಿ. ಕುಮಾರಸ್ವಾಮಿ ಸಹಿ ಮಾಡಿದರು. ➡ 9

2025ಕ್ಕೆ ಹಳ್ಳಿಗಳು ಬಯಲು ಶೌಚ ಮುಕ್ತ

ಬೆಂಗಳೂರು: ದೇಶದ ಎಲ್ಲಾ ಹಳ್ಳಿಗಳನ್ನು 2025 ಮಾರ್ಚ್ ವೇಳೆಗೆ



ಬಯಲು ಶೌಚ ಮುಕ್ತ (ಒಡಿಎಫ್) ಪ್ಲಸ್ ಮಾದರಿ ವರ್ಗಕ್ಕೆ ತರಲು ಶ್ರಮಿಸುತ್ತೇವೆ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ಬುಧವಾರ ದಿಲ್ಲಿಯಲ್ಲಿ ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ್ ಅವರ ಸಮ್ಮುಖದಲ್ಲಿ ರಾಜ್ಯ ಸಚಿವರಾಗಿ ಅವರು ಅಧಿಕಾರ ಸ್ವೀಕರಿಸಿದರು. ಬಳಿಕ ಮಾತನಾಡಿದ ಸಚಿವರು, ಸ್ವಚ್ಛ ಭಾರತ್ ಮಿಷನ್‌ನಲ್ಲಿ(ಗ್ರಾಮೀಣ) ಭಾರತದ ಶೇ.93ಕ್ಕಿಂತ ಹೆಚ್ಚಿನ ಹಳ್ಳಿಗಳನ್ನು ಬಯಲು ಶೌಚ ಮುಕ್ತ (ಒಡಿಎಫ್) ಪ್ಲಸ್ ಮಾಡಲಾಗಿದೆ. ➡ 9

ಕುವೈತ್ ವಸತಿ ಕಟ್ಟಡದಲ್ಲಿ ಬೆಂಕಿ ದುರಂತ | ಹಲವರಿಗೆ ಗಾಯ

41 ಭಾರತೀಯರ ಸಜೀವ ದಹನ

ಹೊಸದಿಲ್ಲಿ: ಕುವೈತ್ ದಕ್ಷಿಣ ನಗರವಾದ ಮಂಗಾಫ್‌ನಲ್ಲಿ 200 ಕಾರ್ಮಿಕರನ್ನು ಹೊಂದಿರುವ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿ 41 ಭಾರತೀಯರು ಸೇರಿದಂತೆ 49 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಆರು ಹಂತಗಳ ಕಟ್ಟಡದಲ್ಲಿ ದಕ್ಷಿಣ ಭಾರತದ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡು ಮತ್ತು ಉತ್ತರ ಭಾರತ ರಾಜ್ಯಗಳ ಜನರು ವಾಸಿಸುತ್ತಿದ್ದರು.

ನೆಲ ಮಹಡಿಯಲ್ಲಿದ್ದ ಅಡುಗೆ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡು ಕಟ್ಟಡದಾದ್ಯಂತ ವ್ಯಾಪಿಸಿದೆ. ಕೆಲವರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿದು ಮೃತಪಟ್ಟಿದ್ದಾರೆ. ➡ 9

ಕೇರಳದ 11 ಮಂದಿ ಸೇರಿ ತ.ನಾಡು ಮತ್ತು ಉತ್ತರ ಭಾರತದ ರಾಜ್ಯಗಳ ಹಲವರ ಸಾವು

ಘಟನಾ ಸ್ಥಳಕ್ಕೆ ರಾಯಭಾರಿ

ನಮ್ಮ ರಾಯಭಾರಿ ಘಟನಾ ಸ್ಥಳಕ್ಕೆ ತೆರಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನಾವು ಕಾಯುತ್ತಿದ್ದೇವೆ. ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸಹಾಯವಾಣಿ ಸಂಖ್ಯೆಯನ್ನು ಬಿಡುಗಡೆ ಮಾಡಿದೆ. ಭಾರತೀಯರಿಗೆ ರಾಯಭಾರ ಕಚೇರಿಯು ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಲಿದೆ. ➡ 9

ಜೂ.21ಕ್ಕೆ ಶ್ರೀನಗರದಲ್ಲಿ ಮೋದಿ ಯೋಗ



ಹೊಸದಿಲ್ಲಿ: ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನವನ್ನು ಪ್ರಧಾನಿ ನರೇಂದ್ರ ಮೋದಿ ಜಮ್ಮು-ಕಾಶ್ಮೀರದಲ್ಲಿ ಆಚರಿಸುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ. ಜೂನ್ 21ರ ಅಂತಾರಾಷ್ಟ್ರೀಯ ಯೋಗದಿನದಂದು, ಮೋದಿ ಕಾಶ್ಮೀರಕ್ಕೆ ಭೇಟಿ ನೀಡುವ ಸಾಧ್ಯತೆಗಳಿವೆ. 3ನೇ ಅವಧಿಗೆ ಪ್ರಧಾನಿಯಾದ ಬಳಿಕ ಕಣಿವೆಗೆ ಇದು ಅವರ ಮೊದಲ ಭೇಟಿಯಾಗಲಿದೆ. ಜೂ. 21ರಂದು ಶ್ರೀನಗರದಲ್ಲಿ ನಡೆಯಲಿರುವ ಯೋಗ ಕಾರ್ಯಕ್ರಮದಲ್ಲಿ ಪ್ರಧಾನಿ ಪಾಲ್ಗೊಳ್ಳುವರೆಂದು ನಿರೀಕ್ಷಿಸಲಾಗಿದೆ. ➡ 9

ಪಾಕ್ ಪರ ಘೋಷಣೆ: ಕೈದಿಗೆ ಏಟು

ಬೆಳಗಾವಿ: ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಎದುರಿನ ನ್ಯಾಯಾಲಯ ಆವರಣದಲ್ಲಿಯೇ ಪಾಕಿಸ್ತಾನ ಪರ ಘೋಷಣೆ ಕೂಗಿದ ವಿಚಾರಣಾಧೀನ ಕೈದಿಯೊಬ್ಬನಿಗೆ ವಕೀಲರು ಹಾಗೂ ಸಾರ್ವಜನಿಕರು ಧರ್ಮದೇಟು ನೀಡಿದ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿದ್ದ ಕೈದಿ ಜಯೇಶ್ ಪೂಜಾರಿ ಉರೂಫ್ ಶಾಕೀರ್ ಖಾನ್ ಎಂಬಾತ ಪಾಕಿಸ್ತಾನ ಪರ ಘೋಷಣೆ ಕೂಗಿ ಹುಚ್ಚಾಟ ಮೆರೆದಿದ್ದು, ಸ್ಥಳದಲ್ಲಿದ್ದ ವಕೀಲರು ಹಾಗೂ ಸಾರ್ವಜನಿಕರಿಂದ ಧರ್ಮದೇಟು ತಿಂದಿದ್ದಾನೆ. ಮಂಗಳೂರು ಮೂಲದ ಜಯೇಶ್ ಪೂಜಾರಿ ಉರೂಫ್ ಶಾಕೀರನನ್ನು ವಿಚಾರಣೆಗಾಗಿ ಸ್ಥಳೀಯ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ➡ 9

ಸಚಿವ ಗಡ್ಕರಿಗೆ ಜೀವ ಬೆದರಿಕೆ ಹಾಕಿದ್ದ ಭೂಪ!

ಕೊಲೆ, ಕೊಲೆ ಪ್ರಯತ್ನ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿರುವ ಜಯೇಶ್ ಪೂಜಾರಿ ಉರೂಫ್ ಶಾಕೀರ್ ಖಾನ್, ಜೀವಾವಧಿ ಶಿಕ್ಷೆಗೆ ಒಳಗಾಗಿ ಸದ್ಯ ಹಿಂಡಲಗಾ ಜೈಲಿನಲ್ಲಿದ್ದಾನೆ. ಆದರೆ, ಈ ಹಿಂದೆ ಈತ ಹಿಂಡಲಗಾ ಜೈಲಿನಲ್ಲಿದ್ದಾಗಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರಿಗೆ ಫೋನ್ ಮುಖಾಂತರ ಜೀವ ಬೆದರಿಕೆ ಹಾಕಿ ಆತಂಕ ಸೃಷ್ಟಿಸಿದ್ದ. ➡ 9

ಠಾಣೆಯಲ್ಲಿ ತಪ್ಪೊಪ್ಪಿಕೊಳ್ಳುವಂತೆ ಸೂಚಿಸಿದ್ದ ದರ್ಶನ್

ಆರೋಪಿಗಳಿಗೆ ನಟ ಆಮಿಷ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆಯನ್ನು ಪೊಲೀಸರು ತೀವ್ರಗೊಳಿಸಿದ್ದು, ಮಹತ್ವದ ಅಂಶಗಳು ಹೊರಬಂದಿವೆ. ನಟ ದರ್ಶನ್ ಮೂವರು ಆರೋಪಿಗಳಿಗೆ ತಪ್ಪೊಪ್ಪಿಕೊಳ್ಳುವಂತೆ ಆಮಿಷವೊಡ್ಡಿರುವುದು ಬಹಿರಂಗವಾಗಿದೆ.

ಆರೋಪಿಗಳಲ್ಲಿ ಮೂವರಿಗೆ 30 ಲಕ್ಷ ರೂ. ಆಮಿಷವೊಡ್ಡಿ ಪೊಲೀಸ್ ಠಾಣೆಗೆ ತೆರಳಿ ತಪ್ಪೊಪ್ಪಿಕೊಳ್ಳಲು ದರ್ಶನ್ ಸೂಚನೆ ನೀಡಿದ್ದರು ಎಂದು ವಿಚಾರಣೆ ವೇಳೆ ಆರೋಪಿಗಳು ಬಾಯಿಬಿಟ್ಟಿದ್ದಾರೆ.

ಅಲ್ಲದೇ ಈ 13 ಮಂದಿ ಆರೋಪಿಗಳಲ್ಲದೇ ಇನ್ನೊಬ್ಬ ಮಹಿಳೆ ಅನು ಸೇರಿ ನಾಲ್ವರು ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂಬುದು ತನಿಖೆ ವೇಳೆ ಬಹಿರಂಗಗೊಂಡಿದೆ. ಆ ನಾಲ್ವರಿಗಾಗಿ ಪೊಲೀಸರು ಬಲೆಬೀಸಿದ್ದಾರೆ. ಆರೋಪಿ ಗಳ ಪ್ರತ್ಯೇಕ ವಿಚಾರಣೆ ವೇಳೆ ಒಬ್ಬೊಬ್ಬರು ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ. ಈ ವೇಳೆ ಒಬ್ಬ ಆರೋಪಿ ದರ್ಶನ್ ಕೂಡ ರೇಣುಕಾಸ್ವಾಮಿ ಮರ್ಮಾಂಗಕ್ಕೆ ಒದ್ದು ಗಂಭೀರ ಗಾಯಗೊಳ್ಳುವಂತೆ ಮಾಡಿದ್ದಾರೆಂಬ ಅಂಶದ ಬಗ್ಗೆಯೂ ಉಲ್ಲೇಖಿಸಿದ್ದಾನೆ ಎನ್ನಲಾಗಿದೆ. ➡ 9

ನಿದ್ದೆಯಿಲ್ಲದೆ ರಾತ್ರಿ ಕಳೆದ ದರ್ಶನ್

ಮಂಗಳವಾರ ರಾತ್ರಿ ಆರೋಪಿಗಳಿಗೆ ತಿನ್ನಲು ದೊನ್ನೆ ಬಿರಿಯಾನಿ ಹಾಗೂ ಮಲಗಲು ತಲೆದಿಂಬನ್ನು ಪೊಲೀಸರೆ ವ್ಯವಸ್ಥೆ ಮಾಡಿದ್ದರು. ಒಂದು ಕೋಣೆಯಲ್ಲಿ ಮೂವರು ಇತರ ಆರೋಪಿಗಳ ಜತೆ ದರ್ಶನ್‌ಗೂ ಮಲಗಲು ವ್ಯವಸ್ಥೆ ಮಾಡಲಾಗಿತ್ತು. ಆದರೆ, ದರ್ಶನ್ ಸೊಳ್ಳೆ ಕಾಟ, ಬಂಧನವಾದ ಸಂಕಟ ಸೇರಿ ಇತರ ಚಿಂತೆಯಿಂದ ಆಗಾಗ ಎದ್ದು ಕುಳಿತುಕೊಳ್ಳುತ್ತಿದ್ದರು. ಮುಂಜಾನೆವರೆಗೂ ಅವರ ಪಾಡು ಇದೇ ಆಗಿತ್ತು ಎನ್ನಲಾಗಿದೆ.

ಬಿತ್ತನೆ ಬೀಜ, ಗೊಬ್ಬರಕ್ಕೆ ಅನ್ನದಾತರ ಅಲೆದಾಟ

ರಸಗೊಬ್ಬರ ಸಂಗ್ರಹಕ್ಕಿಲ್ಲ ಆದ್ಯತೆ

• ಕಿರಣ ಮಾಸಣಗಿ

ಹಾವೇರಿ: ಪ್ರಸ್ತುತ ಮಳೆಗಾಲ ಆರಂಭಗೊಂಡಿದ್ದು, ರೈತರು ಬಿಡುವಿಲ್ಲದ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಒಂದೆಡೆ ಜಮೀನುಗಳನ್ನು ಹಸನು ಮಾಡಿ ಬಿತ್ತನೆ ಕಾರ್ಯವನ್ನು ಪೂರ್ಣಗೊಳಿಸಬೇಕಿದೆ. ಇನ್ನೊಂದೆಡೆ ಅವಶ್ಯಕವಾದ ಬಿತ್ತನೆ ಬೀಜ, ಬೀಜೋಪಚಾರ, ಗೊಬ್ಬರಗಳನ್ನು ಸಂಗ್ರಹಿಸಬೇಕಿದೆ. ಇದರಲ್ಲೂ ಇತ್ತೀಚಿನ ದಿನಗಳಲ್ಲಿ ಬೀಜ ಮತ್ತು ಗೊಬ್ಬರವನ್ನು ಗುಣಮಟ್ಟದ್ದೆ ಅಥವಾ ಅಲ್ಲವೆ ಎಂಬುದನ್ನು ಖಾತ್ರಿಪಡಿಸಿಕೊಂಡು ತರುವ ಅನಿವಾರ್ಯತೆ ಎದುರಾಗಿದೆ.

ಇದೇ ಹೊತ್ತಿನಲ್ಲಿ ಇದೀಗ ರೈತರು ಈ ಬಾರಿ ಸರ್ಕಾರದ ಬಫರ್ ಜೋನ್ ನಂಬಿಕೊಳ್ಳುವಂತೆಯೇ ಇಲ್ಲ, ಸರ್ಕಾರದ ಬಳಿ ದುಡ್ಡಿಲ್ಲ, ಇನ್ನ್ಯಾವಾಗ ಬಫರ್ ಜೋನ್ ಎಂದು ರೈತರೆ ತಮ್ಮ ಅಸಮಾಧಾನ ಹೊರಹಾಕುವ ಜತೆಗೆ ರಾಜ್ಯ ಸರ್ಕಾರ ನಮ್ಮ ಬೆಳೆ ಪರಿಹಾರವನ್ನೂ ನೀಡುತ್ತಿಲ್ಲ, ಬೆಳೆ ವಿಮೆಯಲ್ಲೂ ತಾರತಮ್ಯ ನಡೆದಿದೆ. ಇದೀಗ ಗೊಬ್ಬರವೂ ಸಮರ್ಪಕವಾಗಿ ಸಿಗದೇ ರೈತರು ರಾಜ್ಯ ಸರ್ಕಾರವನ್ನು ರೈತರ ನಿರ್ಲಕ್ಷ್ಯ ಧೋರಣೆಯನ್ನೂ ಶಪಿಸುತ್ತಿದ್ದಾರೆ. ➡ 9

ಸರ್ಕಾರದ ಬಳಿ ಹಣವಿಲ್ಲವೆ?

ಈಗಾಗಲೇ ಗ್ಯಾರಂಟಿಗಳನ್ನು ಪೋಷಿಸುವ ನೆಪದಲ್ಲಿ ರಾಜ್ಯ ಸರ್ಕಾರ ರಾಜ್ಯದ ಜನರ ಮೇಲೆ ಹಲವು ತೆರಿಗೆಗಳನ್ನು ಹೆಚ್ಚಳ ಮಾಡಿದೆ. ಇನ್ನು ರೈತರಿಗೆ ಬೆಳೆ ಪರಿಹಾರ ನೀಡಿಲ್ಲ, ಇದರೊಂದಿಗೆ ರೈತರಿಗೆ ಬಿತ್ತನೆ ವೇಳೆಯಲ್ಲಿ ಅನುಕೂಲವಾಗಲಿ ಎಂಬ ಕಾರಣಕ್ಕೆ ರೂಪಿತವಾಗಿದ್ದ ಬಫರ್ ಜೋನ್ ವ್ಯವಸ್ಥೆಯನ್ನೇ ಕೈಬಿಟ್ಟಿದೆ. ಇದಕ್ಕೆ ಕಾರಣವೇನೆಂದು ಹುಡುಕಾಟ ನಡೆಸಿದರೆ ಎಲ್ಲಾ ರೈತರದ್ದು ಒಂದೇ ಉತ್ತರ? ಇದಕ್ಕಾಗಿ ಸರ್ಕಾರದ ಬಳಿ ಹಣವಿಲ್ಲ. ➡ 9

ಬೆಳ್ಳಿ, ಬಂಗಾರ (ಬೆಂಗಳೂರು) ಬೆಳ್ಳಿ: 90,750 (90,250) ಅಪರಂಜಿ ಚಿನ್ನ: 72,160 (71,840) ಆಭರಣ ಚಿನ್ನ: 66,150 (65,850) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,606 (149↑) ಎನ್‌ಎಸ್‌ಇ 23,322 (58↑) $1 = ₹83.48

ರಾಮಬಾಣ

ನಲವತ್ತೊಂದು ಭಾರತೀಯರ ಸಜೀವ ದಹನ

ಇನ್ನು ಕೆಲವರಿಗೆ ಸುಟ್ಟಗಾಯಗಳಾಗಿವೆ. ದಟ್ಟ ಹೊಗೆಯಿಂದ ಉಸಿರಾಟದ ಸಮಸ್ಯೆಯಾಗಿ ಕೆಲವರು ಮೃತಪಟ್ಟಿದ್ದಾರೆಂದು ವರದಿಯಾಗಿದೆ. ಕಟ್ಟಡವು ಎನ್‌ಬಿಟಿಸಿ ಸಮೂಹದ ಒಡೆತನದಲ್ಲಿದೆ, ಇದನ್ನು ಮಲಯಾಳಿ ಉದ್ಯಮಿ ಕೆ.ಜಿ. ಅಬ್ರಹಾಂ ನಡೆಸುತ್ತಿದ್ದಾರೆ. ಎನ್‌ಬಿಟಿಸಿಯ ಸೂಪರ್‌ಮಾರ್ಕೆಟ್‌ನ ನೌಕರರು ಸಹ ಕಟ್ಟಡದಲ್ಲಿ ವಾಸಿಸುತ್ತಿದ್ದರು. ಆಂತರಿಕ ಮತ್ತು ರಕ್ಷಣಾ ಸಚಿವಾಲಯಗಳ ಮೇಲ್ವಿಚಾರಣೆಯ ಉಪ ಪ್ರಧಾನಿ ಶೇಖ್ ಫಹಾದ್ ಯೂಸುಫ್ ಸೌದ್ ಅಲ್-ಸಬಾಹ್ ಅವರು ಸ್ಥಳಕ್ಕೆ ಭೇಟಿ ನೀಡಿ ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಅಂತೆಯೇ ಕುವೈತ್‌ನಲ್ಲಿರುವ ಭಾರತೀಯ ರಾಯಭಾರಿ ಆದರ್ಶ್ ಸ್ವೈಕಾ ಅಲ್-ಅದಾನ್ ಆಸ್ಪತ್ರೆಗೆ ಭೇಟಿ ನೀಡಿ ಸಂತ್ರಸ್ತರನ್ನು ಭೇಟಿಯಾಗಿದ್ದಾರೆ.

ಸ್ಟಾಲಿನ್ ಪ್ರತಿಕ್ರಿಯೆ: ಗಾಯಾಳುಗಳಲ್ಲಿ ತಮಿಳರು ಕೂಡ ಇದ್ದಲ್ಲಿ, ಗಾಯಾಳು ಬಗ್ಗೆ ತ್ವರಿತವಾಗಿ ಮಾಹಿತಿ ಪಡೆಯುವ ಮೂಲಕ ಅಗತ್ಯ ವೈದ್ಯಕೀಯ ನೆರವು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಅನಿವಾಸಿ ತಮಿಳರ ಪುನರ್ವಸತಿ ಮತ್ತು ಕಲ್ಯಾಣ ಕಮಿಷನರೇಟ್‌ಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೂಚನೆ ನೀಡಿದ್ದಾರೆ.

ದುರಂತಕ್ಕೆ ಉದ್ಯಮಿಗಳ ದುರಾಸೆ ಕಾರಣ

ಘಟನೆಗೆ ಸಂಬಂಧಿಸಿದಂತೆ ಶೇಖ್ ಫಹಾದ್ ಅವರು ರಿಯಲ್ ಎಸ್ಟೇಟ್ ಮಾಲೀಕರನ್ನು ದೂಷಿಸಿದ್ದಾರೆ. ಅವರ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣವಾಗಿದೆ. ದುರದೃಷ್ಟವಶಾತ್, ರಿಯಲ್ ಎಸ್ಟೇಟ್ ಮಾಲೀಕರ ದುರಾಸೆ ಇಂತಹ ಘಟನೆಗೆ ಕಾರಣವಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಘಟನಾ ಸ್ಥಳಕ್ಕೆ ರಾಯಭಾರಿ

ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಆಳವಾದ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಮತ್ತು ಪೂರ್ಣವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುತ್ತೇನೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲರಿಗೂ ನಮ್ಮ ರಾಯಭಾರ ಕಚೇರಿಯು ಸಂಪೂರ್ಣ ಸಹಾಯವನ್ನು ನೀಡುತ್ತದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಪ್ರಧಾನಿ ಮೋದಿ ಸಂತಾಪ: ಘಟನೆಯಿಂದ ತೀವ್ರ ದುಃಖಿತನಾಗಿದ್ದೇನೆ. ನನ್ನ ಆಲೋಚನೆಗಳು ತಮ್ಮ ಹತ್ತಿರದ ಮತ್ತು ಆತ್ಮೀಯರನ್ನು ಕಳೆದುಕೊಂಡಿರುವ ಎಲ್ಲರೊಂದಿಗೆ ಇವೆ. ಗಾಯಾಳುಗಳು ಬೇಗ ಚೇತರಿಸಿಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಮತ್ತು ಪೀಡಿತರಿಗೆ ಸಹಾಯ ಮಾಡಲು ಅಲ್ಲಿನ ಅಧಿಕಾರಿಗಳೊಂದಿಗೆ ಕೆಲಸ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಹಾಯವಾಣಿ: ಭಾರತೀಯ ರಾಯಭಾರ ಕಚೇರಿ ತುರ್ತು ಸಹಾಯವಾಣಿಯನ್ನು ಸ್ಥಾಪಿಸಿದೆ. ನೆರವು ಮತ್ತು ಮಾಹಿತಿಗಾಗಿ ತುರ್ತು ಸಹಾಯವಾಣಿ ಸಂಖ್ಯೆ +965-65505246ಕ್ಕೆ ಕರೆ ಮಾಡಬಹುದು. ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಲು ರಾಯಭಾರ ಕಚೇರಿಯು ಬದ್ಧವಾಗಿದೆ ಎಂದು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದೆ.

ಕ್ಯಾಸಿನೋಗಳಿಗೆ ಅನುಮತಿ ಇಲ್ಲ

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಹೇಳಿಕೆ

ಬೆಂಗಳೂರು: ರಾಜ್ಯದ ಕರಾವಳಿ ಭಾಗದ ಕಡಲತೀರಗಳಲ್ಲಿ ಕ್ಯಾಸಿನೋಗಳಿಗೆ ಅನುಮತಿ ನೀಡುವ ಯಾವುದೇ ಚಿಂತನೆ ಇಲ್ಲ, ಅವುಗಳನ್ನು ನಾಡಿನ ಸಂಸ್ಕೃತಿ ಉಳಿಸುವಂತಹ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಹೇಳಿದ್ದಾರೆ.

ಬುಧವಾರ ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದ ಕರಾವಳಿ ಪ್ರದೇಶದಲ್ಲಿ ದೇವಾಲಯಗಳು, ಪ್ರವಾಸಿತಾಣಗಳು ಇವೆ. ರಾಜ್ಯಕ್ಕೆ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಇದಕ್ಕೆ ವ್ಯತಿರಿಕ್ತವಾಗದ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ಕ್ಯಾಸಿನೋ ಚಟುವಟಿಕೆ ನಡೆಸುವ ಯಾವುದೇ ಉದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕ ರಾಜ್ಯದ ಸುಮಾರು 320 ಕಿ.ಮೀ. ಕಡಲ ತೀರ ಪ್ರದೇಶವನ್ನು ಹೊಂದಿದ್ದು, ಅಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಇದಕ್ಕಾಗಿ 40 ಸ್ಥಳಗಳನ್ನು ಗುರುತಿಸಲಾಗಿದೆ. ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎಂಟು ದತ್ತು ಯೋಜನೆಗಳಿಗೆ ಒಪ್ಪಂದ: ರಾಜ್ಯದ ಸ್ಮಾರಕಗಳ ಸಂರಕ್ಷಣೆ ಮತ್ತು ಮೂಲಭೂತ ಸೌಕರ್ಯಗಳ ಒದಗಿಸಿ ಸ್ಮಾರಕಗಳನ್ನು ಅಭಿವೃದ್ಧಿಪಡಿಸಲು ದತ್ತು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ ಎಂಟು ದತ್ತು ಯೋಜನೆಗಳ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಯೋಜನೆಯಡಿ 272 ಸ್ಮಾರಕಗಳ ಸ್ವೀಕಾರಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಿಜಯಪುರ, ಶ್ರೀರಂಗಪಟ್ಟಣ, ಬೇಲೂರು, ಹಳೇಬೀಡು ಸೇರಿದಂತೆ ರಾಜ್ಯದ ವಿವಿಧೆಡೆ 388 ಎಕರೆ ಜಮೀನುಗಳಲ್ಲಿ ಪ್ರವಾಸಿಗರಿಗೆ ಅಗತ್ಯ ಇರುವ ಸೌಲಭ್ಯಗಳನ್ನು 595 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಸಾಹಸ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಸಾಹಸ ಪ್ರವಾಸಿ ಚಟುವಟಿಕೆಗಳನ್ನು ಕೈಗೊಳ್ಳಲು ಪಿಪಿಪಿ ಮಾದರಿಯಲ್ಲಿ 16 ಜಿಲ್ಲೆಗಳಲ್ಲಿ ಒಟ್ಟು 18 ಜಲಾಶಯಗಳ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಎಂದರು.

ಜೂ.15-16: ದಕ್ಷಿಣ ಭಾರತ ಉತ್ಸವ

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗೆ ಹೆಚ್ಚಿನ ಉತ್ತೇಜನ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚು ಒತ್ತು ನೀಡುವ ಉದ್ದೇಶದಿಂದ ಜೂ.15 ಮತ್ತು 16ರಂದು ನಗರದ ಅರಮನೆ ಮೈದಾನದಲ್ಲಿ ಎಫ್‌ಕೆಸಿಸಿಐ ಸಹಯೋಗದೊಂದಿಗೆ ದಕ್ಷಿಣ ಭಾರತ ಉತ್ಸವ ಹಮ್ಮಿಕೊಳ್ಳಲಾಗಿದೆ. ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು ಮತ್ತು ಉತ್ತರ ಭಾರತದ ಹಲವು ರಾಜ್ಯಗಳು ಸಮಾವೇಶದಲ್ಲಿ ಭಾಗವಹಿಸಲಿವೆ ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದರು. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹಲವು ಪಾಲುದಾರರು ಹೂಡಿಕೆ ಚಟುವಟಿಕೆಗಳನ್ನು ಪ್ರಾರಂಭಿಸಲು ಸರ್ಕಾರದೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಲು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಈಗಾಗಲೇ ರೋಡ್ ಶೋ ವೇಳೆ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ವ್ಯಕ್ತಪಡಿಸಿದವರಿಂದ ಆಸಕ್ತಿ ಪತ್ರವನ್ನು ಸ್ವೀಕರಿಸಲಾಗಿದೆ. ಈಗಾಗಲೇ ಸುಮಾರು 500 ಕೋಟಿ ರೂ. ಹೂಡಿಕೆ ಆಸಕ್ತಿ ಪತ್ರ ಸ್ವೀಕರಿಸಲಾಗಿದೆ. ಅಲ್ಲದೇ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಂದ ಈ ಸಮಾವೇಶದ ಮೂಲಕ ಇನ್ನೂ 500 ಕೋಟಿ ರೂ. ಹೂಡಿಕೆಯನ್ನು ನಿರೀಕ್ಷಿಸಲಾಗಿದೆ ಎಂದರು.

ಪ್ರಕರಣ ರದ್ದು ಕೋರಿ ಹೈ ಮೆಟ್ಟಿಲೇರಿದ ಬಿಎಸ್‌ವೈ

- ಪೋಕ್ಸೋ ಪ್ರಕರಣದ ವಿಚಾರಣೆಗೆ ಹಾಜರಾಗಲು ಸಿಐಡಿ ನೋಟಿಸ್



ಬೆಂಗಳೂರು: ಕಳೆದ ಮಾರ್ಚ್‌ನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ಪೋಕ್ಸೋ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸಿಐಡಿ ನೋಟಿಸ್ ನೀಡಿದ ಬೆನ್ನಲ್ಲೇ ಅವರು, ಪ್ರಕರಣ ರದ್ದು ಮಾಡುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಅರ್ಜಿಯಲ್ಲಿ ತಮ್ಮ ವಿರುದ್ಧ ದಾಖಲಾದ ಪೋಕ್ಸೋ ಪ್ರಕರಣ ಆಧಾರ ರಹಿತವಾಗಿದೆ. ನಾನು ಯಾವುದೇ ಕಾನೂನುಬಾಹಿರ ಕೃತ್ಯ ಎಸಗಿಲ್ಲ, ನನ್ನ ವಿರುದ್ಧ ದೂರು ನೀಡಿರುವ ಮಹಿಳೆಗೆ ನಾಯಕರ ವಿರುದ್ಧ ದೂರು ನೀಡುವುದೇ ಹವ್ಯಾಸವಾಗಿತ್ತು. ಪ್ರಕರಣ ದಾಖಲಾದ ನಂತರ ಏ.12ರಂದು ಪೊಲೀಸರ ವಿಚಾರಣೆಗೆ ಹಾಜರಾಗಿದ್ದೆ. ಪೊಲೀಸರು ಹೇಳಿಕೆ ದಾಖಲಿಸಿಕೊಳ್ಳದೇ ಧ್ವನಿ ಮಾದರಿ ಮಾತ್ರ ಸಂಗ್ರಹಿಸಿದ್ದರು. ದೂರಿನಲ್ಲಿ ಅಪರಾಧದ ಅಂಶಗಳಿಲ್ಲ, ಆದ್ದರಿಂದ ಪ್ರಕರಣ ರದ್ದು ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಇದರ ವಿಚಾರಣೆ ಇನ್ನೆರಡು ದಿನಗಳಲ್ಲಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ಸಿಐಡಿ ತನಗೆ ನೀಡಿದ್ದ ನೋಟಿಸ್‌ಗೆ ವಕೀಲರ ಮೂಲಕ ಪ್ರತಿಕ್ರಿಯಿಸಿರುವ ಯಡಿಯೂರಪ್ಪ, ತಾನು ಸದ್ಯ ಪೂರ್ವನಿಯೋಜಿತ ಕಾರ್ಯಕ್ರಮದಂತೆ ದಿಲ್ಲಿಯಲ್ಲಿರುವುದರಿಂದ ವಿಚಾರಣೆಗೆ ಕಾಲಾವಕಾಶ ಕೋರಿದ್ದಾರೆ.

ಏನಿದು ಪ್ರಕರಣ? ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿ ಯಡಿ ಯೂರಪ್ಪರ ಬಳಿ ದೂರು ನೀಡಲು ಸಂತ್ರಸ್ತ ಬಾಲಕಿಯೊಬ್ಬಳು ತನ್ನ ತಾಯಿಯೊಂದಿಗೆ ಯಡಿಯೂರಪ್ಪರ ಮನೆಗೆ ಬಂದಿದ್ದಳು. ಈ ವೇಳೆ ಯಡಿಯೂರಪ್ಪ ಆ ಬಾಲಕಿಯನ್ನು ತಮ್ಮ ಕೋಣೆಗೆ ಕರೆಸಿಕೊಂಡು ಕಿರುಕುಳ ನೀಡಿದ್ದಾರೆ. ಈ ಸಂದರ್ಭ ತನ್ನ ಮಗಳು ಕಿರುಚಿಕೊಂಡು ಹೊರಗೋಡಿ ಬಂದಿದ್ದಾಳೆ ಎಂಬುದು ಆಕೆಯ ತಾಯಿಯ ಆರೋಪವಾಗಿತ್ತು. ಇದರ ವಿರುದ್ಧ ಆಕೆಯ ತಾಯಿ ಮಾ.14ರಂದು ಸದಾಶಿವನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಯಡಿಯೂರಪ್ಪರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಮುಸ್ಲಿಂ ದ್ವೇಷ ಮೋದಿಯ ಡಿಎನ್‌ಎದಲ್ಲೇ ಇದೆ - ಓವೈಸಿ

- ಅವರದು ಮುಸ್ಲಿಂ ದ್ವೇಷ ಅಲ್ಲ, ದೇಶದ್ರೋಹಿಗಳ ಮೇಲೆ ಮಾತ್ರ ರೋಷ. ನಿಮ್ಮದು ಮುಸ್ಲಿಂ ಪ್ರೀತಿ ಅಲ್ಲ, ಮುಸ್ಲಿಂ ಓಟ್ ಬ್ಯಾಂಕ್ ಕಳೆದುಕೊಳ್ಳುವ ಭೀತಿ!

ಆರೋಪಿಗಳಿಗೆ ನಟ ಆಮಿಷ

ಘಟನಾ ಸ್ಥಳದಲ್ಲಿ ಪಂಚನಾಮೆ: ಮೊದಲೆರಡು ಆರೋಪಿಗಳಾದ ದರ್ಶನ್, ಪವಿತ್ರಾಗೌಡ ಸೇರಿ ಇತರ ಆರೋಪಿಗಳನ್ನು ಕೊಲೆ ನಡೆದ ಪಟ್ಟಣಗೆರೆ ಜಯಣ್ಣ ಅವರ ಶೆಡ್ ಬಳಿ ಹಾಗೂ ಶವ ಸಿಕ್ಕಿದ ಸ್ಥಳಗಳಿಗೆ ಬುಧವಾರ ಕರೆದೊಯ್ದು ಪಂಚನಾಮೆ ನಡೆಸಲಾಯಿತು. ಒಂದೂವರೆ ತಾಸಿಗೂ ಅಧಿಕ ಕಾಲ ನಡೆದ ಈ ಮಹಜರಿನ ಸಂದರ್ಭ ಕೊಲೆ ಮಾಡಿದ ರೀತಿ, ಹಲ್ಲೆ ನಡೆಸಿದ ವಿವರಗಳನ್ನು ಕಲೆ ಹಾಕಲಾಯಿತು. ರಕ್ತದ ಕಲೆ ಇರುವ ಬಟ್ಟೆ, ಮೃತನ ಕೂದಲು ಸೇರಿ ಹಲವು ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದರು. ಮತ್ತೊಂದೆಡೆ ಶವ ಸಾಗಿಸುವ ಕೃತ್ಯಕ್ಕೆ ಬಳಸಲಾಗಿದ್ದ ಸ್ಕಾರ್ಪಿಯೋ ವಾಹನ, ದರ್ಶನ್ ಅವರ ಜೀಪ್ ಹಾಗೂ ಅದರಲ್ಲಿದ್ದ ಮದ್ಯದ ಬಾಟಲಿಯನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಚಲನಚಿತ್ರ ವಾಣಿಜ್ಯ ಮಂಡಳಿ ವಿರುದ್ಧ ಆಕ್ರೋಶ: ದರ್ಶನ್ ವಿರುದ್ಧ ಕೊಲೆ ಆರೋಪ ಕೇಳಿಬಂದರೂ ಅವರ ವಿರುದ್ಧ ಚಲನಚಿತ್ರ ಮಂಡಳಿ ಕ್ರಮಕ್ಕೆಗೊಂಡಿಲ್ಲ ಎಂದು ಚಲನಚಿತ್ರ ಮಂಡಳಿ ಎದುರು ನೂರಾರು ಮಂದಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದರ್ಶನ್ ವಿರುದ್ಧದ ಕ್ರಮದ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್ ಪ್ರತಿಕ್ರಿಯಿಸಿ, ಸದ್ಯ ವಿಚಾರಣೆ ನಡೆಯುತ್ತಿದೆ. ಚಾರ್ಜ್‌ಶೀಟ್ ಆದ ಬಳಿಕ ಅಪರಾಧಿ ಯಾರು ಎಂಬುದು ತಿಳಿಯುತ್ತದೆ. ಆಗ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ. ನಟ ಜಗ್ಗೇಶ್, ಚೇತನ್, ರಮ್ಯಾ ಸೇರಿ ಹಲವರು ಈ ಕೃತ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಚ್‌ಎಸ್‌ಆರ್‌ಪಿ: ಸೆಪ್ಟೆಂಬರ್‌ವರೆಗೆ ಗಡುವು ವಿಸ್ತರಣೆ

ಬೆಂಗಳೂರು: 2019ಕ್ಕೂ ಮೊದಲಿನ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲು ಆಗಸ್ಟ್ ಅಥವಾ ಸೆಪ್ಟೆಂಬರ್‌ವರೆಗೆ ಗಡುವು ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅನುಮತಿಸಿದೆ. ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ವಿಧಿಸಲಾಗಿರುವ ಗಡುವು ವಿಸ್ತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಬಿಎನ್‌ಡಿ ಎನರ್ಜಿ ಲಿ. ಹಾಗೂ ಮತ್ತಿತರರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾ.ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ಬುಧವಾರ ನಡೆಸಿತು. ಹೈಕೋರ್ಟ್‌ನ ರಜಾಕಾಲೀನ ಪೀಠವು ಮೇ 21ರಂದು ಮಧ್ಯಂತರ ಆದೇಶ ನೀಡಿದ್ದ ರಜಾಕಾಲೀನ ಪೀಠ ಎಚ್‌ಎಸ್‌ಆರ್‌ಪಿ ಅಳವಡಿಸದಿರುವುದಕ್ಕೆ ಅರ್ಜಿದಾರರ ವಿರುದ್ಧ ಯಾವುದೇ ದುರುದ್ದೇಶಿತ ಕ್ರಮಕ್ಕೆಗೊಳ್ಳಬಾರದು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು. ಈ ಬಾರಿಯ ವಿಚಾರಣೆ ವೇಳೆ, ರಾಜ್ಯ ಸರ್ಕಾರವು ಆಗಸ್ಟ್-ಸೆಪ್ಟೆಂಬರ್‌ವರೆಗೆ ಎಚ್‌ಎಸ್‌ಆರ್‌ಪಿ ಅಳವಡಿಕೆ ಗಡುವು ವಿಸ್ತರಿಸಲಾಗುವುದು ಎಂದು ತಿಳಿಸಿದೆ.

ಜೂ.21ಕ್ಕೆ ಶ್ರೀನಗರದಲ್ಲಿ ಮೋದಿ ಯೋಗ

ಜೂ. 21ರ ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆ ಯೋಗವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸುವ ಬದ್ಧತೆಯನ್ನು ಪುನರುಚ್ಚರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಜನತೆಗೆ ಕರೆ ನೀಡಿದ್ದಾರೆ. ಯೋಗ ಏಕತೆ ಮತ್ತು ಸಾಮರಸ್ಯದ ಅಭ್ಯಾಸ ಆಚರಿಸುತ್ತದೆ ಎಂದು ಮೋದಿ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಯೋಗ ಸಾಂಸ್ಕೃತಿಕ ಮತ್ತು ಭೌಗೋಳಿಕ ಗಡಿಗಳನ್ನು ಮೀರಿದ್ದು, ಸಮಗ್ರ ಯೋಗಕ್ಷೇಮದ ಅನ್ವೇಷಣೆಯಲ್ಲಿ ಜಗತ್ತಿನಾದ್ಯಂತ ಲಕ್ಷಾಂತರ ಜನರನ್ನು ಒಂದುಗೂಡಿಸಿದೆ ಎಂದು ಹೇಳಿದ್ದಾರೆ.

ಆಂಧ್ರಕ್ಕೆ ಎನ್‌ಡಿಎ ಆಳ್ವಿಕೆ

ಇದಕ್ಕೆ ಪ್ರತಿಯಾಗಿ ನಾಯ್ಡು ಮೋದಿ ಉಪಸ್ಥಿತಿಗಾಗಿ ಧನ್ಯವಾದ ಅರ್ಪಿಸಿದ್ದಾರೆ. ರಾಜ್ಯದಲ್ಲಿ ಇತ್ತೀಚೆಗೆ ಏಕಕಾಲದಲ್ಲಿ ನಡೆದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಒಟ್ಟು 175 ವಿಧಾನಸಭಾ ಸ್ಥಾನಗಳಲ್ಲಿ 164 ಮತ್ತು ಒಟ್ಟು 25 ಲೋಕಸಭಾ ಸ್ಥಾನಗಳಲ್ಲಿ 21 ಸ್ಥಾನಗಳನ್ನು ಗೆಲ್ಲುವ ಮೂಲಕ ಟಿಡಿಪಿ, ಬಿಜೆಪಿ ಮತ್ತು ಜನಸೇನಾ ಒಳಗೊಂಡ ಎನ್‌ಡಿಎ ಭರ್ಜರಿ ಗೆಲುವು ಸಾಧಿಸಿದೆ.

ಒಡಿಶಾ ಸಿಎಂ ಆಗಿ ಮಾಝಿ ಪ್ರಮಾಣ

11 ಸಚಿವರಿಗೆ ಸಂಪುಟ ದರ್ಜೆ ಮತ್ತು ಐವರಿಗೆ ರಾಜ್ಯ ದರ್ಜೆ(ಸ್ವತಂತ್ರ ನಿರ್ವಹಣೆ) ಹೊಣೆ ನೀಡಲಾಗಿದೆ. 16 ಮಂದಿ ಸಚಿವರಲ್ಲಿ ಎಂಟು ಮಂದಿ ಇದೇ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ ಎಂಬುದು ವಿಶೇಷ. ಪ್ರಮಾಣ ಸ್ವೀಕಾರ ಸಮಾರಂಭ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು, ಆಂಧ್ರ ಪ್ರದೇಶದಿಂದ ನೇರವಾಗಿ ಭುವನೇಶ್ವರಕ್ಕೆ ಬಂದಿಳಿದರು. ಪ್ರಗತಿ ಮೈದಾನದಲ್ಲಿ ಕಾರ್ಯಕ್ರಮ ನಡೆದಿದ್ದು, ಮೋದಿ ಜತೆಗೆ, ನವೀನ್ ಪಟ್ನಾಯಕ್ ಕೂಡ ಸಮಾರಂಭದ ಆಕರ್ಷಣೆಯಾಗಿದ್ದರು.

ಪಾಕ್ ಪರ ಘೋಷಣೆ: ಕೈದಿಗೆ ಏಟು

ಇಲ್ಲಿನ ಜೆಎಂಎಫ್‌ಸಿ ನಾಲ್ಕನೇ ನಂಬರಿನ ನ್ಯಾಯಾಲಯದ ಸಂಕೀರ್ಣದ ಎದುರೇ ನ್ಯಾಯಾಲಯ ದಲ್ಲಿ ನನ್ನ ಅಹವಾಲು ಸ್ವೀಕರಿಸುತ್ತಿಲ್ಲ ಎಂದು ಆಕ್ರೋಶ ಗೊಂಡು ಏಕಾಏಕಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾನೆ. ಆರೋಪಿ ಘೋಷಣೆ ಕೂಗುವುದೇ ತಡ ಅಲ್ಲಿಯೇ ಇದ್ದ ವಕೀಲರು ಮತ್ತು ಜನರು ಹೊಡೆಯಲು ಆರಂಭಿಸಿದ್ದಾರೆ. ಅಷ್ಟರಲ್ಲಿಯೇ ಪೊಲೀಸರು ಕೈದಿಯನ್ನು ರಕ್ಷಿಸಿ ಎಪಿಎಂಸಿ ಠಾಣೆಗೆ ಕರೆದೊಯ್ದಿದ್ದಾರೆ. ಅಲ್ಲಿ ಡಿಸಿಪಿ ರೋಹನ್ ಜಗದೀಶ್ ಹಾಗೂ ಪೊಲೀಸ್ ಅಧಿಕಾರಿಗಳು ಕೈದಿಯನ್ನು ವಿಚಾರಣೆಗೊಳಪಡಿಸಿ ಸಂಪೂರ್ಣ ಮಾಹಿತಿ ಕಲೆ ಹಾಕಿದ್ದಾರೆ. ಅಲ್ಲದೇ, ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಸಚಿವ ಗಡ್ಕರಿಗೆ ಜೀವ ಬೆದರಿಕೆ ಹಾಕಿದ್ದ ಭೂಪ!

ಈ ಪ್ರಕರಣಕ್ಕೆ ಸಂಬಂಧಿಸಿದಂತೆಯೇ ವಿಚಾರಣೆಗಾಗಿ ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈ ಸಂದರ್ಭದಲ್ಲಿಯೇ ಪಾಕ್ ಪರ ಘೋಷಣೆ ಕೂಗಿ ರಾದ್ಧಾಂತ ಮಾಡಿದ್ದಾನೆ.

ಇಸ್ಲಾಂಗೆ ಮತಾಂತರ: ಕೇವಲ ಹದಿನಾಲ್ಕು ವರ್ಷದವನಿರುವಾಗಲೇ ಮಂಗಳೂರು ಬಿಟ್ಟು ಮುಂಬೈಗೆ ಹೋಗಿದ್ದ ಜಯೇಶ್ ಪೂಜಾರಿ, ಅಲ್ಲಿ ಕೆಲ ವರ್ಷಗಳ ಕಾಲ ಕೆಲಸ ಮಾಡಿದ ನಂತರ ಆತ ಹೋಗಿದ್ದು ಕೇರಳಕ್ಕೆ. ಅಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಮುಸ್ಲಿಂ ಸಂಘಟನೆಯೊಂದರ ಸದಸ್ಯನಾಗಿ ಕೆಲಸ ಮಾಡಿದ್ದ. ಬಳಿಕ ಅಲ್ಲಿಂದ ಬಂದು ಹಲವಾರು ಕೃತ್ಯಗಳಲ್ಲಿ ಭಾಗಿಯಾಗಿ ಪೊಲೀಸರ ಅತಿಥಿಯಾಗಿದ್ದ. ಹೀಗಾಗಿ, ಪಾಕ್ ಪರ ಘೋಷಣೆ ಕೂಗಿರುವವರ, ಆತನ ಉದ್ದೇಶ ಹಾಗೂ ಆತನ ಹಿಂದೆ ಯಾರ್ಯಾರಿದ್ದಾರೆಂಬುದನ್ನು ಪೊಲೀಸರು ಪತ್ತೆ ಹಚ್ಚಬೇಕಾಗಿದೆ.

ತನಿಖೆ ನಡೆಸುತ್ತೇವೆ: ಕಳೆದ 2018ರಲ್ಲಿ ಎಡಿಜಿಪಿ ಅಲೋಕಕುಮಾರ್ ಅವರಿಗೆ ಬೆದರಿಕೆ ಹಾಕಿದ್ದ ಶಾಕೀರ್ ಅಲಿಯಾಸ್ ಜಯೇಶ್ ಪೂಜಾರಿಯನ್ನು ನ್ಯಾಯಾಲಯಕ್ಕೆ ವಿಚಾರಣೆಗೆ ಕರೆ ತಂದಾಗ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದಾನೆ. ಈ ಹಿನ್ನೆಲೆಯಲ್ಲಿ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆಯ ಡಿಸಿಪಿ ಜಗದೀಶ್ ರೋಹನ್ ತಿಳಿಸಿದರು. ಬುಧವಾರ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಆರೋಪಿಯ ಸುದೀರ್ಘ ವಿಚಾರಣೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಕೀರ್ ಮೂಲತಃ ಮಂಗಳೂರು ಮೂಲದ ಆರೋಪಿ. ಎರಡು ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಎದುರಿಸುತ್ತಿರುವ ಈತ ಹಿಂಡಲಗಾ ಕಾರಾಗೃಹದಲ್ಲಿದ್ದಾನೆ. ಜಯೇಶ್ ಕೇರಳಕ್ಕೆ ಹೋಗಿ ಇಸ್ಲಾಂಗೆ ಮತಾಂತರವಾಗಿದ್ದಾನೆ. ಹೀಗಾಗಿ, ಪಾಕ್ ಪರ ಘೋಷಣೆ ಕೂಗಿರುವ ಬಗ್ಗೆ ಕೂಲಂಕಷ ತನಿಖೆ ಮಾಡುವುದಾಗಿ ಹೇಳಿದ್ದಾರೆ.

ರಸಗೊಬ್ಬರ ಸಂಗ್ರಹಕ್ಕಿಲ್ಲ ಆದ್ಯತೆ

ಏನಿದು ಬಫರ್ ಜೋನ್: ಪ್ರತಿ ಜಿಲ್ಲಾ ಹಂತದಲ್ಲಿ ಆಯಾ ಜಿಲ್ಲೆಯ ರೈತರಿಗೆ ಅಗತ್ಯದಷ್ಟು ಗೊಬ್ಬರವನ್ನು ಮಳೆಗಾಲಕ್ಕೂ ಮುನ್ನವೇ ಸರ್ಕಾರವೇ ಗೊಬ್ಬರ ಕಂಪನಿಗಳಿಂದ ಖರೀದಿಸಿ ಸರ್ಕಾರಿ ಗೋದಾಮುಗಳಲ್ಲಿ ಸಂಗ್ರಹಿಸಿ ಇಡುತ್ತಿತ್ತು. ಮಳೆ ಶುರುವಾದ ಬೆನ್ನಲ್ಲೇ ಬಿತ್ತನೆ ವೇಳೆಗೆ ಆಯಾ ಗ್ರಾಮಮಟ್ಟದಲ್ಲಿನ ಪ್ರಾಥಮಿಕ ಕೃಷಿ ಸಹಕಾರಿ ಸಂಘ ಮತ್ತು ಸೊಸೈಟಿಗಳಿಗೆ ಸರಬರಾಜು ಮಾಡಿ ಅದನ್ನು ರೈತರಿಗೆ ಮಾರಾಟ ಮಾಡಲಾಗುತ್ತಿತ್ತು. ಒಟ್ಟಾರೆ ಈ ವ್ಯವಸ್ಥೆಯನ್ನು ಬಫರ್ ಜೋನ್ ಎಂದು ಕರೆಯಲಾಗುತ್ತಿದೆ. ಇದು ಸುಮಾರು 15-20 ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಆದರೆ, ಈ ಬಾರಿ ಆಡಳಿತದಲ್ಲಿ ಇರುವ ಸರ್ಕಾರ ಈ ವ್ಯವಸ್ಥೆಗೆ ಕೊಕ್ ನೀಡಿದೆ.

ಸರ್ಕಾರದ ಬಳಿ ಹಣವಿಲ್ಲವೇ?

ಈ ಅಸಮಾಧಾನದ ನುಡಿ ಮಾತ್ರವಲ್ಲ, ಈ ಬಾರಿ ಸರ್ಕಾರ ರೈತರನ್ನು ಅತ್ಯಂತ ಕೇವಲವಾಗಿ ನಡೆಸಿಕೊಳ್ಳುತ್ತಿದೆ, ಮುಂದಿನ ದಿನಗಳಲ್ಲಿ ಇದಕ್ಕೆ ದುಬಾರಿ ಬೆಲೆಯನ್ನೇ ತೆತ್ತಬೇಕಾಗುತ್ತದೆ ಕಾದು ನೋಡಿ ಎಂಬ ಎಚ್ಚರಿಕೆ ನೀಡುತ್ತಿದ್ದಾರೆ. ಈಗಾಗಲೇ ಸರ್ಕಾರದ ಕೇಂದ್ರಬಿಂದು ಸಿಎಂ ಸಿದ್ದರಾಮಯ್ಯ ಚುನಾವಣೆ ವೇಳೆ ರೈತರಿಗೆ ಬರ ಪರಿಹಾರದ ಕುರಿತು ಮಾತನಾಡುವಾಗ ಬೆಳೆ ಪರಿಹಾರ ಕೊಡಿ ಎಂದು ಯಾರೂ ಕೇಳಿಲ್ಲ ಎಂಬ ಹೇಳಿಕೆ ರೈತವಲಯವನ್ನು ಕಂಗೆಡಿಸಿದೆ. ಜತೆಗೆ ಅವರ ಕಣ್ಣು ಕೆಂಪಾಗಿಸಿದೆ. ಇದರ ಜೊತೆಗೆ ಎನ್‌ಡಿಆರ್‌ಎಫ್ ಬೆಳೆ ಪರಿಹಾರ ಬಂದಾಗ ಅದರಲ್ಲೇ 2000 ರೂ. ಕಡಿಮೆ ಮಾಡಿದ್ದು, ಇದುವರೆಗೂ ಎಸ್‌ಡಿಆರ್‌ಎಫ್‌ನ ಬೆಳೆ ಪರಿಹಾರ ನೀಡದಿರುವುದು ಮತ್ತಷ್ಟು ಅಸಮಾಧಾನಕ್ಕೆ ಕಾರಣವಾಗಿದೆ. ಇದೀಗ ಗೊಬ್ಬರಕ್ಕೂ ಸಹ ರೈತರು ಹೋರಾಟ ಮಾಡಬೇಕಾದ ಸ್ಥಿತಿ ಎದುರಾಗಿದೆ.

> **ರಾಜ್ಯಾದ್ಯಂತ ಬಫರ್ ಜೋನ್ ಮೂಲಕ ಗೊಬ್ಬರ ಕೊಡಿ ಎಂಬ ರೈತರ ಬೇಡಿಕೆ ಇದ್ದು, ಇದಕ್ಕೆ ಸರ್ಕಾರ ಕ್ಯಾರೆ ಎನ್ನುತ್ತಿಲ್ಲ. ಇದಕ್ಕೆ ಸರ್ಕಾರದ ಬಳಿ ಹಣವೇ ಇಲ್ಲ. ಇನ್ನು ಕೃಷಿ ಅಧಿಕಾರಿಗಳು ಹೇಳುವ ಹೇಳಿಕೆಗೂ, ವಾಸ್ತವಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಇನ್ನು ರೈಲ್ವೆ ರೇಕ್ ಮೂಲಕ ಬಂದ ಗೊಬ್ಬರ ರೈತರಿಗೆ ಸಾಕಾಗುತ್ತಿಲ್ಲ. ಬಿತ್ತನೆ ವೇಳೆ ಗೊಬ್ಬರ ಸಿಗದೆ ಇದ್ದಲ್ಲಿ ಫಸಲಿನ ಇಳುವರಿ ಕುಂಠಿತಗೊಳ್ಳುತ್ತದೆ. ಸರ್ಕಾರ ತುರ್ತು ಗಮನ ಹರಿಸಲಿ.**
>
> ■ ಮಲ್ಲಿಕಾರ್ಜುನ ಬಳ್ಳಾರಿ, ಪ್ರಧಾನ ಕಾರ್ಯದರ್ಶಿ, ರೈತ ಸಂಘ

> **ರೈತರಿಗೆ ಅಗತ್ಯದಷ್ಟು ಗೊಬ್ಬರ ಈಗಾಗಲೇ ಸಂಗ್ರಹವಿದ್ದು, ಬೇಡಿಕೆ ಬಂದಲ್ಲಿ ಹಂಚಿಕೆ ಮಾಡಲಾಗುವುದು. ಉತ್ತಮ ಇಳುವರಿಗಾಗಿ ಯೂರಿಯಾ ಜತೆಗೆ ಕಾಂಪ್ಲೆಕ್ಸ್ ಸೇರಿಸಿ ಕೊಡುವುದರಿಂದ ಉತ್ತಮ ಫಸಲು ಪಡೆಯಬಹುದು.**
>
> ■ ಎ.ಮಂಜುನಾಥ, ಜಂಟಿ ಕೃಷಿ ನಿರ್ದೇಶಕ

ರಾಜ್ಯ, ಗಣಿಗಾರಿಕೆ ಯೋಜನೆಗೆ ಅಸ್ತು

ಅದಕ್ಕೂ ಮೊದಲು ಅಧಿಕಾರಿಗಳೊಂದಿಗಿನ ಸಮಾಲೋಚನಾ ಸಭೆಯಲ್ಲಿ ಉತ್ಪಾದನೆಯಲ್ಲಿ ಕ್ಷಮತೆ ತರಬೇಕು, ನಿಗದಿತ ಗುರಿಯನ್ನು ಮುಟ್ಟಬೇಕು ಎಂದು ಸಚಿವರು ಸೂಚನೆ ನೀಡಿದರು. ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಮತ್ತು ಕುದುರೆಮುಖ ವಿಷಯದ ಬಗ್ಗೆ ಸಚಿವರು ಮತ್ತೆ ಪ್ರಸ್ತಾಪ ಮಾಡಿದರು.

ಬೃಹತ್ ಕೈಗಾರಿಕೆ ಸಚಿವಾಲಯದ ಸಭೆ: ಬೃಹತ್ ಕೈಗಾರಿಕೆ ಸಚಿವಾಲಯದ ಉನ್ನತ ಅಧಿಕಾರಿಗಳೊಂದಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಭೆ ನಡೆಸಿದರು. ಆಟೋ ಮೊಬೈಲ್ ಸೇರಿ ಎಲ್ಲಾ ವಿಭಾಗ, ಮುಖ್ಯವಾಗಿ ವಿದ್ಯುತ್ ಚಾಲಿತ ವಾಹನಗಳನ್ನು ಉತ್ತೇಜಿಸುವ ಬಗ್ಗೆ ಚರ್ಚಿಸಲಾಯಿತು. ಪೆಟ್ರೋಲ್, ಡೀಸೆಲ್ ವಾಹನಗಳು ಅಗ್ಗ, ಎಲೆಕ್ಟ್ರಿಕ್ ವಾಹನಗಳು ದುಬಾರಿ. ಎಲೆಕ್ಟ್ರಿಕ್ ವಾಹನ ಖರೀದಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಿದೆ ಎಂದು ಅಧಿಕಾರಿಗಳು ಸಲಹೆ ಮಾಡಿದರು. ಉದ್ಯೋಗ ಸೃಷ್ಟಿ, ಉತ್ಪಾದನೆ ಪ್ರಮಾಣ ಹೆಚ್ಚಳ, ಉದ್ಯೋಗ ವಲಯದಲ್ಲಿ ಅವಕಾಶಗಳ ಹೆಚ್ಚಿಸುವ ಮಾಹಿತಿ ಸಚಿವರು ವಿನಿಮಯ ಮಾಡಿಕೊಂಡರು. ತುಮಕೂರು ಇಂಡಸ್ಟ್ರಿಯಲ್ ಪಾರ್ಕ್, ಎಚ್‌ಎಂಟಿ ಕಾರ್ಖಾನೆ ಪರಿಸ್ಥಿತಿ ಹಾಗೂ ದೇಶಾದ್ಯಂತ ಇರುವ ರೋಗಗ್ರಸ್ತ, ಸುಸ್ಥಿತಿಯಲ್ಲಿ ನಡೆಯುತ್ತಿರುವ ಘಟಕಗಳ ಬಗ್ಗೆ ಮಾಹಿತಿ ಪಡೆದರು.

2025ಕ್ಕೆ ಹಳ್ಳಿಗಳು ಬಯಲು ಶೌಚ ಮುಕ್ತ

ಆದರೆ, ಸುಮಾರು ಶೇ.33 ಒಡಿಎಫ್ ಪ್ಲಸ್ ಮಾದರಿ ಗ್ರಾಮ ವರ್ಗವನ್ನು ಸಾಧಿಸಲಾಗಿದೆ. ಜಲ ಜೀವನ್ ಮಿಷನ್‌ನಲ್ಲಿ ಕಳೆದ 5 ವರ್ಷಗಳಲ್ಲಿ 11 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳು ಪೈಪ್‌ಲೈನ್ ಮೂಲಕ ನೀರು ಪೂರೈಕೆಗೆ ಸೇರ್ಪಡೆ ಆಗಿವೆ. ಈಗ ಶೇ.76ಕ್ಕಿಂತ ಹೆಚ್ಚಿನ ಗ್ರಾಮೀಣ ಕುಟುಂಬಗಳಲ್ಲಿ ಪ್ರತಿ ವ್ಯಕ್ತಿಗೆ 55 ಲೀಟರ್ ಗುಣಮಟ್ಟದ ನೀರು ಒದಗಿಸಲಾಗುತ್ತಿದೆ ಎಂದು ವಿವರಿಸಿದರು. ತಮ್ಮ ಮೇಲೆ ವಿಶ್ವಾಸವಿಟ್ಟು ಸಚಿವ ಖಾತೆ ನೀಡಿದ ಪ್ರಧಾನಿ ಅವರಿಗೆ ಸಚಿವರು ಕೃತಜ್ಞತೆ ಸಲ್ಲಿಸಿದರು.

ಪದಬಂಧ

■ ರಾಜಾ ಸಂಗಮೇಶ ಹಿರೇಮಠ



5294

ಎಡದಿಂದ ಬಲಕ್ಕೆ

2. ಮಾಂಡಲಿಕ ರಾಜನೀತ (3)
5. ಜೊತೆಯಲ್ಲಿ ಎಂಬರ್ಥದ ಶಬ್ದ (2)
7. ಕೊಳೆ-ರಜವಿದು (2)
8. ಜನ ಕಡೆಯಲ್ಲಿರುವ ಯಾಗ (3)
9. ನಡುವಿಗೆ ಧರಿಸುವ ಪಟ್ಟಿ (3)
10. ಇದು ಹತ್ತನೆಯದು (3)
12. ರಂಗಿ ಕಡೆಯಲ್ಲಿರುವ ನದಿಯ ಹೆಸರು (3)
13. ಪ್ರತಿಫಲಾಪೇಕ್ಷೆಯಿಲ್ಲದೆ ಕೊಡುವುದು (2)
14. ಸಮಾನ-ತಕ್ಕದು ತಿರುಗಿದೆ (2)
16. ಇದು ಲೋಹದ ಕಂಬಿ (3)

ಮೇಲಿನಿಂದ ಕೆಳಕ್ಕೆ

1. ಅರಸುತ್ತಾ ಬಂದ ರಾಜ (3)
2. ಎಚ್ಚರಿಕೆ-ನಿಧಾನ ಎಂಬರ್ಥದ ಶಬ್ದ (4)
3. ತರದ ನಡುವೆ ಊರ ಕಾವಲುಗಾರನಿದ್ದಾನೆ (4)
4. ಉಸಿರಾಟಕ್ಕೆ ಸಹಕಾರಿಯಾಗುವ ಅಂಗ (3)
6. ಕುದುರೆಯ ಮುಖವಿದು (5)
7. ಇದು ಚಿನ್ನದ ಬೆಟ್ಟ (5)
11. ಇದು ಚೈತ್ರದ ತಿಂಗಳು (4)
12. ಕೆಟ್ಟು ಹೋದದ್ದಿದು (4)
13. ದಾರ ಮೊದಲಿರುವ ಬಾಗಿಲ ಚೌಕಟ್ಟು (3)
15. ಈತ ಸಭೆಯಲ್ಲಿರುವವನು (3)

5293 ಉತ್ತರ

ಎಡದಿಂದ ಬಲಕ್ಕೆ: 2.ಕನಕ 5.ಹಿಮವಾರಿ 6.ಹಿಯ್ಯಾಳಿಸು 7.ಕಮರು 8.ಸಾಗರ 10.ಕಡುಕೋಪ 12.ಪಡಿತರ 14.ಲಾಗೋಡು 15.ರಸಾಯನ 16.ವಯೋಗುಣ

ಮೇಲಿನಿಂದ ಕೆಳಕ್ಕೆ: 1.ವಹಿಸು 2.ಕರಿನೀರು 3.ಕಹಿಸಿಹಿ 4.ಮಸುಳೆ 7.ಕರಡು 9.ರಜತ 10.ಕನಿಕರ 11.ಪಲಾಯನ 12.ಪಡುವಣ 13.ವನಚರ

ದಿನ ಭವಿಷ್ಯ

ಮೇಷ: ಇಂದು ಕೆಲವು ವಿಷಯಗಳಲ್ಲಿ ಅವಸರ ಕೂಡದು. ತಾಳ್ಮೆಯಿಂದ ಕಾಯುವುದೇ ನೀವಿಂದು ಅನುಸರಿಸಬೇಕಾದ ದಾರಿ. ದೃಢ ಚಿತ್ತರಾಗಿರಿ.

ವೃಷಭ: ಬೆಳಿಗ್ಗೆಯೆ ಕುಟುಂಬ ಸದಸ್ಯರಿಂದ ಕಿರಿಕಿರಿ ಅನುಭವಿಸುವಿರಿ. ಆದರೆ ನಂತರ ದಿನವಿಡೀ ಉತ್ಸಾಹ, ಸಂಭ್ರಮದಿಂದಲೆ ಕಳೆಯುವುದು.

ಮಿಥುನ: ಕೆಲಸಮಯದಿಂದ ಗೊಂದಲಗೊಂಡಿದ್ದ ಮನಸ್ಸು ಇಂದು ಸಮಾಧಾನಗೊಳ್ಳುವುದು. ಸಮಸ್ಯೆಗೆ ಸ್ಪಷ್ಟ ಪರಿಹಾರ ಕಂಡುಕೊಳ್ಳುವಿರಿ.

ಕಟಕ: ಕೌಟುಂಬಿಕ ಸಂಬಂಧ ಗಟ್ಟಿಗೊಳ್ಳಲಿದೆ. ಹೊಸ ಕಾರ್ಯಕ್ಕೆ ಉತ್ಸಾಹದಿಂದ ಧುಮುಕುವಿರಿ. ಕಚೇರಿಯಲ್ಲಿ ಎಲ್ಲ ಕಾರ್ಯ ಸಲೀಸು.

ಸಿಂಹ: ಭಾವನಾತ್ಮಕ ಸನ್ನಿವೇಶ. ವ್ಯಕ್ತಿಯೊಬ್ಬರ ಕುರಿತಾದ ಅಸಹನೆಯು ಸ್ಫೋಟಗೊಳ್ಳಬಹುದು. ಆತ್ಮೀಯರ ಸಂಗದಲ್ಲಿ ಮನಸ್ಸು ತಹಬಂದಿಗೆ ಬರುತ್ತದೆ.

ಕನ್ಯಾ: ಹೊಸತನ ತುಂಬಿದ ದಿನ. ಹೊಸ ಕನಸು, ಹೊಸ ಭರವಸೆ. ನಿಮ್ಮ ವ್ಯಕ್ತಿತ್ವ ಅರಳಿಸಲು ಬೇಕಾಗುವ ಬೆಳವಣಿಗೆ ಸಂಭವಿಸುವುದು. ಆರ್ಥಿಕವಾಗಿ ಸದೃಢ.

ತುಲಾ: ದಿನವಿಡೀ ಮನಸ್ಸಿಗೆ ಕಿರಿಕಿರಿ. ನಿಶ್ಚಿತ ಕಾರಣವಿಲ್ಲದೇ ಪ್ರತಿಯೊಬ್ಬರ ಮಾತಿಗೂ ಸಿಡುಕುತ್ತೀರಿ. ಮನಸ್ಸಿಗೆ ಸಮಾಧಾನ ತಂದುಕೊಳ್ಳಿ.

ವೃಶ್ಚಿಕ: ನಿಮ್ಮ ಕಾರ್ಯಗಳು ಇಂದು ನಿಮಗೆ ಜನಪ್ರಿಯತೆ ತಂದುಕೊಡುವವು. ಇತರರಿಗೆ ನೆರವು ನೀಡುವಿರಿ. ಖರ್ಚು ಅಧಿಕವಾಗಬಹುದು.

ಧನು: ಮುಂಜಾನೆಯಿಡೀ ಮನಸ್ಸು ಅಸ್ತವ್ಯಸ್ತ. ಸಮಸ್ಯೆಗಳು ಕಾಡುವುವು. ಸಂಜೆ ವೇಳೆಗೆ ಸಮಸ್ಯೆ ಪರಿಹಾರ ಕಾಣುತ್ತವೆ. ಮನಸ್ಸು ನಿರಾಳ.

ಮಕರ: ಇಂದು ಮೊದಲಿಗೆ ಸೋಲು ಹಾಗೂ ಬಳಿಕ ಗೆಲುವನ್ನು ಅನುಭವಿಸುತ್ತೀರಿ. ಮನ ಕವಿದಿದ್ದ ಆತಂಕ ದೂರವಾಗುವುದು. ನಿಶ್ಚಿಂತರಾಗಿರಿ.

ಕುಂಭ: ಇಂದಿನ ದಿನ ನಿಮಗೆ ವಿಭಿನ್ನವೆನಿಸಲಿದೆ. ಏಕತಾನತೆಯ ಕೆಲಸದ ಬದಲಾಗಿ ಹೊಸ ಕಾರ್ಯ, ಹೊಸ ಹೊಣೆ ಹೆಗಲೇರಲಿದೆ. ಉತ್ಸಾಹಕ್ಕೆ ಭಂಗವಿಲ್ಲ.

ಮೀನ: ಅನವಶ್ಯವಾಗಿ ಎಲ್ಲರೊಂದಿಗೆ ಕಠಿಣವಾಗಿ ವರ್ತಿಸದಿರಿ. ಮೃದು ಧೋರಣೆಯು ಸಮಸ್ಯೆ ಪರಿಹಾರಕ್ಕೆ ನೆರವು ನೀಡುವುದು. ಸಹನೆ ಇರಲಿ.

ರಾಹುಕಾಲ: 1.30-3.00, ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 0,7,4,1

ಬಾಲ ಕಾರ್ಮಿಕ ಆಂದೋಲನ

ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ಬುಧವಾರ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಆಂದೋಲನ ನಡೆಯಿತು. ಮಕ್ಕಳು ಭಿತ್ತಿಪತ್ರಗಳನ್ನು ಹಿಡಿದು ಭಾಗವಹಿಸಿದ್ದರು.

ಸೆಲೆಬ್ರಿಟಿ, ಸಾಮಾನ್ಯನಿಗೂ ಒಂದೇ ಕಾನೂನು

ಉಡುಪಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಕಾನೂನು ಚೌಕಟ್ಟಿನಲ್ಲಿ ಎಲ್ಲಾ ಆಯಾಮದ ತನಿಖೆ ಆಗುತ್ತದೆ. ಈ ದೇಶದಲ್ಲಿ ರಾಷ್ಟ್ರಪತಿ, ಸೆಲೆಬ್ರಿಟಿ, ಪಂಚರ್ ಹಾಕುವವನಿಗೂ ಒಂದೇ ಕಾನೂನು. ಪ್ರಸಿದ್ಧರು, ದೊಡ್ಡವರು ಯಾರೇ ಇದ್ದರೂ ಬಿಡುವ ಪ್ರಶ್ನೆಯೇ ಇಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ನಟ ದರ್ಶನ್ ಕುರಿತಾಗಿ ಬುಧವಾರ ಉಡುಪಿಯಲ್ಲಿ ಪ್ರತಿಕ್ರಿಯಿಸಿದ ಅವರು, ಕಾನೂನು ಎಲ್ಲರಿಗೂ ಒಂದೇ. ಕಾನೂನು ಚೌಕಟ್ಟಿನಲ್ಲಿ ಎಷ್ಟೇ ದೊಡ್ಡವರಿದ್ದರೂ ಶಿಕ್ಷೆಯಾಗುತ್ತದೆ. ನೊಂದ ಕುಟುಂಬಕ್ಕೆ ನ್ಯಾಯ ಸಿಕ್ಕೇ ಸಿಗುತ್ತದೆ. ಈ ಸರ್ಕಾರ ಯಾವ ಭಾಗದ, ಯಾರ ಒತ್ತಡಕ್ಕೂ ಮಣಿಯುವುದಿಲ್ಲ, ತಪ್ಪಿತಸ್ಥರಿಗೆ ಖಂಡಿತವಾಗಿ ಶಿಕ್ಷೆಯಾಗುತ್ತದೆ, ಸಂತ್ರಸ್ತ ಕುಟುಂಬದ ಜೊತೆ ಸರಕಾರ ಆರ್ಥಿಕವಾಗಿಯೂ ಬೆಂಬಲಕ್ಕೆ ನಿಲ್ಲುತ್ತದೆ ಎಂದು ನುಡಿದರು.

ಸೋಲಿಗೆ ಕಾರಣ ಏನು ಎಂದು ಈಗಲೂ ಹುಡುಕುತ್ತಾ ಇದ್ದೇವೆ, ಸೋತ ನಂತರ ಯಾರ ಮೇಲೂ ಬೊಟ್ಟು ಮಾಡಬಾರದು. ಬೇರೊಬ್ಬರ ಮೇಲೆ ಬೊಟ್ಟು ಮಾಡುವುದು ನಾಯಕತ್ವದ ಲಕ್ಷಣ ಅಲ್ಲ, ನಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕು ಎಂದರು. ಇದು ನಿರಂತರವಾಗಿ ಹರಿಯುವ ನೀರು, ಇದಕ್ಕೆ ಕೊನೆ ಅಲ್ಲ, ಇದು ಅಂತ್ಯವೂ ಅಲ್ಲ. ಐದು ವರ್ಷಕ್ಕೊಮ್ಮೆ ಚುನಾವಣೆ ಬರುತ್ತದೆ, ಈ ಚುನಾವಣೆ ನನ್ನ ಮಗನಿಗೂ ಒಂದು ಪಾಠ. ನಾನು ಕೂಡ ಎರಡು ಬಾರಿ ಸೋತಿದ್ದೆ, ಗಟ್ಟಿಯಾಗಿ ನಿಂತುಕೊಂಡಿದ್ದೇನೆ. ನನ್ನ ಮಗ ಧೈರ್ಯವಂತ, ಈ ಸೋಲನ್ನೆ ಗೆಲುವಿನ ಮೆಟ್ಟಿಲಾಗಿ ಸ್ವೀಕಾರ ಮಾಡುತ್ತಾನೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ನನ್ನ ಮಗನ ಸೋಲು ಸಿಎಂಗೆ ಅಚ್ಚರಿ

ಲೋಕಸಭಾ ಚುನಾವಣೆಯಲ್ಲಿ ಬೆಳಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ನನ್ನ ಮಗನ ಪ್ರಚಾರಕ್ಕೆ ನಾಲ್ಕು ಬಾರಿ ಬಂದಿದ್ದರು. ಗೆಲ್ಲುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಮುಖ್ಯಮಂತ್ರಿಗಳೇ ಹೇಳಿದ್ದರು. ಆದರೆ ಫಲಿತಾಂಶ ಈ ರೀತಿ ಬಂದಿದೆ. ಜನರ ತೀರ್ಪಿಗೆ ತಲೆಬಾಗಿದ್ದೇವೆ. ಮುಖ್ಯಮಂತ್ರಿಗಳ ದೊಡ್ಡಗುಣ, ನನ್ನನ್ನು ನೋಡಿದ ತಕ್ಷಣ ಎಲ್ಲ ಚೆನ್ನಾಗಿತ್ತಮ್ಮ, ಯಾಕೆ ಹೀಗಾಯ್ತು ಗೊತ್ತಿಲ್ಲ ಸಾರಿ ಎಂದರು.

ಕಿರು ಸುದ್ದಿ

ನಟ ವಿನೋದ್ ರಾಜ್‌ಗೆ ಶಸ್ತ್ರ ಚಿಕಿತ್ಸೆ

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರ ಪುತ್ರ ವಿನೋದ್‌ರಾಜ್ ಅವರ ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕರುಳು ಬೇನೆಯಿಂದ ಬಳಲುತ್ತಿದ್ದ ಅವರನ್ನು ಪರೀಕ್ಷಿಸಿದ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಹನ್ನೊಂದು ವರ್ಷಗಳ ಹಿಂದೆ ವಿನೋದ್‌ರಾಜ್ ಅವರು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈ ಸಂದರ್ಭದಲ್ಲಿ ಅವರ ಹಾರ್ಟ್‌ಗೆ ಸ್ಟಂಟ್ ಅಳವಡಿಸಲಾಗಿತ್ತು. ಇದರ ಪರಿಣಾಮ, ಇದೀಗ ಅದೇ ಸ್ಟಂಟ್‌ನಿಂದ ಕರುಳಿನ ಸಮಸ್ಯೆ ಎದುರಾಗಿದೆ. ಹಾಗಾಗಿ, ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಇನ್ನೆರಡು ದಿನಗಳಲ್ಲಿ ವಿನೋದ್‌ರಾಜ್ ಅವರು ಆಸ್ಪತ್ರೆಯಿಂದ ಬಿಡುಗಡೆ ಆಗಲಿದ್ದಾರೆ. ಇತ್ತೀಚೆಗಷ್ಟೇ ತಾಯಿ ಲೀಲಾವತಿ ಅವರ ಅಗಲಿಕೆಯಿಂದ ಸಾಕಷ್ಟು ನೊಂದಿದ್ದ ವಿನೋದ್ ರಾಜ್ ಇದೀಗ ಆಸ್ಪತ್ರೆ ಸೇರುವಂತಾಗಿದೆ.

ಅರ್ಜಿ ವಜಾಕ್ಕೆ ಹೈ ಆದೇಶ

ಬೆಂಗಳೂರು: ದೇವಾಲಯಗಳನ್ನು ಮಾಹಿತಿ ಹಕ್ಕು ಕಾಯ್ದೆಯಿಂದ ಹೊರಗಿಡಲು ಕೋರಿ ಸಲ್ಲಿಸಲಾದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿ ಆದೇಶ ನೀಡಿದೆ. ಅಖಿಲ ಕರ್ನಾಟಕ ಹಿಂದು ದೇವಸ್ಥಾನಗಳ ಪುರೋಹಿತರು ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ಬುಧವಾರ ನಡೆಸಿತು. ಅರ್ಜಿದಾರರು ಅರ್ಚಕರಾಗಿರುವ ದೇವಾಲಯಗಳು ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿವೆ. ಹಾಗಾಗಿ, ಇದು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲೇ ಬರಲಿದೆ. ಅಲ್ಲದೆ, ಸರ್ಕಾರದ ಸುತ್ತೋಲೆ ಪ್ರಸ್ತಾಪಿಸಿರುವುದು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಬರುವುದಿಲ್ಲ, ಆದ್ದರಿಂದ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳುವುದು ಅರ್ಚಕರಿಗೆ ತೊಂದರೆ ನೀಡಿದಂತಾಗುವುದಿಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ರಾಜ್ಯ ಸರ್ಕಾರ ಅರ್ಜಿದಾರರ ದೇವಾಲಯಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಒದಗಿಸಲು ಸಿಬ್ಬಂದಿ ನೇಮಿಸಿರುವ ಆದೇಶ, ಧಾರ್ಮಿಕ ದತ್ತಿ ಇಲಾಖೆ ಅಧೀನದ ದೇವಾಲಯಗಳಿಗೆ ಆದೇಶಿಸಿರುವ ಸರ್ಕಾರದ ಸುತ್ತೋಲೆಗಳನ್ನು ರದ್ದು ಮಾಡಲು ಸಾಧ್ಯವಿಲ್ಲ ಎಂದು ಪೀಠ ಆದೇಶ ನೀಡಿದೆ.

ನಿರಂತರ ಮಳೆ: ಕೃಷ್ಣಾ ನದಿಯ ಹರಿಯುವಿಕೆ ಪ್ರಮಾಣ ಹೆಚ್ಚಳ



ಚಿಕ್ಕೋಡಿ: ಮಹಾರಾಷ್ಟ್ರ ರಾಜ್ಯದ ಕೃಷ್ಣಾ ಹಾಗೂ ಉಪ ನದಿಗಳ ಜಲಾನಯನ ಪ್ರದೇಶದಲ್ಲಿ ಕಳೆದೊಂದು ವಾರದಿಂದ ಭಾರೀ ಪ್ರಮಾಣದಲ್ಲಿ ಮಳೆ ಬೀಳುತ್ತಿದೆ. ಹೀಗಾಗಿ ಕೃಷ್ಣಾ ಹಾಗೂ ಉಪನದಿಗಳಲ್ಲಿ ನೀರಿನ ಹರಿಯುವಿಕೆ ಪ್ರಮಾಣ ಹೆಚ್ಚಳವಾಗಿದೆ. ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯ ರಾಜಾಪೂರ ಬ್ಯಾರೇಜ್‌ನಿಂದ ಬುಧವಾರ 15,000 ಕ್ಯೂಸೆಕ್ ನೀರು ಕೃಷ್ಣಾ ನದಿಗೆ ಹರಿದು ಬರುತ್ತಿದೆ. ಮಹಾರಾಷ್ಟ್ರ ರಾಜ್ಯದ ಕೃಷ್ಣಾ ಹಾಗೂ ಉಪನದಿಗಳ ಜಲಾನಯನ ಪ್ರದೇಶ ವ್ಯಾಪ್ತಿಯ ಕೊಯ್ನಾದಲ್ಲಿ 5 ಮಿ.ಮೀ, ಕಾಳಮ್ಮವಾಡಿಯಲ್ಲಿ 5 ಮಿ.ಮೀ, ಮಹಾಬಳೇಶ್ವರದಲ್ಲಿ 75 ಮಿ.ಮೀ, ನವಜಾದಲ್ಲಿ 5 ಮಿ.ಮೀ, ರಾಧಾನಗರಿಯಲ್ಲಿ 6 ಮಿ.ಮೀ ಮಳೆಯಾಗುತ್ತಿದ್ದು, ಕೃಷ್ಣಾ ನದಿಯಲ್ಲಿ ಕೊಂಚ ಮಟ್ಟಿಗೆ ನೀರಿನ ಪ್ರಮಾಣ ಏರಿಕೆಯಾಗಿದೆ. ಹೀಗಾಗಿ ಚಿಕ್ಕೋಡಿ ಉಪ ವಿಭಾಗದ ಕೃಷ್ಣಾ, ದೂಧಗಂಗಾ, ವೇದಗಂಗಾ ನದಿ ತೀರದ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿಯ 105 ಟಿಎಂಸಿ ಸಾಮರ್ಥ್ಯದ ಕೊಯ್ನಾ ಜಲಾಶಯ, 13.50 ಟಿಎಂಸಿ ಸಾಮರ್ಥ್ಯದ ಧೂಮ ಜಲಾಶಯ, 10 ಟಿಎಂಸಿ ಸಾಮರ್ಥ್ಯದ ಕಣೇರ ಜಲಾಶಯ, 34.40 ಟಿಎಂಸಿ ಸಾಮರ್ಥ್ಯದ ವಾರಣಾ ಜಲಾಶಯ, 8.36 ಟಿಎಂಸಿ ಸಾಮರ್ಥ್ಯದ ರಾಧಾನಗರಿ ಜಲಾಶಯ, 25.40 ಟಿಎಂಸಿ ಸಾಮರ್ಥ್ಯದ ದೂಧಗಂಗಾ (ಕಾಳಮ್ಮವಾಡಿ) ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದೆ. ಡ್ಯಾಂಗಳು ಭಾಗಶಃ ಖಾಲಿ ಇದ್ದಿದ್ದರಿಂದ ಈಗಲೇ ರಾಜ್ಯಕ್ಕೆ ಪ್ರವಾಹದ ಭೀತಿ ಇಲ್ಲ, ಕಳೆದ ತಿಂಗಳಲ್ಲಿ ಸಂಪೂರ್ಣ ಖಾಲಿಯಾಗಿದ್ದ ಕೃಷ್ಣಾ ನದಿಗೆ ಅಡ್ಡಲಾಗಿರುವ 6 ಅಡಿ ಟಿಎಂಸಿ ಸಾಮರ್ಥ್ಯದ ಬಾಗಲಕೋಟ ಜಿಲ್ಲೆಯ ರಬಕವಿ ಬನಹಟ್ಟಿ ತಾಲೂಕಿನ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಈಗಾಗಲೇ 3.50 ಅಡಿ ಟಿಎಂಸಿ ನೀರು ಸಂಗ್ರಹವಾಗಿದೆ.

ರೇಣುಕಾಸ್ವಾಮಿ ಹಂತಕರಿಗೆ ಕಠಿಣ ಶಿಕ್ಷೆಗೆ ಆಗ್ರಹ

ವಿವಿಧ ಸಂಘಟನೆಗಳಿಂದ ಡಿಸಿ ಕಚೇರಿ ಎದುರು ಪ್ರತಿಭಟನೆ | ಅಪರ ಜಿಲ್ಲಾಧಿಕಾರಿಗೆ ಮನವಿ

ಚಿತ್ರದುರ್ಗ: ಚಿತ್ರದುರ್ಗದ ಯುವಕ ರೇಣುಕಾಸ್ವಾಮಿಯನ್ನು ಅಮಾನುಷವಾಗಿ ಕೊಲೆಗೈದಿರುವ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ಗ್ಯಾಂಗ್‌ಗೆ ಕಠಿಣ ಶಿಕ್ಷೆ ವಿಧಿಸುವಂತೆ ವಿವಿಧ ಸಂಘಟನೆಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಹೊಳಲ್ಕೆರೆ ರಸ್ತೆಯ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಮೂಲಕ ಆಗಮಿಸಿದ ಪ್ರತಿಭಟನಾಕಾರರು ನಟ ದರ್ಶನ್ ಮತ್ತವರ ಗ್ಯಾಂಗ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡುತ್ತ, ದರ್ಶನ್ ಎರಡನೇ ಪತ್ನಿ ಪವಿತ್ರಾ ಗೌಡಗೆ ಅಶ್ಲೀಲ ಸಂದೇಶ ಕಳಿಸುತ್ತಿದ್ದನೆಂಬ ಕಾರಣಕ್ಕಾಗಿ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಕ್ರೂರವಾಗಿ ಹೊಡೆದು ಸಾಯಿಸಲಾಗಿದೆ. ಇದನ್ನು ನೋಡಿದರೆ ಎಂಥವರಿಗೂ ಮನ ಕರಗುತ್ತದೆ. ಅಶ್ಲೀಲ ಸಂದೇಶ ಕಳಿಸುತ್ತಿದ್ದರೆ ಕಾನೂನು ರೀತಿಯ ಕ್ರಮ ಕೈಗೊಳ್ಳಬಹುದಿತ್ತು. ಇಲ್ಲವೇ ಅವರ ಮನೆಯ ಹಿರಿಯರ ಗಮನಕ್ಕೆ ತರಬಹುದಿತ್ತು. ಇದ್ಯಾವುದನ್ನು ಮಾಡದೆ ಏಕಾಏಕಿ ಮರ್ಡರ್ ಮಾಡಿರುವುದು ದುಃಖಕರ ಸಂಗತಿ ಎಂದರು.

ಮಾಜಿ ಶಾಸಕ ಎಸ್.ಕೆ.ಬಸವರಾಜನ್ ಮಾತನಾಡುತ್ತ, ರೇಣುಕಾಸ್ವಾಮಿಯನ್ನು ಕೊಲೆಗೈದಿರುವ ನಟ ದರ್ಶನ್ ಮತ್ತವರ ಗ್ಯಾಂಗ್ ಯಾವುದೇ ರೀತಿಯಲ್ಲಿ ತಪ್ಪಿಸಿಕೊಳ್ಳಬಾರದು. ರಾಜ್ಯ ಸರ್ಕಾರ ರಕ್ಷಣೆ ಮಾಡಿದಂತೆ ಕಾಣುತ್ತಿದೆ. ನಟ ದರ್ಶನ್‌ಗೆ ಹುಚ್ಚು ಅಭಿಮಾನಿಗಳು ಇರುವುದರಿಂದ ಈ ರೀತಿಯ ವಿಕೃತಿಗಳು ನಡೆಯುತ್ತಿವೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕೆಂದು ಆಗ್ರಹಿಸಿದರು.

ಜಿಲ್ಲಾ ವೀರಶೈವ ಲಿಂಗಾಯತ ಹೇಮರಡ್ಡಿ ಮಲ್ಲಮ್ಮ ಸಮಾಜದ ಉಪಾಧ್ಯಕ್ಷ ನಾಗರಾಜ್ ಸಂಗಮ್ ಮಾತನಾಡಿ, ನಟ ದರ್ಶನ್ ಮೇಲೆ ಈಗಾಗಲೇ ಸಾಕಷ್ಟು ದೂರು ಆಪಾದನೆಗಳಿವೆ. ರಾಜ್ಯ ಸರ್ಕಾರ ಸರ್ಕಾರ ರಕ್ಷಿಸಲು ಹೊರಟಂತಿದೆ. ಸಿಬಿಐಗೆ ವಹಿಸಿ ತನಿಖೆಗೆ ಆದೇಶಿಸಿದರೆ ನಿಜಾಂಶ ಬಯಲಿಗೆ ಬರುತ್ತದೆ. ಈಗಲಾದರು ದರ್ಶನ್ ಹುಚ್ಚು ಅಭಿಮಾನಿಗಳು ಎಚ್ಚೆತ್ತುಕೊಂಡು ಹೊರಬರಬೇಕು. ನಿಸ್ಪಕ್ಷಪಾತ ತನಿಖೆ ನಡೆಸಿ ನೊಂದಿರುವ ಕುಟುಂಬಕ್ಕೆ ನ್ಯಾಯ ಕೊಡಬೇಕೆಂದು ವಿನಂತಿಸಿದರು.

ನಗರಸಭೆ ಮಾಜಿ ಅಧ್ಯಕ್ಷೆ ಸುನಿತಾ ಮಲ್ಲಿಕಾರ್ಜುನ್, ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದ ಕಾರ್ಯದರ್ಶಿ ಕೆ.ಎಂ.ವೀರೇಶ್, ಛಲವಾದಿ ಗುರುಪೀಠದ ಬಸವನಾಗಿದೇವಸ್ವಾಮಿ, ಜಿಪಂ ಮಾಜಿ ಉಪಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ವೀರಶೈವ ಲಿಂಗಾಯತ ಹೇಮರಡ್ಡಿ ಮಲ್ಲಮ್ಮ ಸಮಾಜದ ಕಾರ್ಯದರ್ಶಿ ಡಿ.ಟಿ.ಶಿವಾನಂದ್, ಜೆಡಿಎಸ್ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಗೀತಾ, ಮರುಳಾರಾಧ್ಯ, ರೇಣುಕಾರಾಧ್ಯ, ಬಜರಂಗದಳದ ಪ್ರಭಂಜನ್, ರುದ್ರೇಶ್, ಸಿದ್ದೇಶ್, ವೀರಶೈವ ಲಿಂಗಾಯಿತ ಸಮಾಜದ ಮುಖಂಡರು, ದಲಿತ ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಕರಣ ಸಿಬಿಐಗೆ ವಹಿಸಿ

ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್ ಮಾತನಾಡಿ, ವಿಕೃತ ಮನಸ್ಸಿನ ನಟ ದರ್ಶನ್ ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಅಮಾನುಷವಾಗಿ ಹತ್ಯೆಗೈದಿರುವುದು ಅವರ ಕುಟುಂಬಕ್ಕೆ ಬರ ಸಿಡಿಲು ಬಡಿದಂತಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ ಮೇಲಿಂದ ಮೇಲೆ ಇಂತಹ ಘಟನೆಗಳು ಮರುಕಳಿಸುತ್ತಿವೆ. ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ತನಿಖೆಯನ್ನು ಸಿಬಿಐಗೆ ವಹಿಸಿ ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

> ಗೃಹ ಸಚಿವ ಡಾ.ಜಿ.ಪರಮೇಶ್ವರ್ ತನಿಖೆ ನಡೆಸೋಣ ಎಂದು ಹೇಳುತ್ತಿರುವುದರಲ್ಲಿ ಅರ್ಥವಿಲ್ಲ, ದರ್ಶನ್ ಮತ್ತವರ ಗ್ಯಾಂಗ್‌ಗೆ ಗಲ್ಲು ಶಿಕ್ಷೆಯಾಗಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ.
> ■ ಜಿ.ಎಚ್.ತಿಪ್ಪಾರೆಡ್ಡಿ, ಮಾಜಿ ಶಾಸಕ

ಉಗ್ರ ಶಿಕ್ಷೆಯಾಗಲಿ: ರೇಣುಕಾಸ್ವಾಮಿ ತಾಯಿ ಆಕ್ರೋಶ

ಚಿತ್ರದುರ್ಗ: ನನ್ನ ಮಗನನ್ನು ಕ್ರೂರವಾಗಿ ಕೊಂದಿರುವ ನಟ ದರ್ಶನ್ ಹಾಗೂ ಅವರ ಗ್ಯಾಂಗ್‌ನವರಿಗೆ ಉಗ್ರ ಶಿಕ್ಷೆಯಾಗಬೇಕು. ಸೆಲೆಬ್ರಿಟಿ ಎಂಬ ಕಾರಣಕ್ಕೆ ಯಾವುದೇ ಮುಲಾಜು ನೋಡಬಾರದು ಎಂದು ನಟ ದರ್ಶನ್ ಮತ್ತವರ ಗ್ಯಾಂಗ್‌ನಿಂದ ಹತ್ಯೆಗೀಡಾಗಿರುವ ರೇಣುಕಾಸ್ವಾಮಿ ಅವರ ತಾಯಿ ರತ್ನಪ್ರಭ ಆಕ್ರೋಶ ಹೊರಹಾಕಿದರು. ಚಿತ್ರದುರ್ಗ ನಗರದ ವೆಂಕಟೇಶ್ವರಸ್ವಾಮಿ ಬಡಾವಣೆಯ ತಮ್ಮ ನಿವಾಸದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನನ್ನ ಮಗ ತಾನಾಯಿತು. ತನ್ನ ಕೆಲಸವಾಯಿತು ಎಂದು ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡಿದ್ದ. ಅವನು ಏನೋ ಮೆಸೇಜ್ ಹಾಕಿದ ಎಂಬ ಒಂದೇ ಕಾರಣಕ್ಕೆ ಬೆಂಗಳೂರಿಗೆ ಕರೆದೊಯ್ದು ಅಮಾನುಷವಾಗಿ ಕೊಲೆ ಮಾಡಲಾಗಿದೆ. ನನ್ನ ಮಗನ ಸಾವಿಗೆ ಕಾರಣರಾದ ಪಾಪಿಗಳನ್ನು ಯಾವುದೇ ಕಾರಣಕ್ಕೂ ಬಿಡಬಾರದು ಎಂದು ಕಿಡಿಕಾರಿದರು. ನಮ್ಮನ್ನು ಈ ಸ್ಥಿತಿಗೆ ತಂದ ರಾಕ್ಷಸರಿಗೆ ಕಾನೂನು ಕಠಿಣ ಶಿಕ್ಷೆ ನೀಡಬೇಕು. ಪ್ರಕರಣ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಕೊಲೆಗೀಡಾದ ರೇಣುಕಾಸ್ವಾಮಿ ಅವರ ಪತ್ನಿ ಸಹನ ಮಾತನಾಡಿ, ಕಳೆದ ಒಂದು ವರ್ಷದ ಹಿಂದೆ ನಮ್ಮ ಮದುವೆಯಾಗಿತ್ತು. ಇದೇ ತಿಂಗಳ 28ರಂದು ನಮ್ಮ ವೆಡ್ಡಿಂಗ್ ಆನಿವರ್ಸರಿ ದಿನ. ನಾನೀಗ ಐದು ತಿಂಗಳ ಗರ್ಭಿಣಿ. ಈಗ ನನಗೆ, ನನ್ನ ಮಗುವಿಗೆ ಯಾರು ದಿಕ್ಕು. ಮಗು ಹುಟ್ಟಿ ಬೆಳೆದ ಮೇಲೆ ತಂದೆಯ ಬಗ್ಗೆ ಕೇಳಿದರೆ ನಾನೇನು ಹೇಳಲಿ ಎಂದು ಕಣ್ಣೀರಾದರು. ಕೇವಲ ಒಂದು ಮೆಸೇಜ್ ಮಾಡಿದ್ದಕ್ಕೆ ಜೀವ ತೆಗೆಯುವ ಹಂತಕ್ಕೆ ಹೋಗಿದ್ದಾರೆ. ಬದುಕಿನಲ್ಲಿ ಜೊತೆಯಾಗಿ ಬದುಕಬೇಕಿದ್ದ ನನ್ನ ಗಂಡನನ್ನು ಕಿತ್ತುಕೊಂಡಿದ್ದಾರೆ. ಅವರಿಗೆ ಉಗ್ರ ಶಿಕ್ಷೆ ನೀಡಬೇಕು. ಇನ್ನು ಮುಂದೆ ಬೇರೆ ಯಾರಿಗೂ ಹೀಗೆ ಮಾಡಬಾರದು ಎಂದು ಆಕ್ರೋಶ ಹೊರಹಾಕಿದರು.

ಕಾನೂನು ಎಲ್ಲರಿಗೂ ಒಂದೇ: ಸಚಿವ

ಬೆಂಗಳೂರು: ಎಲ್ಲರಿಗೂ ಕಾನೂನು ಒಂದೇ. ನಟ ದರ್ಶನ್‌ಗೂ ಕಾನೂನು ಒಂದೇ, ಪರಮೇಶ್ವರ್‌ಗೂ ಒಂದೇ ಕಾನೂನು. ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿದರು. ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಟ ದರ್ಶನ್ ಕೊಲೆಯಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಮೇಲೆ ಬಂಧಿಸಲಾಗಿದೆ. ತನಿಖೆಯಲ್ಲಿ ಬರುವ ಅಂಶಗಳನ್ನು ಆಧರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ. ರೇಣುಕಾಸ್ವಾಮಿ ಸಾಮಾಜಿಕ ಜಾಲತಾಣದಲ್ಲಿ ನಟ ದರ್ಶನ್ ಅವರ ಆಪ್ತೆ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡಿದ್ದ ಎನ್ನಲಾಗಿದೆ. ಈ ಬಗ್ಗೆ ದರ್ಶನ್ ದೂರು ಕೊಡಬಹುದಾಗಿತ್ತು. ಪೊಲೀಸರು ಕೂಡಲೇ ಕ್ರಮ ತೆಗೆದುಕೊಳ್ಳುತ್ತಿದ್ದರು. ಅದನ್ನು ಬಿಟ್ಟು, ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದು ಹೊಡೆದು ಸಾಯಿಸಿದ್ದಾರೆಂಬ ಮಾಹಿತಿ ಇದೆ. ದೂರು ಕೊಟ್ಟಿದ್ದರೆ ಇದೆಲ್ಲವನ್ನು ತಡೆಯಲು ಅವಕಾಶವಿತ್ತು. ಆದರೆ, ಘಟನೆ ನಡೆದು ಹೋಗಿದೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಇಲಾಖೆ ಕೈಗೊಳ್ಳುತ್ತದೆ ಎಂದರು.

ವಾಟರ್ ವಾರ್‌ಗೆ ಫೋಟೋಗ್ರಫಿ ಸೊಸೈಟಿ ಆಫ್ ಅಮೆರಿಕದ ಚಿನ್ನದ ಪದಕ



ಕೊಪ್ಪಳ: ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ನಡೆದ ಇಂಟರ್‌ನ್ಯಾಷನಲ್ ಸಲೋನ್ ನ್ಯೂಯಾರ್ಕ್–2024 ಅಂತಾರಾಷ್ಟ್ರೀಯ ಛಾಯಾಗ್ರಹಣ ಸ್ಪರ್ಧೆಯಲ್ಲಿ ಕೊಪ್ಪಳದ ಛಾಯಾಗ್ರಾಹಕ ಪ್ರಕಾಶ ಕಂದಕೂರ ಸೆರೆಹಿಡಿದ ವಾಟರ್ ವಾರ್ ಶೀರ್ಷಿಕೆಯ ಚಿತ್ರ ಫೋಟೋಗ್ರಫಿ ಸೊಸೈಟಿ ಆಫ್ ಅಮೆರಿಕದ ಚಿನ್ನದ ಪದಕ ಪಡೆದುಕೊಂಡಿದೆ.

ಸ್ಪರ್ಧೆಯ ಪೀಪಲ್ (ಜನರು) ವಿಭಾಗದಲ್ಲಿ ಪ್ರಶಸ್ತಿ ಗಳಿಸಿರುವ ಈ ಚಿತ್ರವನ್ನು ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಕಂದಕೂರ ಸೆರೆಹಿಡಿದಿದ್ದರು. ಅಪಾಯವನ್ನು ಲೆಕ್ಕಿಸದೆ ನೀರಿಗಾಗಿ ದೊಡ್ಡ ಟ್ಯಾಂಕೊಂದರ ಸುತ್ತಲೂ ನೆರೆದಿರುವ ಜನಸ್ತೋಮದ ಈ ಚಿತ್ರ ನೀರಿನ ಅತ್ಯವಶ್ಯಕತೆಯನ್ನು ಮನದಟ್ಟು ಮಾಡಿಸುವಂತಿದೆ.

ಜಗತ್ತಿನ ಒಟ್ಟು 42 ದೇಶಗಳ 118 ಜನ ಛಾಯಾಗ್ರಾಹಕರ ಒಟ್ಟು 1,789 ಚಿತ್ರಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಅಮೆರಿಕಾದ ಕ್ವಿನ್ ಕ್ವಿನ್ ಲಿಯಾಂಗ್, ಭಾರತದ ಸುಬ್ರತಾ ಬಸಕ್, ಬಾಂಗ್ಲಾದೇಶದ ಯೂಸೂಫ್ ತುಷಾರ್ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಜೂನ್ 26 ರಿಂದ ಜುಲೈ 26 ರವರೆಗೆ ಒಂದು ತಿಂಗಳ ಕಾಲ ಪ್ರಶಸ್ತಿ ವಿಜೇತ ಛಾಯಾಚಿತ್ರಗಳ ಪ್ರದರ್ಶನ ಆನ್‌ಲೈನ್ ಗ್ಯಾಲರಿಯಲ್ಲಿ ನಡೆಯಲಿದೆ ಎಂದು ಸ್ಪರ್ಧೆಯ ಚೇರ್‌ಮನ್ ಮುಷ್ಪದ್ ಅಲಿ ಸಲೀಂ ತಿಳಿಸಿದ್ದಾರೆ.

ಕಲುಷಿತ ನೀರು: 2 ಸಾವು

ಮಧುಗಿರಿ: ಕಲುಷಿತ ನೀರು ಕುಡಿದು ಸುಮಾರು 54ಕ್ಕೂ ಹೆಚ್ಚು ಗ್ರಾಮಸ್ಥರು ಅಸ್ವಸ್ಥರಾಗಿರುವ ಪ್ರಕರಣ ದಿನದಿಂದ ದಿನಕ್ಕೆ ತಿರುವು ಪಡೆದುಕೊಳ್ಳುತ್ತಿದ್ದು, 3ನೇ ದಿನವಾದ ಬುಧವಾರ ಮತ್ತೆ ಇಬ್ಬರು ಮೃತಪಟ್ಟಿದ್ದಾರೆ.

ಚಿನ್ನೇನಹಳ್ಳಿ ಗ್ರಾಮದ ಚಿಕ್ಕದಾಸಪ್ಪ(74), ಮೀನಾಕ್ಷಿ (3) ಮೃತಪಟ್ಟವರು, ಚಿಕ್ಕದಾಸಪ್ಪ ಕಲುಷಿತ ನೀರು ಕುಡಿದು ಅಸ್ವಸ್ಥರಾದ ಹಿನ್ನೆಲೆಯಲ್ಲಿ ತುಮಕೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಮೃತಪಟ್ಟಿದ್ದಾರೆ. ಅದೇ ಗ್ರಾಮದ ಬಾಲಕಿ ಮೀನಾಕ್ಷಿ(3) ಸಹ ವಾಂತಿ ಬೇಧಿಯಿಂದ ನರಳುತ್ತಿದ್ದು, ಚಿಕಿತ್ಸೆಗಾಗಿ ಮಧುಗಿರಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆ ಪಡೆದು ಮನೆಗೆ ವಾಪಾಸ್ಸಾಗಿ ಮಲಗಿದ್ದಾಗ ಏಕಾಏಕಿ ಕೆಮ್ಮು ಕಾಣಿಸಿಕೊಂಡಿದ್ದು, ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸುವಾಗ ಬಾಲಕಿ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಗ್ರಾಮದ ಹನುಮಕ್ಕ (86) ಕಳೆದ ಒಂದು ವಾರದ ಹಿಂದೆ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದರು. ನಾಗಪ್ಪ (95) ಹದಿನೈದು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ನಾಗಮ್ಮ (95) ವಯೋ ಸಹಜ ಖಾಯಿಲೆಯಿಂದ ಬಳಲಿ ಮೃತಪಟ್ಟಿದ್ದಾರೆ ಹೊರತು ಕಲುಷಿತ ನೀರಿನ ಸೇವನೆಯಿಂದಲ್ಲ ಎಂದು ಸ್ಥಳದಲ್ಲಿದ್ದ ಅಧಿಕಾರಿಗಳು ಮಂಗಳವಾರ ಸ್ಪಷ್ಟಪಡಿಸಿದ್ದು, ಬುಧವಾರ ಮತ್ತೆ ಇಬ್ಬರು ಮೃತಪಟ್ಟಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಮತ್ತೊಬ್ಬ ವ್ಯಕ್ತಿ ಪೆದ್ದಣ್ಣ(74) ಎಂಬುವವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಸ್ವಾಮಿ ಪತ್ನಿಗೆ ಸರ್ಕಾರಿ ನೌಕರಿ ನೀಡಲಿ

ಚಿತ್ರದುರ್ಗ: ಚಿತ್ರನಟ ದರ್ಶನ್ ಗ್ಯಾಂಗ್‌ನಿಂದ ಹಲ್ಲೆಗೊಳಗಾಗಿ ಕೊಲೆಗೀಡಾಗಿರುವ ರೇಣುಕಾಸ್ವಾಮಿ ಅವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡುವ ಮೂಲಕ ರಾಜ್ಯ ಸರ್ಕಾರ ಅವರ ನೆರವಿಗೆ ಬರಬೇಕು ಎಂದು ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

ನಗರದ ತುರುವನೂರು ರಸ್ತೆಯಲ್ಲಿರುವ ವೆಂಕಟೇಶ್ವರಸ್ವಾಮಿ ಬಡಾವಣೆಯಲ್ಲಿನ ಮೃತನ ನಿವಾಸಕ್ಕೆ ಬುಧವಾರ ಸಂಜೆ ಭೇಟಿ ನೀಡಿ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದ ಅವರು, ಮನೆಯ ಮಗ ರೇಣುಕಾಸ್ವಾಮಿ ಹತ್ಯೆಗೀಡಾಗಿರುವುದು ಆಘಾತ ಉಂಟು ಮಾಡಿದೆ. ಈಗ ಅವರ ಕುಟುಂಬಕ್ಕೆ ಆಧಾರ ಇಲ್ಲದಂತಾಗಿದೆ. ಈ ನಿಟ್ಟಿನಲ್ಲಿ ಸ್ಥಳೀಯವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಮೃತನ ಪತ್ನಿಗೆ ಕೆಲಸ ನೀಡಬೇಕೆಂದು ಒತ್ತಾಯಿಸಿದರು.

ಘಟನೆಯ ಬಗ್ಗೆ ಕೇಳಿ ಆಘಾತ ಉಂಟಾಗಿದೆ. ಯಾರೇ ತಪ್ಪು ಮಾಡಿದರೂ ಅವರ ವಿರುದ್ಧ ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು. ಚಿತ್ರದುರ್ಗದಿಂದ ಕರೆದುಕೊಂಡು ಹೋಗಿ ಕೂಡಿ ಹಾಕಿ ಚಿತ್ರಹಿಂಸೆ ಮಾಡಿ ಕೊಲ್ಲಲಾಗಿದೆ. ಹುಬ್ಬಳ್ಳಿ ಸೇರಿದಂತೆ ರಾಜ್ಯದ ಹಲವೆಡೆಗಳಲ್ಲಿ ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿವೆ. ಈಗ ಚಿತ್ರದುರ್ಗದಲ್ಲಿ ನಡೆದಿದೆ. ಕಾನೂನಿನ ಭಯವಿಲ್ಲದಂತಾಗಿದೆ. ಹಾಗಾಗಿ ಘಟನೆ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಕೊಡಬೇಕು ಎಂದರು.

ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಎ.ಮುರುಳಿ, ನವೀನ್ ಚಾಲುಕ್ಯ, ಕಲ್ಲೇಶಯ್ಯ, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್ ಮತ್ತಿತರರು ಇದ್ದರು.

ವಿಧಾನಸಭಾ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಕ್ರೋಶ

ರಾಜ್ಯದಲ್ಲಿ ತಾಲಿಬಾನ್ ಮಾದರಿ ಸರಕಾರ

ಮಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಹಿತಕರ ಘಟನೆಗಳ ಮೂಲಕ ಜನತೆಯ ನೆಮ್ಮದಿಗೆ ಭಂಗ ಉಂಟುಮಾಡುತ್ತಿದೆ. ಕೋಮು ಸೌಹಾರ್ದತೆ ಹಾಳು ಮಾಡುವ ಮೂಲಕ ತಾಲಿಬಾನ್ ರೀತಿಯ ಸರಕಾರ ನಡೆಸುತ್ತಿದೆ ಎಂದು ವಿಧಾನಸಭಾ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬುಧವಾರ ಮಂಗಳೂರಿನಲ್ಲಿರುವ ದ.ಕ. ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಬಿಜೆಪಿ ಕಾರ್ಯಕರ್ತರ ಮೇಲೆ ಮಂಗಳೂರಿನಲ್ಲಿ ನಡೆದ ಚೂರಿ ಇರಿತ ಪ್ರಕರಣ ಸೇರಿದಂತೆ ಹಲವು ಘಟನೆಗಳು ನಿರಂತರವಾಗಿ ನಡೆದಿವೆ. ಅಶಾಂತಿ ಸೃಷ್ಟಿಗೆ ಕಾರಣವಾಗುತ್ತಿರುವ ಸರಕಾರದ ವಿರುದ್ಧ ಗುರುವಾರ ಬೆಂಗಳೂರಿನಲ್ಲಿ ಸಭೆ ನಡೆಸಿ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದರು.

ಸಿದ್ದರಾಮಯ್ಯನವರು ಕರ್ನಾಟಕವನ್ನು ತಾಲಿಬಾನ್ ಮಾಡಲು ಹೊರಟಿದ್ದಾರೆ. ಇವರ ಅವಧಿಯಲ್ಲಿ ಪುಡಿ ರೌಡಿಗಳಿಗೆ ಪರವಾನಿಗೆ ನೀಡಿದಂತಾಗಿದ್ದು, ರೌಡಿಗಳ ಅಟ್ಟಹಾಸ ಅತಿಯಾಗಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ಕೈಗೆತ್ತಿಕೊಳ್ಳಲಿದೆ.

ಕಾಂಗ್ರೆಸ್ ಸರಕಾರಕ್ಕೆ ತಕ್ಕ ಪಾಠವನ್ನು ಬಿಜೆಪಿ ಕಲಿಸಲಿದೆ ಎಂದವರು ಹೇಳಿದರು.

ಮೋದಿಯವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭ ದೇಶದೆಲ್ಲೆಡೆ ವಿಜಯೋತ್ಸವ ನಡೆದಿದೆ. ಆದರೆ ಮಂಗಳೂರಿನಲ್ಲಿ ಮಾತ್ರ ಅಹಿತಕರ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರ ಮೇಲೆ ಡ್ಯಾಗರ್ ಮೂಲಕ ಇರಿದು ಗಂಭೀರವಾಗಿ ಗಾಯಗೊಳಿಸಲಾಗಿದೆ. ಆರೋಪಿಗಳ ವಿರುದ್ಧ ಸೂಕ್ತ ಕ್ರಮವನ್ನು ಪೊಲೀಸ್ ಇಲಾಖೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮಂಗಳೂರಿನ ಬೋಳಿಯಾರ್‌ನಲ್ಲಿ ನಡೆದ ಬಿಜೆಪಿ ವಿಜಯೋತ್ಸವ ವೇಳೆ ಕಾರ್ಯಕರ್ತರು 'ಭಾರತ್ ಮಾತಾಕೀ ಜೈ' ಎಂದು ಘೋಷಣೆ ಕೂಗಿದ್ದಾರೆ. ಈ ಕುರಿತು ಸ್ಥಳೀಯ ಮಸೀದಿಯಲ್ಲಿ ದಾಖಲಾದ ಸಿಸಿ ಕ್ಯಾಮೆರಾ ತುಣುಕನ್ನು ನಾವು ನೋಡಿದ್ದೇವೆ. ಇದರ ಹೊರತು ಬೇರೇನೂ ಘೋಷಣೆ ಕೂಗಿಲ್ಲ, ಭಾರತ್ ಮಾತಾ ಕೀ ಜೈ ಎನ್ನುವುದು ತಪ್ಪಾ? ಹೀಗೆ ಘೋಷಣೆ ಕೂಗಿದವರ ಮೇಲೆಯೇ ಮರುದಿನ ದೂರು ನೀಡಲಾಗಿದೆ. ಪ್ರತಿ ದೂರನ್ನು ವಾಪಸ್ ಪಡೆಯುವಂತೆ ಆರ್.ಅಶೋಕ ಆಗ್ರಹಿಸಿದರು.

> ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಸಚಿವ ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಅವರು ಶೇ.20ರಷ್ಟು ಕಮಿಷನ್ ಪಡೆದಿರಬಹುದು. ಉಳಿದ ಶೇ.80ರಷ್ಟು ಕಮಿಷನ್ ತಿಂದವರಿದ್ದಾರೆ. ನಿಗಮದ ಮೊತ್ತ ಹಂಚಿಕೆಯಾಗಿರುವುದು ಸಿಎಂ ಅವರ ಹಣಕಾಸು ಇಲಾಖೆಯ ಅಡಿಯಲ್ಲೇ ಬರುತ್ತದೆ. ಆದ್ದರಿಂದ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು.
> ■ ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ

ಸಂಗೀತ ಮಾಂತ್ರಿಕ ಪಂಚಭೂತಗಳಲ್ಲಿ ಲೀನ

ಮೈಸೂರು: ಸಂಗೀತ ಲೋಕದ ಮಾಂತ್ರಿಕ, ಅಂತಾರಾಷ್ಟ್ರೀಯ ಖ್ಯಾತಿಯ ಸರೋದ್ ವಾದಕರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪಂಡಿತ್ ರಾಜೀವ್ ತಾರಾನಾಥ್ ಇನ್ನೀಗ ನೆನಪು ಮಾತ್ರ.

5 ದಶಕಗಳಿಗೂ ಹೆಚ್ಚು ಕಾಲ ತಮ್ಮ ಸಂಗೀತದ ಮೂಲಕ ಕೋಟ್ಯಂತರ ಜನರ ಮನಗೆದ್ದಿದ್ದ ರಾಜೀವ್ ತಾರಾನಾಥ್ ಅವರ ಅಂತ್ಯಕ್ರಿಯೆ ಬುಧವಾರ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್ ಅನಿಲ ಚಿತಾಗಾರಕ್ಕೆ ನಡೆಯಿತು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ರಾತ್ರಿ, ಇಹಲೋಕ ತ್ಯಜಿಸಿದ್ದರು. ಅವರ ಪಾರ್ಥಿವ ಶರೀರವನ್ನು ಮೈಸೂರಿನ ಕುವೆಂಪುನಗರದ ಪಂಚಮಂತ್ರ ರಸ್ತೆಯಲ್ಲಿರುವ ಅವರ ನಿವಾಸಕ್ಕೆ ತಂದಿರಿಸಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

ಜನಪ್ರತಿ ನಿಧಿಗಳು, ಗಣ್ಯರು, ಸಾಹಿತಿಗಳು, ಕವಿಗಳು, ಪ್ರಗತಿಪರರು, ಸಂಗೀತಾಸಕ್ತರು ಸೇರಿದಂತೆ ಸಾವಿರಾರು ಜನರು ಭೇಟಿ ನೀಡಿ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದಿದ್ದರು. ಬುಧವಾರ ಬೆಳಗ್ಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪಾರ್ಥಿವ ಶರೀರಕ್ಕೆ ಹೂಗುಚ್ಛವನ್ನಿಟ್ಟು ಅಂತಿಮ ನಮನ ಸಲ್ಲಿಸಿದರು. ಕುಟುಂಬದವರಿಗೆ ಸಾಂತ್ವಾನ ಹೇಳಿದರು.

ಡಿಸಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಒ ಕೆ.ಎಂ.ಗಾಯತ್ರಿ ಅವರು ಆಗಮಿಸಿ ಜಿಲ್ಲಾಡಳಿತದ ಪರವಾಗಿ ಗೌರವ ವಂದನೆ ಸಲ್ಲಿಸಿದರು. ಬಳಿಕ ಅವರ ನಿವಾಸದಿಂದ ಅಂಬುಲೆನ್ಸ್ ವಾಹನದಲ್ಲಿ ನೇರವಾಗಿ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್ ಅನಿಲ ಚಿತಾಗಾರಕ್ಕೆ ತರಲಾಯಿತು. ನಂತರ, ಪೊಲೀಸರು ಶಿಷ್ಟಾಚಾರದ ಪ್ರಕಾರ ತಾರಾನಾಥ್ ಅವರ ಪಾರ್ಥಿವ ಶರೀರಕ್ಕೆ ನಾಲ್ವರು ಪೊಲೀಸರು ಪರೇಡ್ ಕಮಾಂಡರ್ ಸಮ್ಮುಖದಲ್ಲಿ ರಾಷ್ಟ್ರಧ್ವಜವನ್ನಿರಿಸಿದರು. ನಂತರ, ಸರ್ಕಾರದ ಪರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅವರು ಪುಷ್ಪಗುಚ್ಛವನ್ನಿಟ್ಟು ಗೌರವ ಸಲ್ಲಿಸಿದರು.

ಬಳಿಕ, ಶಸ್ತ್ರಸಜ್ಜಿತ ಪೊಲೀಸರು ರಾಷ್ಟ್ರಗೀತೆಯನ್ನು ನುಡಿಸುತ್ತಿದ್ದಂತೆ ಮೂರು ಸುತ್ತಿನ ಕುಶಾಲ ತೋಪು ಹಾರಿಸಿದರು. ವಾಲಿ ಫೈರಿಂಗ್ ಮಾಡಿದ ನಂತರ ಬಂದೂಕನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ತಿರುಗಿಸಿ ಒಂದು ನಿಮಿಷ ಮೌನ ಆಚರಿಸುವ ಮೂಲಕ ಗೌರವ ವಂದನೆ ಸಲ್ಲಿಸಿದರು.

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, (ಜಿಪಂ) ಬೆಂಗಳೂರು ನಗರ ಜಿಲ್ಲೆ.

ಸಂ:ತೋಉನಿ/ಜಿಪಂ/ಬೆಂನಜಿ/ವಿ-1/02/2024-25/25 ದಿನಾಂಕ : 10.06.2024

ಟೆಂಡರ್ ಪ್ರಕಟಣೆ

ವಿಷಯ: ಬೆಂಗಳೂರು ನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು, ವಾಹನ ಚಾಲಕ, ಗ್ರೂಪ್ – ಡಿ ಸೇವೆಯನ್ನು ಒದಗಿಸಲು ಇ-ಟೆಂಡರ್ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

2024–25ನೇ ಸಾಲಿನಲ್ಲಿ ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿ.ಪಂ) ಬೆಂಗಳೂರು ನಗರ ಜಿಲೆ, ಕಬ್ಬನ್ ಪಾರ್ಕ್ ಕಛೇರಿಗೆ ಬೆರಳಚ್ಚುಗಾರರು, ವಾಹನ ಚಾಲಕರು, ಗ್ರೂಪ್ ಡಿ ಸೇವೆಯನ್ನು ಈ ಕಛೇರಿಗಳಿಗೆ ಅವಶ್ಯವಿರುವ ಸಿಬ್ಬಂದಿಗಳನ್ನು ಪೂರೈಸಲು ಹೊರ ಸಂಪನ್ಮೂಲಗಳಿಂದ ಸೇವೆಯನ್ನು ಪಡೆಯಲು ಉದ್ದೇಶಿಸಲಾಗಿದೆ. ಅದರಂತೆ ಅರ್ಹ ಮತ್ತು ಅನುಭವ ಹೊಂದಿದ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಏಜೆನ್ಸಿ ಹೊರಗುತ್ತಿಗೆದಾರ ವ್ಯಕ್ತಿ/ಸಂಸ್ಥೆಗಳಿಂದ E-procurement portal ನಲ್ಲಿ ಇ-ಟೆಂಡರ್ ಅನ್ನು ಜುಲೈ–2024 ರಿಂದ ಜೂನ್–2025 ರವರೆಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳ ಟೆಂಡರ್ ಅರ್ಜಿಗಳನ್ನು ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ. (ಹೆಚ್ಚಿನ ವಿವರಗಳನ್ನು www.e-proc.kar.in ವಿಳಾಸದಲ್ಲಿ ಪಡೆಯಬಹುದು). (1) ಅರ್ಜಿಗಳನ್ನು ಸಲ್ಲಿಸುವ ಪ್ರಾರಂಭಿಕ ದಿನಾಂಕ: **10.06.2024**. (2) ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **21.06.2024**. (3) ಟೆಂಡರ್ ತೆರೆಯುವ ದಿನಾಂಕ: **24.06.2024, ಸಂಜೆ: 3.00 ಗಂಟೆ.** (4) ಟೆಂಡರ್ ತೆರೆಯುವ ಸ್ಥಳ: **ತೋಟಗಾರಿಕೆ** ಉಪನಿರ್ದೇಶಕರ ಕಛೇರಿ (ಜಿಪಂ) ಬೆಂಗಳೂರು ನಗರ ಜಿಲ್ಲೆ, ಕಬ್ಬನ್ ಪಾರ್ಕ್

ಸಹಿ/-
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, (ಜಿಪಂ)
ಬೆಂಗಳೂರು ನಗರ ಜಿಲ್ಲೆ.

ವಾಇಸಂಇ/ಬನ್ನ/298/ಐಡಿ ಸಾಲು/2024-25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಅಟಲ್ ಭೂಜಲ್ ಯೋಜನೆ

ನೋಡಲ್ ಅಧಿಕಾರಿಗಳ ಕಚೇರಿ, ಜಿಲ್ಲಾ ಕಾರ್ಯ ನಿರ್ವಹಣಾ ಘಟಕ, ಕೋಲಾರ,
No 631, Thirumala Nilaya, Antharagange Road, Sapthagiri Nagara, Keelukote, Kolar 563101.Email:dpmukolar1@gmail.com

ಸಂಖ್ಯೆ:ನೋಅ/ಅ.ಭೂ.ಯೋ/ಕೋ/ಟೆಂಡರ್ ಪ್ರಕಟಣೆ/37/2024–25
ದಿನಾಂಕ:11.06.2024

ಟೆಂಡರ್ ಪ್ರಕಟಣೆ ಸಂಖ್ಯೆ: 01/2024–25/ ದಿನಾಂಕ:11.06.2024

ಅಟಲ್ ಭೂಜಲ ಯೋಜನೆಯಡಿಯಲ್ಲಿ Providing Vehicle such as Maruthi Swift Dezire/ Toyota Etios Maruthi SX-4A/ Equivalent (A/C) on monthly Basis with driver to DPMU Office Kolar, ಒಂದು ವಾಹನವನ್ನು ಪಡೆಯಲು ಮ್ಯಾನ್ಯುಯಲ್ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸರಬರಾಜುದಾರರು ಹೆಚ್ಚಿನ ವಿವರಗಳನ್ನು ಕೆಳ ಸಹಿದಾರರ ಕಛೇರಿಗೆ ಸಂಪರ್ಕಿಸಿ ವಿವರಗಳನ್ನು ಪಡೆಯಬಹುದಾಗಿದೆ. ಟೆಂಡರ್ ದಾಖಲೆಗಳನ್ನು ಪಡೆಯಲು ದಿನಾಂಕ: **11.06.2024** ರಿಂದ **29.06.2024** ಸಮಯ ಸಂಜೆ: **04.00** ಗಂಟೆವರೆಗೆ. ಭರ್ತಿಮಾಡಿದ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.06.2024** ಸಂಜೆ **05.30** ಗಂಟೆಯವರೆಗೆ.

ಸಹಿ/- ನೋಡಲ್ ಅಧಿಕಾರಿಗಳ ಕಾರ್ಯಾಲಯ,
ಡಿ.ಪಿ.ಎಂ.ಯು, ಅಟಲ್ ಭೂಜಲ ಯೋಜನೆ, ಕೋಲಾರ ಜಿಲ್ಲೆ

ವಾಇಸಂಇ/ಕೋಲಾರ/ಆರ್.ಓ.ಸಂಖ್ಯೆ:26/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ

ಮುಖ್ಯ ವೈದ್ಯಾಧಿಕಾರಿಗಳ ಕಛೇರಿ ನಾಗಮಂಗಲ–571432.
ಮಂಡ್ಯ. ದೂ–08234–286006
ಸಂ:ತಾ.ಸಾ.ಆ.ನಾ.ಗ್ರೂಪ್ ಡಿ ಟೆಂಡರ್01/2023–24 ದಿ:10–06–2024.
Email ID:thnagamangala@gmail.com

ಇ-ಟೆಂಡರ್ ಅಧಿಸೂಚನೆ (2-www.eproc.kar.gov.in)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ನಾಗಮಂಗಲ ಇಲ್ಲಿನ 2024–25ನೇ ಸಾಲಿಗೆ ಹೊರಗುತ್ತಿಗೆ ಆಧಾರದ "ಮೇಲೆ 12 ಜನ ಗ್ರೂಪ್–ಡಿ ನೌಕರರ ಸೇವೆ ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಕರೆಯಲಾಗಿದೆ. ಟೆಂಡರ್ ವಿವರಗಳು ಈ ಕೆಳಕಂಡಂತಿರುತ್ತದೆ. ಟೆಂಡರ್ ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ : **11.06.2024** ರಿಂದ ಸಂಜೆ **4.00** ರವರೆಗೆ ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **29.06.2024**. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02.07.2024** ಬೆಳಗ್ಗೆ **11.00 ಸಂತರ.** ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ : **ತಾಂತ್ರಿಕ ಲಕೋಟೆಯನ್ನು ಪರಿಶೀಲಿಸಿದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು.** ಟೆಂಡರಿನ ಅಂದಾಜು ಮೊತ್ತ : **ರೂ. 25,00,000 (ರೂ. ಇಪ್ಪತ್ತೈದು ಲಕ್ಷ ರೂ ಮಾತ್ರ).** ಟೆಂಡರ್ ನಿಗದಿಪಡಿಸಿದ ಇ.ಎಂ.ಡಿ. (2.5%) : **ರೂ. 62,500–00 (ರೂ.ಅರವತ್ತೆರಡು ಸಾವಿರದ ಐದು ನೂರು ಮಾತ್ರ)**

ಸಹಿ/–ಮುಖ್ಯ ವೈದ್ಯಾಧಿಕಾರಿಗಳು,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ

ವಾಇಸಂಇ/ಸಿಬಿ–ಮಂ/ಕೆಎಸ್‌ಎಂಸಿಎ/842/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ
ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, ಬೆಂಗಳೂರು–560091.

ಸಂ: ಹಿಸತೋನಿ/ರಾರಾನ/ಟೆಂ/01/2024–25/ಒಹಚ್ಚು/316 ದಿನಾಂಕ: 12.06.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜರಾಜೇಶ್ವರಿನಗರ ವಲಯ, ಇವರು ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ
1	ಯಶವಂತಪುರ ವಿಧಾನಸಭಾ ಕ್ಷೇತ್ರದ ಪಾರ್ಕ್‌ಗಳು, ಮೀಡಿಯನ್ ಮತ್ತು ಸರ್ಕಲ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ : ರೂ. 12,00,000/– ಇಎಂಡಿ: ರೂ. 30,000/–**
2	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಪಾರ್ಕ್‌ಗಳು, ಮೀಡಿಯನ್ ಮತ್ತು ಸರ್ಕಲ್‌ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ : ರೂ. 8,00,000/– ಇಎಂಡಿ: ರೂ. 20,000/–**

1) ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in 14.06.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. 2) ಪೂರ್ವಭಾವಿ ಸಭೆಯ ದಿನಾಂಕ: **19.06.2024ರ ಬೆಳಗ್ಗೆ 11:30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24.06.2024ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25.06.2024ರ ಸಂಜೆ 4:30 ಗಂಟೆಗೆ.**

ಸಹಿ/– ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು,
ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ, ಬೆಂಗಳೂರು.

ಕರ್ನಾಟಕ ಸರ್ಕಾರ

ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಎ6/ಜಿಪಟಿ/ಟೆಂಡರ್/ಸಿಆರ್–22/2024–25 ದಿ: 11.06.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನಲ್ಲಿ ಅನುದಾನ ನಿರೀಕ್ಷೆ ಮೇರೆಗೆ ಯಾವ್ಯಾದಾರರು ರೆಕ್ಕೀಕರ್ಣಕೆಯಡಿ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಮಾನ್ಸೂನ್ ಮುಂಗಡ ಕಾಮಗಾರಿ" ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024–25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗ್ಲುರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18.06.2024 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ,

ವಾ.ಸ.ಸಂ.ಇ/ಕೆಎಸ್‌ಎಂಸಿಎ/ಶಿ/46/06/24–25/84

ನಗರಸಭಾ ಕಾರ್ಯಾಲಯ, ಹುಣಸೂರು

ಮೈಸೂರು ಜಿಲ್ಲೆ – 571105
ದೂ:08222-252048 ಇಮೇಲ್: hsteff_ulb_hunsur@yahoo.co.in

ಸಂಖ್ಯೆ:ಹುನಸಅ/ತಾಂತ್ರಿಕ ಶಾಖೆ/ಟೆಂ–01/2024–25 ದಿನಾಂಕ:11.06.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ ಅನುದಾನದಡಿ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ ಹಾಗೂ ಅರ್ಹ ಸರಬರಾಜುದಾರರಿಂದ KW-1 & KG-1ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹಗುತ್ತಿಗೆದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಯ **ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT15796/Call-2** ಅಂದಾಜು ಮೊತ್ತ ರೂ. 15.00 ಲಕ್ಷ ಹಾಗೂ **DMA/2023-24/IND1398/Call-3** ಟೆಂಡರ್ ಅರ್ಜಿದಾರರುಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 26–06–2024** ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27–06–2024.** ಆರ್ಥಿಕ ಬಿಡ್ ಕಾಮಗಾರಿ ನಿಭಂದನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ:– ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು
ಸಹಿ/– ಪೌರಾಯುಕ್ತರು, ನಗರಸಭೆ, ಹುಣಸೂರು

DIPR/MYS/KAVITA/87/24-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಲಬುರಗಿ ವಲಯ, ಕಲಬುರಗಿ

ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817,
E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಗಸಕ/ಕೆ.ಎಲ್.ಬಿ ಟೌನ್ಸ್/ಅಮೃತ್–2.0/2024–25/269 ದಿನಾಂಕ:11–06–2024

–: ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಸೂಚನೆ (3ನೇ ಕರೆ) :–

1) ಕಾಮಗಾರಿ ವಿವರ: ಅಮೃತ್–2.0 ಯೋಜನೆಯಡಿ ಕಲಬುರಗಿ ಜಿಲ್ಲೆಯ ಚಿಂಚೋಳಿ, ಚಿತ್ತಾಪೂರ, ವಾಡಿ, ಕಮಲಾಪೂರ, ಸೇಡಂ ಹಾಗೂ ಕಾಳಗಿ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಯ ಜೊತೆಗೆ 05 ವರ್ಷದ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (01 ವರ್ಷದ ಡಿಫೆಕ್ಟ್ ಲಿಯಾಬಿಲಿಟಿ ಅವಧಿ ಸೇರಿ) ಡಿಸೈನ್, ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್‌ಫರ್ (DBOT) ಮುಖಾಂತರ– ಪೆಂಡಿಂಗ್ ಇರುವುದಿಲ್ಲ. **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2024–25/ಡಬ್ಲ್ಯೂ.ಎಸ್/ವರ್ಕ_ಇಂಡೆಂಟ್ 202).** 2) ಕಾಮಗಾರಿ ಅಂದಾಜು ಮೊತ್ತ : **ರೂ. 22948.45 ಲಕ್ಷಗಳು (ಜಿ.ಎಸ್.ಟಿ ಸೇರಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 2,30,00,000/–, 5) ಕಾಮಗಾರಿಯ ಅವಧಿ : 18 ತಿಂಗಳು (ಮಳೆಗಾಲ ಸೇರಿ), 6) ಪೂರ್ವ ಟೆಂಡರ್ ಸಭೆ ದಿನಾಂಕ: **19–06–2024 ಸಮಯ : 11:30 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **27–06–2024 ಸಮಯ : 17:30 ಗಂಟೆಯವರೆಗೆ** 8) ಟೆಂಡರ್ ತೆರೆಯುವ ದಿನಾಂಕ: **29–06–2024 ಸಮಯ : 11:00 ನಂತರ,** 9) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817, E-mail ID : kwbceklb14@gmail.com 10) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/78/ಕೆ.ಎಸ್.ಎಂ.ಸಿ.ಎ/2024–25

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
ಫೋನ್ : 26678572 : 26600512 : 26609066.

ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ–ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ಗೆ ಮತ್ತು ಜಾಮೀನುದಾರ(ರು)ಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ **ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ**, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇದರೆ ಹಾಗೆ" ಆಧಾರದ ಮೇಲೆ ದಿನಾಂಕ : **19.07.2024** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡಿಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) **ದಿನಾಂಕ: 18.07.2024 ರಂದು ಸಂಜೆ 5:00 ಗಂಟೆಯ** ಒಳಗೆ ಆನ್‌ಲೈನ್ ಮೂಲಕ **(RTGS/NEFT)** ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ **ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್** ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ.	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಅರ್ನೆಸ್ಟ್ ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀ. ವಸಂತ ಕುಮಾರ್. ಕೆ. ನಂ.5, 1ನೇ ಕ್ರಾಸ್, ಹಳೇ ಟೋಲ್ ಗೇಟ್ ಎದುರು, ಮೈಸೂರು ರಸ್ತೆ, ಬಿ.ಇ.ಎಲ್. ಲೇಔಟ್, ಬೆಂಗಳೂರು–26. ಶಾಖೆ : ಪ್ರಧಾನ ಕಛೇರಿ	ನಂ. 15, 1ನೇ ಕ್ರಾಸ್, ಮೈಸೂರು ರಸ್ತೆ, ಗುಡ್ಡದಹಳ್ಳಿ, ಬಿ.ಬಿ.ಎಂ.ಪಿ. ವಾರ್ಡ್ ನಂ. 43 ಪಾದರಾಯನಪುರ, ಹೊಸ ವಾರ್ಡ್ ನಂ. 136 ಜಗಜೀವನರಾಮನಗರ, ಪಿ.ಐ.ಡಿ. ನಂ. 43–2–15, ಬೆಂಗಳೂರು. ಪೂರ್ವ – ಪಶ್ಚಿಮ : ಉತ್ತರಾರ್ಧ ಭಾಗಕ್ಕೆ :– 75 ಅಡಿಗಳು ದಕ್ಷಿಣಾರ್ಧ ಭಾಗಕ್ಕೆ :– 72.6 ಅಡಿಗಳು, ಉತ್ತರ – ದಕ್ಷಿಣ : ಪೂರ್ವಾರ್ಧ ಭಾಗಕ್ಕೆ :– 30 ಅಡಿಗಳು, ಪಶ್ಚಿಮಾರ್ಧ ಭಾಗಕ್ಕೆ:–15 ಅಡಿಗಳು ಪೂರ್ವಕ್ಕೆ: ಅಮಲ್ ಮಿಲ್ ಕಾಂಪೌಂಡ್, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಕಣ್ಣಮ್ಮ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ : ಪ್ಯಾರೇಜ್ ಮತ್ತು ಸುಶೀಲಮ್ಮ ರವರಿಗೆ ಸೇರಿದ ಸ್ವತ್ತು.	ರೂ. 1,21,00,000/– (ಒಂದು ಕೋಟಿ ಇಪ್ಪತ್ತೊಂದು ಲಕ್ಷ ಮಾತ್ರ)	ರೂ. 12,10,000/– (ಹನ್ನೆರಡು ಲಕ್ಷ ಹತ್ತು ಸಾವಿರದ ಮಾತ್ರ)	06.06.2024 ಕ್ಕೆ ರೂ. 1,11,46,825/– ಜೊತೆಗೆ ಬಡ್ಡಿ ದಿನಾಂಕ 07.06.2024	19.07.2024 ಬೆಳಗ್ಗೆ :– 10 : 00 ರಿಂದ 11 : 00 ರವರೆಗೆ
2.	ಶ್ರೀ. ರಫೀಕ್ ಅಹಮ್ಮದ್ ಎಂ. ನಂ.454, ಮಾಗಡಿ ರಸ್ತೆ, ಹೀಗ್ಗನಹಳ್ಳಿ, 1ನೇ ಹಂತ, ಬೆಂಗಳೂರು–58. ಶಾಖೆ : ಟಿ. ದಾಸರಹಳ್ಳಿ	1ನೇ ಶೆಡ್ಯೂಲ್:– ಹೊಸ ಮುನಿಸಿಪಲ್ ನಂ. 25/8, ಹಳೇ ನಂ. 1/4, ಮಾಗಡಿ ರಸ್ತೆ, ಹೀಗ್ಗನ ವಿಲೇಜ್, ಬಿ.ಬಿ.ಎಂ.ಪಿ. ವಾರ್ಡ್ ನಂ. 11 ಹೀಗ್ಗನ ಇಂಡಸ್ಟ್ರಿಯಲ್ ಏರಿಯಾ, ಪಿ.ಐ.ಡಿ. ನಂ. 11–95–25/8, ಬೆಂಗಳೂರು. ಪೂರ್ವ–ಪಶ್ಚಿಮ : 33 ಅಡಿಗಳು ಮತ್ತು ಉತ್ತರ–ದಕ್ಷಿಣ : 51+53/2 ಅಡಿಗಳು ಪೂರ್ವಕ್ಕೆ : ರಂಗಸ್ವಾಮಿ ರವರ ಸ್ವತ್ತು, ಪಶ್ಚಿಮಕ್ಕೆ : ಇದೇ ಸ್ವತ್ತಿನ ಉಳಿಕೆ ಭಾಗ ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ : ಅಲ್ಲಮ್ಮ ರವರಿಗೆ ಸೇರಿದ ಸ್ವತ್ತು. 2ನೇ ಶೆಡ್ಯೂಲ್ :– ಹೊಸ ಮುನಿಸಿಪಲ್ ನಂ. 25/8, ಹಳೇ ನಂ. 1/4, ಮಾಗಡಿ ರಸ್ತೆ, ಹೀಗ್ಗನ ವಿಲೇಜ್, ಬಿ.ಬಿ.ಎಂ.ಪಿ. ವಾರ್ಡ್ ನಂ. 11 ಹೀಗ್ಗನ ಇಂಡಸ್ಟ್ರಿಯಲ್ ಏರಿಯಾ, ಪಿ.ಐ.ಡಿ. ನಂ. 11–95–25/8, ಬೆಂಗಳೂರು. ಪೂರ್ವ–ಪಶ್ಚಿಮ : 3 1/2 ಅಡಿಗಳು ಮತ್ತು ಉತ್ತರ–ದಕ್ಷಿಣ : 57 ಅಡಿಗಳು ಪೂರ್ವಕ್ಕೆ : ಇದೇ ಸ್ವತ್ತಿನ ಉಳಿಕೆ ಭಾಗ, ಪಶ್ಚಿಮಕ್ಕೆ : ಕುಮ್ಮಾರಾಮ ದರ್ಶನ್ ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ : ಖಾಲಿ ಸ್ವತ್ತು	ರೂ. 1,42,50,000/– (ಒಂದು ಕೋಟಿ ನಲವತ್ತೆರಡು ಲಕ್ಷ ಐವತ್ತು ಸಾವಿರ ಮಾತ್ರ)	ರೂ. 14,25,000/– (ಹದಿನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಮಾತ್ರ)	04.06.2024 ಕ್ಕೆ ರೂ. 1,15,65,495/– ಜೊತೆಗೆ ಬಡ್ಡಿ ದಿನಾಂಕ 07.06.2024	19.07.2024 ಬೆಳಗ್ಗೆ :– 10 : 00 ರಿಂದ 11 : 00 ರವರೆಗೆ
3.	ಶ್ರೀ. ನರಸಿಂಹರಾಜು. ಎನ್. ನಂ.2811/1921, ಮೇಗಲ ಬೀದಿ ಕನಕಪುರ ಟೌನ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಶಾಖೆ : ರಾಮನಗರ	ನಂ.2811ಎ/6921ಎ, ಮೇಗಲ ಬೀದಿ, ಬಸವರ ಮಾರಮ್ಮ ದೇವಸ್ಥಾನ, ಎದುರುಗಡೆ 2ನೇ ವಿಭಾಗ, ವಾರ್ಡ್ ನಂ.7, ಬ್ಲಾಕ್ ನಂ.16, ಕನಕಪುರ ಟೌನ್, ಪಿ.ಐ.ಡಿ. ನಂ. 16–6–59ಎ, ಕನಕಪುರ. ಪೂರ್ವ–ಪಶ್ಚಿಮ : 60 ಅಡಿಗಳು ಮತ್ತು ಉತ್ತರ – ದಕ್ಷಿಣ : 18.6 ಅಡಿಗಳು ಪೂರ್ವಕ್ಕೆ : ಇದೇ ನಂ. ಸ್ವತ್ತಿನ ಉಳಿಕೆ ಭಾಗ ಮತ್ತು ಖಾಲಿ ಜಾಗ ಪಶ್ಚಿಮಕ್ಕೆ : ಅಪ್ಪರಮ್ಮ ಗಲ್ಲಿ ರೋಡ್, ಉತ್ತರಕ್ಕೆ : ತಿಮ್ಮಮ್ಮ ರವರಿಗೆ ಸೇರಿದ ಮನೆ. ದಕ್ಷಿಣಕ್ಕೆ : ಬಸಪ್ಪ ರವರಿಗೆ ಸೇರಿದ ಮನೆ.	ರೂ. 41,00,000/– (ನಲವತ್ತೊಂದು ಲಕ್ಷ ಮಾತ್ರ)	ರೂ. 4,10,000/– (ನಾಲ್ಕು ಲಕ್ಷ ಹತ್ತು ಸಾವಿರದ ಮಾತ್ರ)	06.06.2024 ಕ್ಕೆ ರೂ. 48,23,820/– ಜೊತೆಗೆ ಬಡ್ಡಿ ದಿನಾಂಕ 07.06.2024	19.07.2024 ಬೆಳಗ್ಗೆ :– 10 : 00 ರಿಂದ 11 : 00 ರವರೆಗೆ
4.	ಶ್ರೀ. ಕೆ. ಹೆಚ್. ರಾಮಕೃಷ್ಣಯ್ಯ ನಂ. 272, 2ನೇ ಮುಖ್ಯ ರಸ್ತೆ, ಚೌಡೇಶ್ವರಿ ನಗರ, ಲಗ್ಗೆರೆ, ಬೆಂಗಳೂರು–58. ಶಾಖೆ : ಜ್ಯೋತಿನ್ಯೂಎನಗರ	ಫ್ಲಾಟ್ ನಂ. 2007, ಎಫ್ ವಲಯ 8ನೇ ಬ್ಲಾಕ್, ಸರ್ವೆ ನಂ.08, ಸೂಕತಿರ ಗ್ರಾಮ, ದಾಸಪ್ಪರ ಕೆಂಗೇರಿ ಲೇಔಟ್, ಬೆಂಗಳೂರು ಪಿ.ಐ.ಡಿ. ನಂ. 600059023 ಪೂರ್ವ–ಪಶ್ಚಿಮ : 09 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ : 12 ಮೀಟರ್‌ಗಳು. ಪೂರ್ವಕ್ಕೆ : ಸೈಟ್ ನಂ. 2006, ಪಶ್ಚಿಮಕ್ಕೆ : ಸೈಟ್ ನಂ. 2008 ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ : ಸೈಟ್ ನಂ. 2004	ರೂ. 41,04,000/– (ನಲವತ್ತೊಂದು ಲಕ್ಷ ನಾಲ್ಕು ಸಾವಿರ ಮಾತ್ರ)	ರೂ.4,10,400/– (ನಾಲ್ಕು ಲಕ್ಷ ಹತ್ತು ಸಾವಿರದ ನಾಲ್ಕು ನೂರು ಮಾತ್ರ)	04.06.2024 ಕ್ಕೆ ರೂ. 14,65,095/– ಜೊತೆಗೆ ಬಡ್ಡಿ ದಿನಾಂಕ 07.06.2024	19.07.2024 ಬೆಳಗ್ಗೆ :– 11 : 00 ರಿಂದ 12 : 00 ರವರೆಗೆ
5.	ಶ್ರೀಮತಿ. ಚಿನ್ನಾಮಮ್ಮ (ಮೃತ) ಕಾನೂನುಬದ್ಧ ವಾರಸುದಾರರು, 1) ಶ್ರೀ. ರಂಗನಾಥ (ಮಗ), 2) ಶ್ರೀ. ಬಾಬೀಕ್. (ಮಗ), 3) ರಷ್ಮ (ಮಗಳು), ನಂ. 8/4, 3ನೇ ಕ್ರಾಸ್, ಮುನೇಶ್ವರ ಸಿ ಬ್ಲಾಕ್, ಮತ್ತಿಕೆರೆ, ಆರ್. ಟಿ. ನಗರ ಪೋಸ್ಟ್, ಬೆಂಗಳೂರು–32. ಶಾಖೆ : ಆರ್. ಟಿ. ನಗರ	ಹಳೆ ನಂ. 8, ಹೊಸ ನಂ. 8/4, ಮುನೇಶ್ವರ "ಸಿ" ಬ್ಲಾಕ್, ಆರ್.ಟಿ.ನಗರ, ಪಿ.ಐ.ಡಿ. ನಂ. 97–28–8/4, ಬೆಂಗಳೂರು. ಪೂರ್ವ – ಪಶ್ಚಿಮ : 44 ಅಡಿಗಳು ಉತ್ತರ – ದಕ್ಷಿಣ : 15 ಅಡಿಗಳು ಪೂರ್ವಕ್ಕೆ : ಚರಂಡಿ ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಹಳೆ ನಂ.8ರ ಉಳಿಕೆ ಸ್ವತ್ತು, ದಕ್ಷಿಣಕ್ಕೆ : ಶಾರದಮ್ಮನವರ ಸ್ವತ್ತು.	ರೂ. 27,40,000/– (ಇಪ್ಪತ್ತೇಳು ಲಕ್ಷ ನಲವತ್ತು ಸಾವಿರ ಮಾತ್ರ)	ರೂ.2,74,000/– (ಎರಡು ಲಕ್ಷ ಎಪ್ಪತ್ತನಾಲ್ಕು ಸಾವಿರದ ಮಾತ್ರ)	06.06.2024 ಕ್ಕೆ ರೂ. 53,25,584/– ಜೊತೆಗೆ ಬಡ್ಡಿ ದಿನಾಂಕ 07.06.2024	19.07.2024 ಬೆಳಗ್ಗೆ :– 11 : 00 ರಿಂದ 12 : 00 ರವರೆಗೆ

ತಪಾಸಣೆಯ ದಿನಾಂಕ ಮತ್ತು ಸಮಯ : 15.07.2024 ಬೆಳಗ್ಗೆ 10:00 ರಿಂದ ಸಂಜೆ 5:00 ರವರೆಗೆ.	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್
ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 18.07.2024 ಬೆಳಗ್ಗೆ ಸಂಜೆ 5:00 ರವರೆಗೆ.	ಖಾತೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ ಖಾತೆ ಸಂಖ್ಯೆ : 000220105013061
ಬಿಡ್ ಗುಣಾಂಕ : ರೂ. 50,000/–	IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಅನುಸಾರವಾಗಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡಿದ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿ ಒದಗಿಸಿದ ಲಿಂಕನ್ನು ನೋಡಿ ಅಂದರೆ, "ಅಡಮಾನ ಸ್ವತ್ತುಗಳ ಮಾರಾಟ" ಶೀರ್ಷಿಕೆಯ ಅಡಿಯಲ್ಲಿ **www.bccbl.co.in**, ಅಥವಾ ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ **ದಿನಾಂಕ: 19.07.2024** ರಂದು ಬೆಳಗ್ಗೆ : 10.00 ರಿಂದ 12.00 ರವರೆಗೆ **https://bankauctions.in** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://bankauctions.in** ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ ಪಡೆಯಬಹುದು ಮತ್ತು **E-auction (tentatively on 18.07.2024) from M/s 4 Closure, Mr. Prakash Reddy / Srinivasa (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 8142000809 & 8142000064, E-mail: prakash@bankauctions.in & srinivas@bankauctions.in** ಹೆಚ್ಚಿನ ಮಾಹಿತಿಗಾಗಿ : **bccbrec2021@gmail.com Mobile Number : 080-26600512, 26609066.**

ದಿನಾಂಕ: 12.06.2024
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ– ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕಾನಿಇಂ/ಬೃಕಾದವಿ/ಸಕಾಇಂ–6/813/2024–25 ದಿನಾಂಕ: 12.06.2024

ಸಾರ್ವಜನಿಕರ ಎಚ್ಚರಿಕೆಗಾಗಿ

ಸಾರ್ವಜನಿಕರ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು 2x150ಎಂ.ವಿ.ಎ. 220/66 ಕೆ.ವಿ. ಹೊರಾಂಗಣ ಜಿ.ಐ.ಎಸ್ ವಿದ್ಯುತ್ ಉಪ–ಕೇಂದ್ರ, ಕಿಯೋನಿಕ್ಸ್ ಸಿಟಿ ವಿದ್ಯುತ್ ಉಪ–ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡ ವಿದ್ಯುತ್ ಉಪ–ಕೇಂದ್ರದಿಂದ ಭೂಗತ ಕೇಬಲ್‌ನ್ನು ಎಳೆಯಬೇಕಿರುತ್ತದೆ.

(ಅ) ಹಾಲಿ ಇರುವ 220–220 ಕೆ.ವಿ. ಮೈಲಸಂದ್ರ–ಯರಂಡನಹಳ್ಳಿ ವಿದ್ಯುತ್ ಉಪ–ಕೇಂದ್ರದಿಂದ 220 ಕೆ.ವಿ. 1200 ಚ.ಮಿ.ಮೀ ವ್ಯಾಸದ ಸುಮಾರು 3.44 ಕಿ.ಮೀ ಉದ್ದದ ಭೂಗತ (ಒಂಟಿ ಮಾರ್ಗದ ಲೀಡೋ) ಕೇಬಲ್‌ನ್ನು ಅಳವಡಿಸಲಾಗಿದೆ.

(ಆ) ಹಾಲಿ ಇರುವ 220 ಕೆ.ವಿ. ಸೋಮನಹಳ್ಳಿ–ಹೂಡಿ ವಿದ್ಯುತ್ ಉಪ–ಕೇಂದ್ರದಿಂದ 220 ಕೆ.ವಿ. 1200 ಚ.ಮೀ.ಮೀ ವ್ಯಾಸದ ಸುಮಾರು 6.352 ಉದ್ದದ ಭೂಗತ ಕೇಬಲ್‌ನ್ನು ಅಳವಡಿಸಲಾಗಿದೆ.

ಸದರಿ ಭೂಗತ ಕೇಬಲ್‌ನಲ್ಲಿ **ದಿನಾಂಕ: 13.06.2024 ರಂದು** ಅಥವಾ ತದನಂತರದ ದಿನಗಳಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಲಾಗುವುದು.

ಸದರಿ ಭೂಗತ ಕೇಬಲ್ ವಿದ್ಯುತ್ ಮಾರ್ಗವು 220–220 ಕೆ.ವಿ. ಮೈಲಸಂದ್ರ–ಯರಂಡನಹಳ್ಳಿ ವಿದ್ಯುತ್ ಉಪ–ಕೇಂದ್ರದಿಂದ ಹಾಗೂ 220 ಕೆ.ವಿ. ಸೋಮನಹಳ್ಳಿ–ಹೂಡಿ ವಿದ್ಯುತ್ ಉಪ–ಕೇಂದ್ರದಿಂದ 220/66 ಕೆ.ವಿ. ಕಿಯೋನಿಕ್ಸ್ ಸಿಟಿ ಹೊರಾಂಗಣ ಜಿ.ಐ.ಎಸ್ ವಿದ್ಯುತ್ ಉಪ–ಕೇಂದ್ರಕ್ಕೆ ಈ ಕೆಳಕಂಡ ಮಾರ್ಗದ ಮೂಲಕ ಹಾದು ಹೋಗುತ್ತದೆ.

1. ಎ.ಇ.ಸಿ.ಎಸ್. ಬಡಾವಣೆ (ಸಿಂಗಸಂದ್ರ ಹತ್ತಿರ)
2. ಬೆಂಗಳೂರು–ಹೊಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಾದು ಹೋಗುವ ಪಿ.140–ಪಿ–142
3. ಬಿ.ಎಂ.ಆರ್.ಸಿ.ಎಲ್ ಮೆಟ್ರೋ ಪಿಲ್ಲರ್‌ನ ಬಲಭಾಗದಲ್ಲಿ ಹಾದುಹೋಗಿದೆ. (ಪಿಲ್ಲರ್–396)
4. ಬೆರಟೇನ ಅಗ್ರಹಾರ ಮೆಟ್ರೋ ನಿಲ್ದಾಣ.
5. ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣ
6. ಕೋನಪ್ಪನ ಅಗ್ರಹಾರ ಮೆಟ್ರೋ ನಿಲ್ದಾಣ
7. ಹೊಸ ರೋಡ್ ಮೆಟ್ರೋ ನಿಲ್ದಾಣ
8. ಎಲ್ಲಿನಾ ಲಿಮಿಟ್ಸ್ (1ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ) ಮೂಲಕ 220/66 ಕೆ.ವಿ. ಹೊರಾಂಗಣ ಜಿ.ಐ.ಎಸ್. ಕಿಯೋನಿಕ್ಸ್ ಸಿಟಿ ವಿದ್ಯುತ್ ಉಪ–ಕೇಂದ್ರಕ್ಕೆ

ಆದುದರಿಂದ ಈ ಮೇಲ್ಕಂಡ 220 ಕೆ.ವಿ. ಭೂಗತ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಯಾವುದೇ ಸಾರ್ವಜನಿಕರು / ಬೃ.ಬೆಂ.ಮ.ಪಾಲಿಕೆ / ಸರ್ಕಾರಿ ಸಂಸ್ಥೆಗಳು /ಪಟ್ಟಣ ಪಂಚಾಯಿತಿ / ಗ್ರಾಮ ಪಂಚಾಯಿತಿ / GAIL / ಖಾಸಗಿ ಸಂಸ್ಥೆ/ ರೈತರುಗಳು ರಸ್ತೆಯನ್ನು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅವಘಡಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಹಾಗೂ ಇದರಿಂದ ಆಗುವ ನಿಗಮದ ಆಸ್ತಿ ಹಾಗೂ ಕಂದಾಯ ನಷ್ಟವನ್ನು ಸಂಬಂಧಪಟ್ಟವರೇ ಭರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃಹತ್ ಕಾಮಗಾರಿ ದಕ್ಷಿಣ ವಿಭಾಗ, ಕವಿಪ್ರನಿನಿ, ಆನಂದರಾವ್ ವೃತ್ತ,
ಬೆಂಗಳೂರು–560009

IN THE COURT OF THE 1st ADDITIONAL SENIOR CIVIL JUDGE & JMFC AT ANEKAL

O.S. No. 996/2019

BETWEEN: Smt. Narayanamma
Dead by Lrs and others ...**Plaintiffs**
AND : Sri Venkataswamy Reddy @ Pilla Reddy
And others ...**Defendants**

Service of Summons to the Defendant No.3 and 10 through paper publication

D-3. Smt. Mala, D/o Venkataswamy Reddy, W/o Manjunatha Reddy, Aged about 39 years, R/a Upstair of TVS Showroom, Attibele-Anekal Road, Attibele.

D-10. Sri. Rajendra Prasad, S/o K.N. Shyamanna, Aged about 49 years, R/a Kugur Village & Post, Sarjapura Hobli, Anekal Taluk, Bangalore Dist.

Whereas, the plaintiffs have filed the above suit against you and others for the relief of partition and other reliefs in respect of suits schedule properties. Take notice that the above case is posted for your appearance **on 12/07/2024**. You are hereby called to appear before this Hon'ble court either in person or through advocate, duly authorized on the aforesaid date of hearing, failing which the matter will be decided on merits placing you ex-party.

SCHEDULE

1. All that piece and parcel of the Property bearing Survey No. 1/2, measuring 2 acres 19 guntas, situated at Billa Chikkanahalli Village, Sarjapura Hobli, Anekal Taluk, Bangalore Dist., bounded on:- **East by** : Road, **West by** : Land of Pilla Reddy, **North by** : Sy.No.2/3, **South by** : Land of Narayana Reddy.
2. All that piece and parcel of the Property bearing Survey No. 182/17, measuring 1 acre 24 guntas, situated at Bikkanahalli Village, Sarjapura Hobli, Anekal Taluk, bounded on:- **East by** : Property belongs to K.C. Parameshi, **West by** : Property belongs to Dalsai Muniswamy Reddy, **North by** : Property belongs to Machanna, **South by** : Property belongs to B.Nagaraj Reddy.
3. All that piece and parcel of the Property bearing Survey No.68/3, measuring 14 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Rajakaluve, **West by** : Road, **North by** : Land of Nagaraja Reddy, **South by** : Land of Venu.
4. All that piece and parcel of the Property bearing Survey No.146/1, measuring 10 guntas, situated at Handenahalli Village, Sarjapura Hobli, Anekal Taluk, Bangalore Dist., bounded on:- **East by** : Inamti land, **West by** : Land of Chinnaswamy Reddy, **North by** : Land of Bhadraiah, **South by** : Land of Jayamma.
5. All that piece and parcel of the Property bearing Survey No.276/1, measuring 0.13 guntas, situated at Muthanallur Amanikere Village, Sarjapura Hobli, Anekal Taluk, Bangalore Dist., bounded on:- **East by** : Land of Babu Reddy, **West by:** Remaining land in Same Sy.No., **North by** : Rajakaluve, **South by** : Land of Chinnaswamy Reddy (Mathkur).
6. All that piece and parcel of the Property bearing Survey No.276/1, measuring 0.12 guntas, situated at Muthanallur Amanikere Village, Sarjapura Hobli, Anekal Taluk, Bangalore Dist., bounded on:- **East by** : Remaining land in Same Sy.No., **West by** : Land of Babu Reddy, **North by** : Rajakaluve, **South by** : Land of Chinnaswamy Reddy (Mathkur).
7. All that piece and parcel of the Property bearing Survey No.45/5, measuring 1 acre 17 guntas, situated at Handenahalli Village, Sarjapura Hobli, Anekal Taluk, Bangalore Dist., bounded on:- **East by** : Road, **West by** : Road, **North by** : Land of Babu Reddy, **South by** : Land of H.C.Veerappa Reddy.
8. All that piece and parcel of the Property bearing Survey No.2/3, measuring 0.26.08 guntas, situated at Billachikkanahalli Village, Sarjapura Hobli, Anekal Taluk, Bangalore Dist., bounded on:- **East by** : Road, **West by** : Sy.No.2/4, **North by** : Sy.No.2/2, **South by**: Sy.No. 1/2.
9. All that piece and parcel of the Property bearing Survey No.2/5, measuring 27 guntas, situated at Billachikkanahalli Village, Sarjapura Hobli, Anekal Taluk, Bangalore Dist., bounded on:- **East by** : Sy.No.2/4, **West by** : Private Land, **North by** : Sy.No.2/6, **South by** : Sy.No 1/1.
10. All that piece and parcel of the Property bearing Survey No.2/4, measuring 0.14 guntas, situated at Billachikkanahalli Village, Sarjapura Hobli, Anekal Taluk, Bangalore Dist., bounded on:- **East by** : Sy.No.2/3, **West by** : Sy.No.2/5, **North by** : Sy.No.2/6, **South by** : Sy.No.2/2.
11. All that piece and parcel of the Property bearing Survey No.2/4, measuring 0.14 guntas, situated at Billachikkanahalli Village Sarjapura Hobli, Anekal Taluk, Bangalore Dist., bounded on:- **East by** : Sy.No.2/3, **West by** : Sy.No. 2/5, **North by** : Sy.No. 2/6, **South by** : Sy.No.2/2.
12. All that piece and parcel of the Property bearing Survey No.79/4, measuring 0.10 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Land of Krishna Reddy, **West by** : Land of Chinnaswamy Reddy, **North by** : Land of Babu Reddy, **South by** : Sy.No.79/5.
13. All that piece and parcel of the Khaneshumari No.64, red tiled house, measuring 54 X 36 feet, situated at Handenahalli Village, Sarjapura Hobli, Anekal Taluk, Bangalore Dist., bounded on:- **East by** : Land of Ramesh, **West by** : Road, **North by** : Road, **South by** : Land of Manjunatha Reddy.
14. All that piece and parcel of the Property bearing Survey No.79/5, measuring 0.10 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Land of Krishna Reddy, **West by** : Land of Chinnaswamy Reddy, **North by** : Sy.No.79/4, **South by** : Private Land.
15. All that piece and parcel of the Property bearing Survey No. 104/4, measuring 0.26 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Land of Kugur Munivenkatappa, **West by** : Land of Chikka Rama Reddy, **North by** : Rajakaluve, **South by** : Rajakaluve.
16. All that piece and parcel of the Property bearing Sy.No.71/1A, measuring 0.08 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Rajakaluve, **West by**: Land of Sunkamanama, Chennappa, **North by** : Land of Chinnaswamy Reddy, **South by** : Land of Bhadra Reddy.
17. All that piece and parcel of the Property bearing Survey No.71/1B, measuring 8 guntas, situated at Sollepura Village, Sarjapura Hobli, Anekal Taluk, Bangalore Dist., bounded on:- **East by** : Rajakaluve, **West by** : Land of Sunkamma and Chinnappa, **North by** : Land of Chinnaswamy Reddy, **South by** : Land of Bhadra Reddy.
18. All that piece and parcel of the Property bearing Survey No.26/15, measuring 14.0.08 guntas, situated at Handenahalli Village, Sarjapura Hobli, Anekal Taluk, Bangalore Dist., bounded on:- **East by**: Land of Bhadra Reddy, **West by** : Land of Gopal Reddy, **North by** : Road, **South by** : Road.
19. All that piece and parcel of the Property bearing Survey No.84/1, measuring 13 guntas, situated at Handenahalli Village, Sarjapura Hobli, Anekal Taluk, Bangalore Dist., bounded on:- **East by** : Land of Rajappa, **West by** : Land of Rudra Reddy, **North by** : Land of Krishna Reddy, **South by** : Land of Ramaswamy Reddy.
20. All that piece and parcel of the Property bearing Survey No 262/4, measuring 0.1.08 guntas, situated at Muthanallur Amanikere Village, Sarjapura Hobli, Anekal Taluk, Bangalore Dist., bounded on:- **East by** : Land of Veerappa Reddy, **West by** : Sy.No.263/1, **North by** : Sy.No.271, **South by** : Sy.No.262/2.
21. All that piece and parcel of the Property bearing Survey No.263/1, measuring 9 guntas, situated at Muthanallur Amanikere Village, Sarjapura Hobli, Anekal Taluk, Bangalore Dist., bounded on:- **East by** : Sy.No.262/4, **West by** : Sy.No.271, **North by** : Sy.No.271, **South by** : Sy.No.263.

Given under my hand and seal on the 31.05.2024 at Anekal.

By Order of the Court, Chief Ministerial Officer, Senior Civil Judge & JMFC Court, Anekal.

Advocate for plaintiffs: **G. Narayanappa**, Advocate No.4, 1st Floor, Yellappa Building, Anekal Town, Anekal, Bangalore Dist.

---

pnb Housing Finance Limited
Ghar Ki Baat

ಅನುಬಂಧ–4ಎ–ಸ್ಥಿರಾಸ್ತಿ ಮಾರಾಟದ ಸಾರ್ವಜನಿಕ ಇ–ಹರಾಜು

[illegible] www.pnbhousing.com

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	ರೂ. [illegible]	ರೂ. [illegible]	12.07.2024	ರೂ. 10,000/–	26.06.2024 [illegible] 11:00 [illegible] 5:00	13.07.2024 [illegible]	[illegible]
[illegible]	[illegible]	[illegible]	[illegible]	ರೂ. [illegible]	ರೂ. [illegible]	12.07.2024	ರೂ. 10,000/–	26.06.2024 [illegible] 11:00 [illegible] 5:00	13.07.2024 [illegible]	[illegible]
[illegible]	[illegible]	[illegible]	[illegible]	ರೂ. [illegible]	ರೂ. [illegible]	12.07.2024	ರೂ. 10,000/–	26.06.2024 [illegible] 11:00 [illegible] 5:00	13.07.2024 [illegible]	[illegible]

[illegible] www.bankauctions.com [illegible] auction@pnbhousing.com [illegible] www.pnbhousing.com [illegible]

[illegible] ದಿನಾಂಕ: 12.06.2024 ಸಹಿ/– ಅಧಿಕೃತ ಅಧಿಕಾರಿ, ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

7 ಇಂಡಿ ಸಂಸದರ ಮೇಲೆ ಅನರ್ಹತೆಯ ತೂಗುಕತ್ತಿ



ಸುದ್ದಿ ಸಮಗ್ರ

ಇತ್ತೀಚೆಗೆ ಮುಕ್ತಾಯಗೊಂಡ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಐಎನ್‌ಡಿಐಎ ಮೈತ್ರಿಕೂಟ ರಾಜ್ಯದ ಒಟ್ಟು ಲೋಕಸಭಾ ಕ್ಷೇತ್ರಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಕಡೆ ಗೆಲುವು ಸಾಧಿಸಿದೆ. ಆದರೆ, ಹೊಸದಾಗಿ ಆಯ್ಕೆಯಾಗಿರುವ ಮೈತ್ರಿಕೂಟದ ಕನಿಷ್ಠ 6 ಸದಸ್ಯರು ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ. ಈ ಸಂಸದರ ವಿರುದ್ಧದ ಆರೋಪಗಳು ಸಾಬೀತಾದಲ್ಲಿ, 2 ವರ್ಷಗಳಿಗೂ ಹೆಚ್ಚು ಕಾಲ ಜೈಲು ಶಿಕ್ಷೆಗೊಳಪಡುವ ಸಾಧ್ಯತೆಗಳಿರುತ್ತವೆ. ಒಂದೊಮ್ಮೆ ಈ ಸಂಸದರು ಶಿಕ್ಷೆಗೆ ಗುರಿಯಾದರೆ, ಅವರು ಸಂಸತ್‌ನ ಸದಸ್ಯತ್ವ ಕಳೆದುಕೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ನೂತನ ಸಂಸದರ ರಾಜಕೀಯ ಭವಿಷ್ಯ ಡೋಲಾಯಮಾನವಾಗಿದೆ.

ವೀರೇಂದ್ರ ಸಿಂಗ್

ಚಂದೌಲಿ ಲೋಕಸಭಾ ಕ್ಷೇತ್ರದಿಂದ ಮಾಜಿ ಸಚಿವ ಮಹೇಂದ್ರ ನಾಥ್ ಪಾಂಡೆ ಅವರನ್ನು ಸೋಲಿಸಿದ ವೀರೇಂದ್ರ ಸಿಂಗ್, ಗಂಭೀರ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿರುವ ಸಮಾಜವಾದಿ ಪಕ್ಷದ ಮತ್ತೊಬ್ಬ ಅಭ್ಯರ್ಥಿ. ಒಂದೊಮ್ಮೆ ಇವರ ವಿರುದ್ಧ ತೀರ್ಪು ಪ್ರಕಟಗೊಂಡು ಎರಡು ವರ್ಷಗಳಿಗೂ ಹೆಚ್ಚು ಅವಧಿ ಶಿಕ್ಷೆಯಾದಲ್ಲಿ ಲೋಕಸಭೆಯಿಂದ ಉಚ್ಚಾಟನೆಗೊಳ್ಳುವ ಸಾಧ್ಯತೆಗಳಿವೆ.

ಅನರ್ಹಗೊಂಡಿದ್ದ ರಾಗಾ

ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೊಳಗಾದ ನಂತರ ಹಲವಾರು ರಾಜಕೀಯ ನಾಯಕರು ತಮ್ಮ ಸಂಸತ್ ಸದಸ್ಯತ್ವ ಕಳೆದುಕೊಂಡಿರುವುದು ಗಮನಾರ್ಹವಾಗಿದೆ. ಈ ಹಿಂದೆ ಮೋದಿ ಉಪನಾಮದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣದಲ್ಲಿ ನ್ಯಾಯಾಲಯದಿಂದ ಎರಡು ವರ್ಷಗಳ ಶಿಕ್ಷೆಗೆ ಗುರಿಯಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಲೋಕಸಭೆ ಸ್ಥಾನವನ್ನು ಅನರ್ಹಗೊಳಿಸಲಾಗಿತ್ತು . ಈಗ ಒಂದೊಮ್ಮೆ ಐಎನ್‌ಡಿಐಎ ಮೈತ್ರಿಕೂಟದ ಈ ವಿಜೇತ ಅಭ್ಯರ್ಥಿಗಳ ಶಿಕ್ಷೆಗೊಳಗಾದರೆ ಸಂಸತ್ ಸ್ಥಾನದಿಂದ ಅನರ್ಹಗೊಳ್ಳುವ ಸಾಧ್ಯತೆ ಹೆಚ್ಚಾಗಿವೆ.

ಆರೋಪಗಳು ಸಾಬೀತಾಗಿ 2 ವರ್ಷಕ್ಕೂ ಹೆಚ್ಚು ಕಾಲ ಜೈಲು ಶಿಕ್ಷೆಯಾದರೆ ಸಂಸತ್ ಸದಸ್ಯತ್ವದಿಂದ ಅನರ್ಹತೆ

ಧರ್ಮೇಂದ್ರ ಯಾದವ್

ಉತ್ತರ ಪ್ರದೇಶದ ಅಜಂಗಢದಲ್ಲಿ ಹಾಲಿ ಸಂಸದ ದಿನೇಶ್ ಲಾಲ್ ಯಾದವ್ ಅವರನ್ನು ಪರಾಭವಗೊಳಿಸಿ ಧರ್ಮೇಂದ್ರ ಯಾದವ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಯಾದವ್ ವಿರುದ್ಧ ನಾಲ್ಕು ಪ್ರಕರಣಗಳು ಬಾಕಿ ಉಳಿದಿವೆ. ಈ ಪ್ರಕರಣಗಳಲ್ಲಿ ಯಾದವ್‌ಗೆ ಎರಡು ವರ್ಷಗಳಿಗಿಂತಲೂ ಹೆಚ್ಚು ಶಿಕ್ಷೆ ವಿಧಿಸಿದರೆ ಸಂಸತ್ ಸದಸ್ಯತ್ವವನ್ನು ಸಹ ಕಳೆದುಕೊಳ್ಳಬೇಕಾಗಬಹುದು.

ಅಫ್ಜಲ್ ಅನ್ಸಾರಿ

ಘಾಜಿಪುರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಸಮಾಜವಾದಿ ಪಕ್ಷದ ಅಫ್ಜಲ್ ಅನ್ಸಾರಿಗೆ ಗ್ಯಾಂಗ್ ಸ್ಟರ್ ಕಾಯ್ದೆ ಪ್ರಕರಣದಲ್ಲಿ ನಾಲ್ಕು ವರ್ಷ ಶಿಕ್ಷೆ ವಿಧಿಸಲಾಗಿದೆ. ಕಳೆದ ತಿಂಗಳು ಅನ್ಸಾರಿ ವಿರುದ್ಧದ ತೀರ್ಪನ್ನು ತಡೆ ಹಿಡಿದಿದ್ದ ಅಲಹಾಬಾದ್ ಹೈಕೋರ್ಟ್, ಚುನಾವಣೆಯಲ್ಲಿ ಸ್ಪರ್ಧಿಸಲು ಆತನಿಗೆ ಅನುಮತಿ ನೀಡಿತ್ತು . ಬೇಸಿಗೆ ರಜೆ ಬಳಿಕ ಕೋರ್ಟ್ ಪುನರಾರಂಭಗೊಂಡಾಗ ಜುಲೈನಲ್ಲಿ ಈ ವಿಷಯದ ಬಗ್ಗೆ ವಿಚಾರಣೆ ಕೈಗೆತ್ತಿಕೊಳ್ಳಲಿದೆ. ಒಂದೊಮ್ಮೆ ಕೋರ್ಟ್ ತೀರ್ಪನ್ನು ಎತ್ತಿಹಿಡಿದರೆ, ಆಗ ಅನ್ಸಾರಿ ತಮ್ಮ ಸಂಸತ್ ಸದಸ್ಯತ್ವ ಕಳೆದುಕೊಳ್ಳಬೇಕಾಗಬಹುದು.

ರಾಂಭುವಲ್ ನಿಶಾದ್

ಸುಲ್ತಾನ್‌ಪುರ ಕ್ಷೇತ್ರದಲ್ಲಿ ಬಿಜೆಪಿಯ ಮನೇಕಾ ಗಾಂಧಿ ಅವರನ್ನು ಸೋಲಿಸಿ ಗೆದ್ದಿರುವ ರಾಂಭುವಲ್ ನಿಶಾದ್ ಅವರ ವಿರುದ್ಧ ಗ್ಯಾಂಗ್‌ಸ್ಟರ್ ಕಾಯ್ದೆಯಲ್ಲಿ ಒಂದು ಸೇರಿ ಒಟ್ಟು ಎಂಟು ಪ್ರಕರಣಗಳು ದಾಖಲಾಗಿವೆ. 2024ರ ಲೋಕಸಭೆ ಚುನಾವಣೆಯ ದುರ್ಬಲ ವಿಜೇತರಲ್ಲಿ ಅವರು ಕೂಡ ಸೇರಿದ್ದಾರೆ.

ಬಾಬು ಸಿಂಗ್ ಕುಶ್ವಾಹ

18ನೇ ಲೋಕಸಭಾ ಚುನಾವಣೆಯಲ್ಲಿ ಜೌನ್‌ಪುರ ಕ್ಷೇತ್ರದಿಂದ ಗೆಲುವು ಸಾಧಿಸಿರುವುದರೊಂದಿಗೆ ಬಾಬು ಸಿಂಗ್ ಕುಶ್ವಾಹ ಅನುಭವಿಸಿದ್ದ ರಾಜಕೀಯದಲ್ಲಿನ 10 ವರ್ಷಗಳ ವನವಾಸ ಅಂತ್ಯಗೊಂಡಿತ್ತು. ಈ ಹಿಂದೆ ಮಾಯಾವತಿ ಮುಖ್ಯಮಂತ್ರಿಯಾಗಿದ್ದಾಗ ಅವರ ಸಂಪುಟದಲ್ಲಿ ಸಚಿವರಾಗಿದ್ದ ಕುಶ್ವಾಹ, ಎನ್‌ಆರ್‌ಎಚ್‌ಎಂ ಹಗರಣಕ್ಕೆ ಸಂಬಂಧಿಸಿದಂತೆ ಹಲವು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಅವರ ವಿರುದ್ಧ ದಾಖಲಾಗಿರುವ 25 ಪ್ರಕರಣಗಳ ಪೈಕಿ ಎಂಟು ಪ್ರಕರಣಗಳಲ್ಲಿ ಆರೋಪಗಳನ್ನು ಹೊರಿಸಲಾಗಿದೆ.



ಇಮ್ರಾನ್ ಮಸೂದ್

ಸಹರಾನ್‌ಪುರ ಕ್ಷೇತ್ರದಿಂದ ಗೆದ್ದಿರುವ ಕಾಂಗ್ರೆಸ್‌ನ ಇಮ್ರಾನ್ ಮಸೂದ್ ವಿರುದ್ಧ ಎಂಟು ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಇಡಿಯಿಂದ ದಾಖಲಿಸಿಕೊಳ್ಳಲಾಗಿರುವ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣಗಳು ಸೇರಿವೆ. ಈ ಸಂಬಂಧ ಮಸೂದ್ ವಿರುದ್ಧ ಎರಡು ಪ್ರಕರಣಗಳಲ್ಲಿ ಇಡಿ ಆರೋಪಗಳನ್ನು ಹೊರಿಸಿದೆ.

ಚಂದ್ರಶೇಖರ್ ಆಜಾದ್

ನಗೀನಾ ಮೀಸಲು ಕ್ಷೇತ್ರದಿಂದ ಜಯಗಳಿಸಿರುವ ಆಜಾದ್ ಸಮಾಜವಾದಿ ಪಕ್ಷದ ಅಭ್ಯರ್ಥಿ ಚಂದ್ರಶೇಖರ್ ಆಜಾದ್ ಅವರ ವಿರುದ್ಧ 30ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಪ್ರಕರಣದಲ್ಲಿ ಎರಡು ವರ್ಷಕ್ಕಿಂತ ಹೆಚ್ಚು ಶಿಕ್ಷೆಯಾದರೆ, ಆಜಾದ್ ರಾಜಕೀಯ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ದುರ್ಗಮ ಪ್ರದೇಶಕ್ಕೆ ಚುನಾವಣಾ ಸಾಮಗ್ರಿ ರವಾನೆ

ಲೋಕಾ ಕಣದ ಯಶಸ್ಸಿನಲ್ಲಿ ವಾಯುಪಡೆ ಮಹತ್ತರ ಪಾತ್ರ

ಹೊಸದಿಲ್ಲಿ : ಇತ್ತೀಚೆಗೆ ಮುಕ್ತಾಯಗೊಂಡ ಲೋಕಸಭಾ ಚುನಾವಣಾ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಳ್ಳುವಲ್ಲಿ ಭಾರತೀಯ ವಾಯುಪಡೆ ಮಹತ್ವದ ಪಾತ್ರ ನಿರ್ವಹಿಸಿದೆ. ವಿದ್ಯುನ್ಮಾನ ಮತಯಂತ್ರಗಳನ್ನು ದುರ್ಗಮ ಪ್ರದೇಶಗಳಿಗೆ ತಲುಪಿಸುವಲ್ಲಿ ಅದರ ಕೊಡುಗೆ ದೊಡ್ಡದಾಗಿದೆ. ವಾಯುಪಡೆಯ ವಿಮಾನಗಳು 1750ಕಾರ್ಯಾಚರಣೆಗಳಲ್ಲಿ 1000ಗಂಟೆಗಳಿಗೂ ಅಧಿಕ ಸಮಯ ಹಾರಾಟ ನಡೆಸಿವೆ ಎಂದು ವಾಯುಪಡೆ ಈ ಕುರಿತಂತೆ ಮಾಹಿತಿಯನ್ನು ಹಂಚಿಕೊಂಡಿದೆ. ಈ ಮೂಲಕ ಭಾರತೀಯ ವಾಯುಪಡೆ ಯುದ್ಧಕಾಲದಂತೆಯೇ ಶಾಂತಿ ಕಾಲದಲ್ಲೂ ದೇಶದ ಆಂತರಿಕ-ಬಾಹ್ಯ ಅಗತ್ಯಗಳನ್ನು ಪೂರೈಸಿ ರಾಷ್ಟ್ರ ನಿರ್ಮಾಣದಲ್ಲಿ ತನ್ನ ಪಾತ್ರವನ್ನು ಹೊಣೆಗಾರಿಕೆಯಿಂದ ನಿರ್ವಹಿಸಿದೆ.

ಎಲ್ಲಿ ರಸ್ತೆ ಮೂಲಕ ಒಯ್ಯುವುದು ಭದ್ರತೆಯ ಆತಂಕಕ್ಕೆ ಕಾರಣವಾಗುತ್ತದೋ ಅಂತಹ ಪ್ರದೇಶಗಳಿಗೆ ಚುನಾವಣಾ ಮತಯಂತ್ರಗಳನ್ನು ತಲುಪಿಸುವಲ್ಲಿ ವಾಯುಪಡೆ ನೆರವಾಗಿದೆ. ಹಾಗೆಯೇ ಭಾರತೀಯ ಚುನಾವಣಾ ಆಯೋಗದ ಸಿಬ್ಬಂದಿಯನ್ನು ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸುವಲ್ಲೂ ಅದು ಕೈಜೋಡಿಸಿದೆ. ಈ ಹಿಂದಿನ ಚುನಾವಣೆಯಂತೆ,ಈ ಬಾರಿ ಕೂಡ ,ಕಳೆದ ಕೆಲವು ತಿಂಗಳುಗಳಲ್ಲಿ ಹೆಲಿಕಾಪ್ಟರ್‌ಗಳು(ಎಂಐ-17), ಲಘು ಬಳಕೆಯ ಹೆಲಿಕಾಪ್ಟರ್‌ಗಳು (ಚೇತಕ್) ಮತ್ತು ಸ್ವದೇಶಿ ನಿರ್ಮಿತ ಸುಧಾರಿತ ಲಘು ಹೆಲಿಕಾಪ್ಟರ್‌ಗಳು (ಎಎಲ್‌ಎಚ್ ಧ್ರುವ್)ಈ ಸಂಬಂಧದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿವೆ ಎಂದು ವಾಯುಪಡೆ ಬುಧವಾರ ಮಾಹಿತಿ ಹಂಚಿಕೊಂಡಿದೆ.

1750 ಕಾರ್ಯಾಚರಣೆಗಳು

1000 ಗಂಟೆಗಳಿಗೂ ಅಧಿಕ ಸಮಯ ಹಾರಾಟ

ಎರಡು ದಿನ ಮೊದಲೇ ವ್ಯವಸ್ಥೆ

ಈ ಕಾರ್ಯಾಚರಣೆಯು ಕಾಲಮಿತಿಯ ಹೊಣೆ ಹೊಂದಿದ್ದು , ಕುಗ್ರಾಮ ಅಥವಾ ತೀರಾ ಹಿಂದುಳಿದ ಮತ್ತು ದುರ್ಗಮ ಪ್ರದೇಶಗಳಿಗೆ ಚುನಾವಣಾ ಅಧಿಕಾರಿಗಳನ್ನು ಮತದಾನಕ್ಕೆ ಎರಡು ದಿನಗಳ ಮುಂಚೆಯೇ ಮತ್ತು ಮತದಾನದಂದು ಅವರನ್ನು ಹಿಂದಕ್ಕೆ ಕರೆದೊಯ್ಯುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲಾಗಿದೆ.ಲೋಕಸಭೆಯ 543ಕ್ಷೇತ್ರಗಳಿಗೆ ಏ.19ರಿಂದ ಜೂ.1ರವರೆಗೆ 7ಹಂತಗಳಲ್ಲಿ ಮತದಾನ ನಡೆದಿದ್ದು , ಜೂ.4ರಂದು ಫಲಿತಾಂಶ ಬಂದು, 293ಸ್ಥಾನಗಳೊಂದಿಗೆ ಬಿಜೆಪಿ (240)ನೇತೃತ್ವದ ಎನ್‌ಡಿಎ ಮರಳಿ ಅಧಿಕಾರಕ್ಕೆ ಬಂದಿದೆ.ಕಾಂಗ್ರೆಸ್(99) ಕೂಟಕ್ಕೆ 234ಸ್ಥಾನಗಳು ಲಭಿಸಿದ್ದವು.ವಿಶೇಷವಾಗಿ ಜಮ್ಮು-ಕಾಶ್ಮೀರದಿಂದ ಹಿಡಿದು ತಮಿಳ್ನಾಡುವರೆಗೆ ನಾಗಾಲ್ಯಾಂಡಿನಿಂದ ಹಿಡಿದು ಗುಜರಾತ್ ವರೆಗೆ ಈ ರೀತಿ ವಾಯುಪಡೆ ಕಾರ್ಯಾಚರಣೆ ನಡೆಸಿದ್ದಾಗಿ ಹೇಳಿಕೆ ತಿಳಿಸಿದೆ.

ಮೊದಲ 3 ದಿನ ಸಂಸದರಿಗೆ ಪ್ರಮಾಣ | ಜುಲೈನಲ್ಲಿ ಬಜೆಟ್ ಮಂಡನೆ

24ರಿಂದ ಲೋಕಸಭೆ ಅಧಿವೇಶನ

ಹೊಸದಿಲ್ಲಿ: ಪ್ರಸಕ್ತ ಸಾಲಿನ ಲೋಕಸಭೆಯ ಮೊದಲ ಅಧಿವೇಶನ ಇದೇ 24ರಿಂದ ಆರಂಭವಾಗಲಿದ್ದು ಮೊದಲ ಮೂರು ದಿನ ನೂತನ ಸಂಸದರಿಗೆ ಪ್ರಮಾಣ ವಚನ ಬೋಧನೆಯಾಗಲಿದೆ.

ಜತೆಗೆ ನೂತನ ಸ್ಪೀಕರ್ ಆಯ್ಕೆಯೂ ಆಗಲಿದ್ದು, ಜುಲೈ ಅಂತ್ಯದ ವೇಳೆಗೆ ಮೊದಲ ಬಜೆಟ್ ಮಂಡನೆಯಾಗಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಜೂ.27ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಮುಂದಿನ ಐದು ವರ್ಷಗಳ ಸರ್ಕಾರದ ಯೋಜನೆಯನ್ನು ಈ ಭಾಷಣದಲ್ಲಿ ಪ್ರಸ್ತಾಪಿಸಲಿದ್ದಾರೆ. ಜು.3ರಂದು ಅಧಿವೇಶನ ಮುಗಿಯಲಿದೆ ಎಂದು ರಿಜಿಜು ಹೇಳಿದ್ದಾರೆ. ಜುಲೈ ಮೂರನೇ ವಾರ ಮತ್ತೆ ಲೋಕಸಭೆ ಮತ್ತು ರಾಜ್ಯಸಭೆ ಅಧಿವೇಶನ ಆರಂಭವಾಗಲಿದ್ದು, ಆಗ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮ್ಮ ಏಳನೇ ಬಜೆಟ್ ಮಂಡಿಸಲಿದ್ದಾರೆ. ಈ ಮೂಲಕ ಸತತವಾಗಿ ಏಳು ಬಜೆಟ್ ಮಂಡನೆ ಮಾಡಿದ ಕೀರ್ತಿಗೆ ಪಾತ್ರರಾಗಲಿದ್ದಾರೆ. ಮೊರಾರ್ಜಿ ದೇಸಾಯಿ ಅವರ ದಾಖಲೆಯನ್ನು ಮುರಿಯಲಿದ್ದಾರೆ.

ಲೆ.ಜ. ದ್ವಿವೇದಿ ಭೂಸೇನಾ ಮುಖ್ಯಸ್ಥ

ಹೊಸದಿಲ್ಲಿ: ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರನ್ನು ವಿಶ್ವದ ಅತಿದೊಡ್ಡ ಮಿಲಿಟರಿ ಪಡೆಗಳಲ್ಲಿ ಒಂದಾದ ಭಾರತೀಯ ಭೂಸೇನೆಯ ಮುಂದಿನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಪ್ರಸ್ತುತ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿರುವ ಲೆಫ್ಟಿನೆಂಟ್ ಜನರಲ್ ದ್ವಿವೇದಿ, ಜೂನ್ 30 ರಂದು ಜನರಲ್ ಮನೋಜ್ ಸಿ ಪಾಂಡೆ ಅವರಿಂದ ಅಧಿ ಕಾರ ವಹಿಸಿಕೊಳ್ಳಲಿದ್ದಾರೆ.

ಲೆಫ್ಟಿನೆಂಟ್ ಜನರಲ್ ದ್ವಿವೇದಿ, ಜುಲೈ 1,1964 ರಂದು ಜನಿಸಿದರು. ಅವರು ರೀವಾ ಸೈನಿಕ್ ಸ್ಕೂಲ್, ನ್ಯಾಷನಲ್ ಡಿಫೆನ್ಸ್ ಕಾಲೇಜ್ ಮತ್ತು ಯುಎಸ್ ಆರ್ಮಿ ವಾರ್ ಕಾಲೇಜಿನ ಹಳೆಯ ವಿದ್ಯಾರ್ಥಿ. ಅವರು ರಕ್ಷಣಾ ಮತ್ತು ನಿರ್ವಹಣಾ ಅಧ್ಯಯನದಲ್ಲಿ ಎಂ ಫಿಲ್ ಮತ್ತು ಕಾರ್ಯತಂತ್ರ, ಅಧ್ಯಯನ ಮತ್ತು ಮಿಲಿಟರಿ ವಿಜ್ಞಾನದಲ್ಲಿ ಎರಡು ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ.

ದ್ವಿವೇದಿ 1984ರ ಡಿಸೆಂಬರ್ 15ರಂದು ಭಾರತೀಯ ಸೇನೆಯ ಪದಾತಿದಳಕ್ಕೆ (ಜಮ್ಮು -ಕಾಶ್ಮೀರ ರೈಫಲ್ಸ್) ಸೇರಿದರು. ತಮ್ಮ 40 ವರ್ಷಗಳ ಸೇವೆಯಲ್ಲಿ ಕಮಾಂಡ್ ಆಫ್ ರೆಜಿಮೆಂಟ್ಸ್ (18 ಜಮ್ಮು -ಕಾಶ್ಮೀರ ರೈಫಲ್ಸ್) ಬ್ರಿಗೇಡ್ (26 ಸೆಕ್ಟರ್ ಅಸ್ಸಾಂ ರೈಫಲ್ಸ್) ಇನ್ಸ್‌ಪೆಕ್ಟರ್ ಜನರಲ್, ಅಸ್ಸಾಂ ರೈಫಲ್ಸ್ (ಪೂರ್ವ) ಮತ್ತು 9 ಕಾರ್ಪ್ಸ್ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

■ 40 ವರ್ಷಗಳ ಸೇವೆಗೆ ಸಂದ ಉನ್ನತ ಗೌರವ

ಸೇನೆಯ ಉಪ ಮುಖ್ಯಸ್ಥರಾಗಿ ನೇಮಕಗೊಳ್ಳುವ ಮೊದಲು ಅವರು, ಲೆಫ್ಟಿನೆಂಟ್ ಜನರಲ್ ಶ್ರೇಣಿಯಲ್ಲಿ 2022-2024 ರವರೆಗೆ ಪದಾತಿದಳದ ಮಹಾನಿರ್ದೇಶಕನಾಗಿ ಮತ್ತು ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ (ಉತ್ತರ ಕಮಾಂಡ್) ಆಗಿ ಸೇವೆ ಸಲ್ಲಿಸಿದ್ದಾರೆ.

ಹತ್ತುಹಲವು ಮಿಲಿಟರಿ ಮನ್ನಣೆಗಳು: ಲೆಫ್ಟಿನೆಂಟ್ ಜನರಲ್ ದ್ವಿವೇದಿ ಅವರನ್ನು, ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ಮೂರು ಜಿಒಸಿ-ಇನ್-ಸಿ ಶ್ಲಾಘನಾ ಪತ್ರಗಳು ಸೇರಿದಂತೆ ಕೆಲವು ಅತ್ಯಂತ ಪ್ರತಿಷ್ಠಿತ ಮಿಲಿಟರಿ ಮನ್ನಣೆಗಳು ಹುಡುಕಿಕೊಂಡು ಬಂದಿವೆ. ಯುಎಸ್ ಆರ್ಮಿ ವಾರ್ ಕಾಲೇಜಿನಲ್ಲಿ ಪ್ರತಿಷ್ಠಿತ ಎನ್.ಡಿ.ಸಿ ಸಮಾನ ಕೋರ್ಸ್‌ನಲ್ಲಿ ಅವರಿಗೆ 'ಡಿಸ್ಟಿಂಗ್ವಿಶ್ಡ್ ಫೆಲೋ' ಪ್ರಶಸ್ತಿ ನೀಡಲಾಗಿದೆ.

ಕಿರು ಸುದ್ದಿ

ಜಮ್ಮು-ಕಾಶ್ಮೀರದಲ್ಲಿ ಎನ್‌ಕೌಂಟರ್: ಉಗ್ರರ ವಧೆ

ಶ್ರೀನಗರ: ಜಮ್ಮು -ಕಾಶ್ಮೀರದ ಕಥುವಾ ಗ್ರಾಮದಲ್ಲಿ ಮಂಗಳವಾರ ತಡರಾತ್ರಿ, ಗುಂಡಿನ ದಾಳಿ ನಡೆಸಿದ ಇಬ್ಬರು ಭಯೋತ್ಪಾದಕರು ಎನ್‌ಕೌಂಟರ್‌ನಲ್ಲಿ ಹತರಾಗಿದ್ದಾರೆ. ಗುಂಡಿನ ಚಕಮಕಿಯಲ್ಲಿ ಅರೆಸೇನಾ ಪಡೆಯ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ಜಮ್ಮುವಿನಲ್ಲಿ ರಾತ್ರಿ ಪ್ರಾರಂಭವಾದ ಎರಡು ಎನ್‌ಕೌಂಟರ್‌ಗಳು ಬೆಳಗಿನವರೆಗೂ ಮುಂದುವರಿದವು. ಸೇನಾ ಠಾಣೆಯ ಮೇಲೆ ನಡೆದ ದಾಳಿಯಲ್ಲಿ ಐವರು ಸೈನಿಕರು ಮತ್ತು ವಿಶೇಷ ಪೊಲೀಸ್ ಅಧಿಕಾರಿ (ಎಸ್ಪಿಒ) ಗಾಯಗೊಂಡಿದ್ದ ದೋಡಾದಲ್ಲಿ ನಡೆದ ದಾಳಿಯೂ ಇದರಲ್ಲಿ ಸೇರಿದೆ.

ಆಸ್ತಿಗಾಗಿ ಮಾವನ ಕೊಲೆಗೆ ಸೊಸೆಯಿಂದಲೇ ಸುಪಾರಿ!

ನಾಗ್ಪುರ: 300 ಕೋಟಿ ರೂ. ಮೌಲ್ಯದ ಕುಟುಂಬದ ಆಸ್ತಿಗಾಗಿ ಸೊಸೆಯೊಬ್ಬಳು ಹಿಟ್ ಅಂಡ್ ರನ್‌ನಲ್ಲಿ ನಡೆಸಿ ತನ್ನ ವೃದ್ಧ ಮಾವನ ಹತ್ಯೆ ಮಾಡಿದ ಘಟನೆ ನಾಗ್ಪುರದಲ್ಲಿ ಬೆಳಕಿಗೆ ಬಂದಿದೆ. ಪಟ್ಟಣ ಯೋಜನಾ ವಿಭಾಗದ ಸಹಾಯಕ ನಿರ್ದೇಶಕಿ ಅರ್ಚನಾ ಮನೀಷ್ ಪುಟ್ಟೇವಾರ್ ಅವರನ್ನು ಈ ಘಟನೆಗೆ ಸಂಬಂಧಿಸಿದಂತೆ ಬಂಧಿಸಿದ ಬಳಿಕ ಈ ಭೀಕರ ಮಾಹಿತಿ ಬೆಳಕಿಗೆ ಬಂದಿದೆ. ಅರ್ಚನಾ ಪುಟ್ಟೇವಾರ್ ಈ ಅಪಘಾತ ನಡೆಸಲು 1 ಕೋಟಿ ರೂ. ಖರ್ಚು ಮಾಡಿದ್ದಾರೆ. ತನ್ನ ಮಾವನನ್ನು ಕೊಲ್ಲಲು ಬಳಸಿದ ಕಾರನ್ನು ಖರೀದಿಸಲು ಆರೋಪಿಗೆ ಹಣ ನೀಡಿದ್ದಾಳೆ. ಕೊಲೆಯನ್ನು ಅಪಘಾತದಂತೆ ಬಿಂಬಿಸಲು ಈ ತಂತ್ರವನ್ನು ಸೊಸೆ ಮಾಡಿದ್ದಾಳೆಂದು ಪೊಲೀಸರು ತಿಳಿಸಿದ್ದಾರೆ .

ಅತ್ತೆಯನ್ನು 95 ಬಾರಿ ಇರಿದು ಕೊಂದ ಸೊಸೆಗೆ ಮರಣದಂಡನೆ

ಭೋಪಾಲ್: 2022ರಲ್ಲಿ ತನ್ನ ಅತ್ತೆಯನ್ನು 95ಕ್ಕೂ ಹೆಚ್ಚು ಬಾರಿ ಕುಡಗೋಲಿನಿಂದ ಇರಿದು ಕೊಂದ 24 ವರ್ಷದ ಮಹಿಳೆಗೆ ಮಧ್ಯಪ್ರದೇಶದ ರೇವಾ ಜಿಲ್ಲೆಯ ನ್ಯಾಯಾಲಯ ಮರಣದಂಡನೆ ವಿಧಿಸಿದೆ. ಜಿಲ್ಲೆಯ ಅತ್ರೈಲಾ ಗ್ರಾಮದ ನಿವಾಸಿ ಕಾಂಚನ್ ಕೋಲ್, ತನ್ನ 50 ವರ್ಷದ ಅತ್ತೆ ಸರೋಜ್ ಕೋಲ್ ಅವರನ್ನು ಕೊಂದ ಆರೋಪದಲ್ಲಿ ತಪ್ಪಿತಸ್ಥರು ಎಂದು ರೇವಾದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪದ್ಮ ಜಾತವ್ ತೀರ್ಪು ನೀಡಿದ್ದಾರೆ, ಎಂದು ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ವಿಕಾಸ್ ದ್ವಿವೇದಿ ತಿಳಿಸಿದ್ದಾರೆ. ಸರೋಜ್ ಕೋಲ್ ಅವರ ಮಗ ಪೊಲೀಸರಿಗೆ ಮಾಹಿತಿ ನೀಡಿ, ಗಂಭೀರ ಸ್ಥಿತಿಯಲ್ಲಿದ್ದ ತಾಯಿಯನ್ನು ಸಂಜಯ್ ಗಾಂಧಿ ಮೆಮೋರಿಯಲ್ ಆಸ್ಪತ್ರೆಗೆ ಕರೆದೊಯ್ದರೂ ಆಕೆ ಬದುಕಿರಲಿಲ್ಲ. ಆಕೆಯ ಪತಿ ವಾಲ್ಮೀಕ್ ಕೋಲ್ ಅವರನ್ನು ಸಹ-ಆರೋಪಿ ಎಂದು ಹೆಸರಿಸಲಾಗಿದ್ದರೂ, ಸಾಕ್ಷ್ಯಗಳ ಕೊರತೆಯಿಂದ ಖುಲಾಸೆಗೊಳಿಸಲಾಯಿತು, ಎನ್ನಲಾಗಿದೆ.

ಮೋದಿ ಸಂಪುಟದಲ್ಲಿ ಸ್ಥಾನ ನೀಡಿ: ಪಿಒಕೆ ಕಾರ್ಯಕರ್ತ

ಶ್ರೀನಗರ: ಸರ್ಕಾರದಲ್ಲಿ ಏನಾದರೂ ಜವಾಬ್ದಾರಿ ನೀಡಿ ಅಥವಾ ತಮ್ಮನ್ನು ಸಚಿವರನ್ನಾಗಿ ಮಾಡುವಂತೆ ಲಂಡನ್‌ನಲ್ಲಿ ನೆಲೆಸಿರುವ ಪಾಕ್ ಆಕ್ರಮಿತ ಕಾಶ್ಮೀರದ ಕಾರ್ಯಕರ್ತ ಅಮ್ಜದ್ ಅಯೂಬ್ ಮಿರ್ಜಾ ದೊಡ್ಡ ಬೇಡಿಕೆಯನ್ನು ಇಟ್ಟಿದ್ದಾರೆ.

ನಾನು ಭಾರತೀಯ ಆದ್ದರಿಂದ ಸರ್ಕಾರದಲ್ಲಿದ್ದಾಗ ದೇಶ ಸೇವೆ ಮಾಡುವ ಅವಕಾಶವನ್ನು ಪಡೆಯಬೇಕು ಎಂದು ಮನವಿ ಮಾಡಿದ್ದಾರೆ. ವಿಡಿಯೋದಲ್ಲಿ ಮಿರ್ಜಾ, ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗುವ ಮೂಲಕ ನೆಹರೂ ನಂತರ ಯಾರೂ ಮಾಡಲಾಗದ ಕೆಲಸವನ್ನು ಮಾಡಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ ಎಂದಿದ್ದಾರೆ.

ಬೇಡಿಕೆಗಳ ಪ್ರಣಾಳಿಕೆ ಬಿಡುಗಡೆ ಮಾಡಿದ ಹಿಂದುಗಳು

ಲಂಡನ್: ಜುಲೈ 4 ರ ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಇಂಗ್ಲೆಂಡ್ ಹಿಂದುಗಳು ಮೊದಲ ಬಾರಿಗೆ ಭವಿಷ್ಯದ ಸರ್ಕಾರದಿಂದ ತಮ್ಮ ಬೇಡಿಕೆಗಳ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.

32 ಪುಟಗಳ ದಾಖಲೆಯು ತಮ್ಮ ಮತವನ್ನು ಗೆಲ್ಲಲು ಬಯಸುವ ಎಲ್ಲಾ ಪಕ್ಷಗಳ ರಾಜಕಾರಣಿಗಳಿಂದ ಅವರ ನಿರೀಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಸಾಮಾಜಿಕ ಮಾಧ್ಯಮದಲ್ಲಿ ಇದನ್ನು ಸಾರ್ವಜನಿಕವಾಗಿ ಅನುಮೋದಿಸಲು ಅವರು ಅಭ್ಯರ್ಥಿಗಳನ್ನು ಕೇಳಿಕೊಂಡಿದ್ದರು. ಮಂಗಳವಾರದ ಹೊತ್ತಿಗೆ ನಾಲ್ವರು ಕನ್ಸರ್ವೇಟಿವ್ ಅಭ್ಯರ್ಥಿಗಳಾದ ಬಾಬ್ ಬ್ಲ್ಯಾಕ್‌ಮನ್, ರಾಬರ್ಟ್ ಬಕ್ಲ್ಯಾಂಡ್, ರಮೇಶ್ ಸಿಂಗ್ ಮತ್ತು ಥೆರೆಸಾ ವಿಲಿಯರ್ಸ್ ಅವರು ಹಿಂದು ಪ್ರಣಾಳಿಕೆಯನ್ನು ಅನುಮೋದಿಸಿದ್ದಾರೆ.

ಹೈರಿಚ್ ಮನಿ ಚೈನ್ ಹಗರಣ | ಸಾವಿರಾರು ಅಮಾಯಕರಿಗೆ ವಂಚಿಸಿದ್ದ ಲಕ್ಷಾಂತರ ರೂ. ವಶ

ಕೇರಳ, ಮಹಾರಾಷ್ಟ್ರ, ಛತ್ತೀಸ್‌ಗಢದಲ್ಲಿ ಇಡಿ ದಾಳಿ

ಕೊಚ್ಚಿ : ಸಾವಿರಾರು ಜನ ಅಮಾಯಕರನ್ನು ವಂಚಿಸಿದ ಹೈರಿಚ್ ಮನಿ ಚೈನ್ ಹಗರಣಕ್ಕೆ ಸಂಬಂಧಿಸಿ , ಕೇಂದ್ರದ ಜಾರಿ ನಿರ್ದೇಶನಾಲಯ(ಇಡಿ)ವು 14ಮಂದಿ ಪ್ರವರ್ತಕರುಗಳು ಮತ್ತು ನಾಯಕರುಗಳ ಮನೆ ಮತ್ತು ಉದ್ಯಮ ಕೇಂದ್ರಗಳ ಮೇಲೆ ದಾಳಿ ನಡೆಸಿ ಲಕ್ಷಾಂತರ ರೂ.ಗಳನ್ನು ವಶಪಡಿಸಿಕೊಂಡಿದೆ. ಕೇರಳ ,ಛತ್ತೀಸ್‌ಗಢ, ಮಹಾರಾಷ್ಟ್ರಗಳಲ್ಲಿ ಮಂಗಳವಾರ ಈ ಕಾರ್ಯಾಚರಣೆ ನಡೆದಿದೆ ಎಂದು ದಕ್ಷಿಣ ವಲಯದ ಇಡಿಯ ವಿಶೇಷ ನಿರ್ದೇಶಕ ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಕೇರಳದ ತ್ರಿಶೂರಿನಲ್ಲಿ ಕೇಂದ್ರ ಕಚೇರಿ ಹೊಂದಿದ್ದ ಹೈರಿಚ್ ಆನ್‌ಲೈನ್ ಶಾಪ್ ಪ್ರೈವೇಟ್ ಲಿಮಿಟೆಡ್‌ನ ಪ್ರವರ್ತಕರಾದ ಸರೀನಾ ಪ್ರತಾಪನ್ ಮತ್ತು ಕೆ.ಡಿ.ಪ್ರತಾಪನ್ ದಂಪತಿ ಸೇರಿದಂತೆ ಭಾರೀ ಮುಳಗಳ ನಿವಾಸ ಮತ್ತು ಉದ್ಯಮ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಬಹುಹಂತಗಳ ಶ್ರೇಣೀಕೃತ ವ್ಯವಸ್ಥೆಯ ಈ ಮಾರುಕಟ್ಟೆ ಸ್ಕೀಮ್ ಮೂಲಕ ಸಾವಿರಾರು ಮಂದಿಗೆ ಸಾವಿರಾರು ಕೋಟಿ ರೂ.ಗಳ ವಂಚನೆ ಎಸಗಲಾಗಿತ್ತು .

ಕೇರಳದ ಕಣ್ಣೂರು, ಕೋಯಿಕ್ಕೋಡ್, ತ್ರಿಶೂರ್, ಎರ್ನಾಕುಳಂ, ಛತ್ತೀಸ್‌ಗಢದ ರಾಯಪುರ, ಮಹಾರಾಷ್ಟ್ರದ ನಾಗಪುರ ಮುಂತಾದೆಡೆಗಳಲ್ಲಿ ನಡೆದ ಈ ದಾಳಿಯ ವೇಳೆ 70ಲಕ್ಷ ರೂ.ಗಳಿಗೂ ಅಧಿಕ ಹಣ, ಹಣಕಾಸು ದಾಖಲೆಗಳು, ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ.ಈ ಆನ್‌ಲೈನ್ ವ್ಯಾಪಾರದ ಹೆಸರಿನಲ್ಲಿ ಸದಸ್ಯತ್ವ ಶುಲ್ಕದ ಮೂಲಕ ಜನತೆಯಿಂದ 1,157ಕೋಟಿ ರೂ.ಗಳಿಗೂ ಅಧಿಕ ಮೊತ್ತವನ್ನು ಅಕ್ರಮವಾಗಿ ಎತ್ತಲಾಗಿತ್ತು ಎಂದು ಇಡಿ ತಿಳಿಸಿದೆ. ಆದರೆ ಈ ಹಗರಣದ ವಾಸ್ತವಿಕ ಮೊತ್ತ ಇನ್ನಷ್ಟು ಹೆಚ್ಚಾಗಿರುವ ಸಾಧ್ಯತೆ ಇದೆ ಎನ್ನಲಾಗಿದೆ.

1.5 ಕೋಟಿ ರೂ.ಗೂ ಹೆಚ್ಚು ಸದಸ್ಯತ್ವ: ದೇಶದ ವಿವಿಧೆಡೆ 1.5ಕೋಟಿಗೂ ಅಧಿಕ ಜನರ ಸದಸ್ಯತ್ವದೊಂದಿಗೆ ಕಾರ್ಯಾಚರಿಸುತ್ತಿದ್ದ ಈ ವಂಚಕ ಕಂಪೆನಿಯ ವಿರುದ್ಧ ಸಿಬಿಐ ತನಿಖೆಗೆ ಕೇರಳ ಪೊಲೀಸರು ಶಿಫಾರಸು ಮಾಡಿದ್ದರು. ಅನಂತರ ಕೇಂದ್ರ ಹಣಕಾಸು ಸಚಿವಾಲಯದಡಿ ಜಾರಿ ನಿರ್ದೇಶನಾಲಯ (ಇಡಿ)ಕೂಡ ಅಕ್ರಮ ಹಣಕಾಸು ವ್ಯವಹಾರದ ವಂಚನೆಯ ನೆಲೆಯಲ್ಲಿ ಪ್ರಕರಣದ ತನಿಖೆಗೆ ಮುಂದಾಗಿತ್ತು .ಆಗ ತ್ರಿಶೂರಿನ ಚೆರ್ಪುನಲ್ಲಿರುವ ಪ್ರವರ್ತಕ ದಂಪತಿಯ ಕಚೇರಿಗಳಲ್ಲಿ ನಡೆಸಲಾದ ಶೋಧ ಕಾರ್ಯಾಚರಣೆಯ ವೇಳೆ 4ಖಾಸಗಿ ಬ್ಯಾಂಕ್‌ಗಳ 55ಖಾತೆಗಳಲ್ಲಿ 212.46ಕೋ.ರೂ.ಗಳನ್ನು ಸಂಗ್ರಹಿಸಿದ್ದು ಪತ್ತೆಯಾಗಿತ್ತು .ಅವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು .

ಕೇರಳ ವಿಧಾನಸಭೆಯಲ್ಲೂ ಸದ್ದು : 3141ಕೋಟಿ ರೂ. ಅಕ್ರಮ ಸಂಗ್ರಹ !

ಈ ಭಾರೀ ಅಕ್ರಮ ಹಗರಣ ಕೇರಳ ವಿಧಾನಸಭೆಯಲ್ಲೂ ಸದ್ದು ಮಾಡಿದೆ. ಈ ಹಗರಣದಲ್ಲಿ ಸಂಸ್ಥೆಯು ಕೇರಳ ಮತ್ತು ಇತರ ರಾಜ್ಯಗಳಲ್ಲಿನ ಜನರಿಂದ 3141.34ಕೋಟಿ ರೂ.ಗಳನ್ನು ಸಂಗ್ರಹಿಸಿರುವುದಾಗಿ ಸಿಎಂ ಪಿಣರಾಯಿ ವಿಜಯನ್ ಎರ್ನಾಕುಳಂ ಶಾಸಕ ಟಿ.ಜೆ. ವಿನೋದ್ ಅವರಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಈ ವಂಚನಾ ಹಗರಣದಿಂದಾಗಿ ಹಣ ಕಳೆದುಕೊಂಡ ಅನೇಕ ಜನರು ನೀಡಿದ ದೂರುಗಳಂತೆ, ಈಗಾಗಲೇ ಕೇರಳದ ವಿವಿಧ ಪೊಲೀಸ್ ಠಾಣೆಗಳಲ್ಲಿ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ(ಬಿಯುಡಿಎಸ್)-2019ರಡಿ ಅನೇಕ ಕೇಸುಗಳು ದಾಖಲಾಗಿವೆ.

ಉಗ್ರನ ದಯಾಭಿಕ್ಷೆ ತಿರಸ್ಕೃತ

■ ಮುರ್ಮು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ತಿರಸ್ಕರಿಸಿದ 2ನೇ ಅರ್ಜಿ

ಹೊಸದಿಲ್ಲಿ: 24 ವರ್ಷ ಹಿಂದೆ ದಿಲ್ಲಿ ಕೆಂಪುಕೋಟೆಯಲ್ಲಿ ಕಾವಲಿದ್ದ ಭಾರತೀಯ ಯೋಧರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದ ಪಾಕ್ ಮೂಲದ ಭಯೋತ್ಪಾದಕ, ಮೊಹಮ್ಮದ್ ಆರಿಫ್ ಯಾನೆ ಅಶ್ಫಾಕ್‌ನ ದಯಾಭಿಕ್ಷೆ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದ್ದಾರೆ.

ರಾಷ್ಟ್ರಪತಿ ಮುರ್ಮು ಅವರು 2022ರ ಜು.25ರಂದು ಅಧಿಕಾರ ವಹಿಸಿಕೊಂಡ ನಂತರದಲ್ಲಿ ತಿರಸ್ಕರಿಸಿದ ಎರಡನೇ ದಯಾಭಿಕ್ಷೆ ಅರ್ಜಿ ಇದಾಗಿದೆ.

ಉಗ್ರ ಆರಿಫ್ ಮೇ 15ರಂದು ರಾಷ್ಟ್ರಪತಿಗಳಿಗೆ ದಯಾಭಿಕ್ಷೆ ಅರ್ಜಿ ಸಲ್ಲಿಸಿದ್ದ. ರಾಷ್ಟ್ರಪತಿಗಳು ಮೇ 27ರಂದು ಅರ್ಜಿ ತಿರಸ್ಕರಿಸಿದ್ದಾರೆಂದು ರಾಷ್ಟ್ರಪತಿಗಳ ಸಚಿವಾಲಯದ ಮೇ 29ರ ಆದೇಶ ಉಲ್ಲೇಖಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಮೆಗಿಲ್ಲ ಅವಕಾಶ ಎಂದಿತ್ತು ಸುಪ್ರೀಂ: ಭಯೋತ್ಪಾದಕ ಮೊಹಮ್ಮದ್ ಆರಿಫ್‌ನ ಮೇಲ್ಮನವಿಯನ್ನು 2022ರ ನವೆಂಬರ್ 3ರಂದು ತಿರಸ್ಕರಿಸಿದ್ದ ಸರ್ವೋಚ್ಚ ನ್ಯಾಯಾಲಯ ,ಈತನಿಗೆ ಮರಣದಂಡನೆ ಶಿಕ್ಷೆ ಖಾಯಂಗೊಳಿಸಿ ತೀರ್ಪಿತ್ತಿತ್ತು . ಕೆಂಪುಕೋಟೆ ಮೇಲೆ ದಾಳಿ ಮೂಲಕ ರಾಷ್ಟ್ರದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತೆಗೆ ಉಗ್ರ ಆರಿಫ್ ನೇರ ಗಂಡಾಂತರ ಒಡ್ಡಿದ್ದಾನೆ. ಹಾಗಾಗಿ ಇಲ್ಲಿ ಆರೋಪಿಯನ್ನು ಕ್ಷಮಿಸಲು ಅಥವಾ ಈತನಿಗೆ ಘೋಷಿತ ಶಿಕ್ಷೆಯಲ್ಲಿ ವಿನಾಯಿತಿ ನೀಡಲು ಅವಕಾಶವೇ ಇಲ್ಲ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಿಸಿತ್ತು.

ಉಗ್ರ ಮೊಹಮದ್ ಆರಿಫ್ ಯಾನೆ ಅಶ್ಫಾಕ್ ಅಕ್ರಮವಾಗಿ ಭಾರತದೊಳಕ್ಕೆ ನುಗ್ಗಿ ಗುಂಡಿನಮಳೆಗರೆದು ಯೋಧರನ್ನು ಸಾಯಿಸಿದ್ದಾನೆಂದು ಸುಪ್ರೀಂಕೋರ್ಟ್ 2022ರ ತನ್ನ ಆದೇಶದಲ್ಲಿ ಬೊಟ್ಟು ಮಾಡಿತ್ತು .

2005ರಲ್ಲಿ ಶಿಕ್ಷೆ ವಿಧಿಸಿತ್ತು ಕೆಳಕೋರ್ಟ್: ಇತರ ಭಯೋತ್ಪಾದಕರ ಜತೆ ಸೇರಿಕೊಂಡು ಕೆಂಪುಕೋಟೆಗೆ ದಾಳಿ ನಡೆಸುವ ಸಂಚು ಬೆಸೆದಿದ್ದ ಆರೋಪಿ ಆರಿಫ್‌ಗೆ ಅಧೀನ ನ್ಯಾಯಾಲಯ 2005ರ ಅಕ್ಟೋಬರ್‌ನಲ್ಲಿ ಮರಣದಂಡನೆ ವಿಧಿಸಿತ್ತು. ನಂತರ ಆರೋಪಿ ಉಗ್ರನ ಮೇಲ್ಮನವಿಗಳ ವಿಚಾರಣೆ ನಡೆಸಿದ್ದ ದಿಲ್ಲಿ ಹೈಕೋರ್ಟ್ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಅಧೀನ ನ್ಯಾಯಾಲಯದ ತೀರ್ಪನ್ನು ಸಿಂಧು ಎಂದು ಎತ್ತಿಹಿಡಿದಿದ್ದವು.

ಸಂಪಾದಕೀಯ

ಮೋದಿ ಸಂಪುಟದ ಸಂದೇಶಗಳು

ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಬಹುಮತ ಗಳಿಸಿದರೂ, ಮೈತ್ರಿಕೂಟದ ಪ್ರಮುಖ ಅಂಗಪಕ್ಷವಾದ ಬಿಜೆಪಿ ಏಕಾಂಗಿಯಾಗಿ ಬಹುಮತ ಗಳಿಸಲಾಗದ್ದನ್ನು ಸಂಭ್ರಮಿಸಿದವರು ಅನೇಕ ಮಂದಿ. ಇದರಿಂದ ಮೋದಿ ಸರಕಾರ ದುರ್ಬಲವಾಗಿದೆ ಎಂಬುದು ಅವರ ಸಂಭ್ರಮಕ್ಕೆ ಕಾರಣ. ಮೋದಿಯವರು ಮೈತ್ರಿ ಪಕ್ಷಗಳ ಬೆಂಬಲದಿಂದಷ್ಟೇ ಸರಕಾರ ನಡೆಸುವ ಅನಿವಾರ್ಯತೆ ಸೃಷ್ಟಿಯಾಗಿರುವುದರಿಂದಾಗಿ ಹಿಂದಿನ ಸರಕಾರದ ಹಲವು ಪ್ರಮುಖ ನಿರ್ಧಾರಗಳು ನನೆಗುದಿಗೆ ಬೀಳಬಹುದು ಎಂಬ ಆಶಯ ಅವರದ್ದು. ಬಿಜೆಪಿ ತನ್ನ ನೀತಿಗಳನ್ನು ಮತ್ತು ಸಿದ್ಧಾಂತಗಳನ್ನು ಅನುಷ್ಠಾನಗೊಳಿಸಲೂ ಸಾಧ್ಯವಾಗಲಾರದು ಎಂಬುದು ಅವರ ಲೆಕ್ಕಾಚಾರ. ಪ್ರಮುಖ ಖಾತೆಗಳಿಗಾಗಿ ಮಿತ್ರ ಪಕ್ಷಗಳು ಪಟ್ಟು ಹಿಡಿಯಬಹುದು ಹಾಗೂ ಮೋದಿ ಹಿಡಿತ ದುರ್ಬಲವಾಗಬಹುದು ಎಂದೂ ಅವರೆಲ್ಲ ನಿರೀಕ್ಷಿಸಿದ್ದರು.

ಆದರೆ ಮೋದಿಯವರು ರಚಿಸಿದ ಸಚಿವ ಸಂಪುಟವು ಅಂತಹ ಲೆಕ್ಕಾಚಾರಗಳಿಗೆ ಆಧಾರವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಪ್ರಮುಖ ಖಾತೆಗಳನ್ನು ಬಿಜೆಪಿಯೇ ಇರಿಸಿಕೊಳ್ಳುವ ಮೂಲಕ ಹಾಗೂ ಹಿಂದಿನ ಸಚಿವರನ್ನೇ ಆ ಖಾತೆಗಳಲ್ಲಿ ಮುಂದುವರಿಸುವ ಮೂಲಕ ತನ್ನ ನೀತಿ, ಸಿದ್ಧಾಂತಗಳಲ್ಲಿ ಬದಲಾವಣೆಯಿಲ್ಲ ಎಂಬ ಸಂದೇಶವನ್ನು ಸಾರಿದೆ. ದೇಶದ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಪುನರುತ್ಥಾನದ ವಿಷಯದಲ್ಲೂ ರಾಜಿಯಿಲ್ಲ ಎಂಬ ಸಂಕೇತವೂ ದೊರಕಿದೆ.

ಮುಖ್ಯವಾಗಿ ಗೃಹ ಖಾತೆ, ರಕ್ಷಣಾ ಖಾತೆ, ಸಾರಿಗೆ, ಹಣಕಾಸು ಮತ್ತು ವಿದೇಶಾಂಗ ಖಾತೆಗಳನ್ನು ಹಿಂದಿನ ಸಚಿವರೇ ವಹಿಸಿಕೊಂಡಿದ್ದಾರೆ. ಇವರೆಲ್ಲ ಹಿಂದಿನ ಸರಕಾರದಲ್ಲೂ ಅತ್ಯುತ್ತಮ ನಿರ್ವಹಣೆ ನೀಡಿದವರು. ಇದು ಮೋದಿ 3.0 ಸರಕಾರದಲ್ಲೂ ಮೂಲಸೌಕರ್ಯ ವಿಸ್ತರಣೆಯ ನೀತಿ, ವಿತ್ತ ನೀತಿ ಮತ್ತು ವಿದೇಶಾಂಗ ನೀತಿ ಹಿಂದಿನಂತೆಯೆ ಮುಂದುವರಿಯುವ ಸಂಕೇತ ನೀಡಿದೆ. ಬಿಜೆಪಿಯ ನೀತಿನಿರ್ಧಾರಗಳನ್ನು ರೂಪಿಸುವ ಅಮಿತ್ ಶಾ, ರಾಜ್‌ನಾಥ್ ಸಿಂಗ್, ನಿತಿನ್ ಗಡ್ಕರಿ ಮೊದಲಾದವರೆಲ್ಲ ಹಿಂದಿನ ಸ್ಥಾನದಲ್ಲೆ ಮುಂದುವರಿಯುವ ಮೂಲಕ ಬಿಜೆಪಿ ತನ್ನ ಸೈದ್ಧಾಂತಿಕ ನಿಲುವಿನಲ್ಲಿ ಬದಲಾವಣೆಯಿಲ್ಲ ಎಂಬುದನ್ನೂ ಸಾರಿದೆ.

ಮೋದಿಯವರು ಸಮ್ಮಿಶ್ರ ಸರಕಾರವನ್ನು ತೂಗಿಸಿಕೊಂಡು ಹೋಗಬಹುದೆ ಎಂಬ ಕುರಿತಂತೆಯೂ ಕೆಲವರು ಅನುಮಾನ ವ್ಯಕ್ತಪಡಿಸುವುದಿದೆ. ಅಂತಹ ಅನುಮಾನ ವ್ಯಕ್ತಪಡಿಸುವವರ ಅಂತರ್ಯದಲ್ಲಿ ಸರಕಾರದಲ್ಲಿ ಬಿಕ್ಕಟ್ಟು ಮೂಡಲಿ ಎಂಬ ಆಶಯವೂ ಇರುವುದು ರಹಸ್ಯವಲ್ಲ. ಅವರು ನಿಜವಾಗಿ ಮೋದಿಯವರ ಸಾಮರ್ಥ್ಯವನ್ನು, ಸಂವಹನಕಲೆಯನ್ನು ಕೀಳಂದಾಜಿಸಿದ್ದಾರೆ ಎಂದರ್ಥ. ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ಪ್ರಧಾನಿಯಾಗಿ ಇಷ್ಟು ವರ್ಷಗಳ ಕಾಲ ಆಡಳಿತ ನಡೆಸಿದ ಮೋದಿಯವರಿಗೆ ಅದೇನೂ ಅಸಂಭವವಲ್ಲ. ಮೋದಿ 3-0 ಸರಕಾರವು ದುರ್ಬಲವಾಗಿಲ್ಲ ಹಾಗೂ ಮೋದಿಯವರು ಸಮರ್ಥವಾಗಿ ಮಿತ್ರಪಕ್ಷಗಳನ್ನು ನಿಭಾಯಿಸಿಕೊಂಡು ಹೋಗಲಿದ್ದಾರೆ ಎಂಬುದು ಮುಂದೆ ಸಾಬೀತಾಗಲಿದೆ.

ಸಂತುಷ್ಟರಾಗುವುದೆಂತು?

ಸ್ವಭಾವೇನ ಹಿ ತುಷ್ಯಂತಿ ದೇವಾಃ ಸತ್ಪುರುಷಾಃ ಪಿತಾ ।
ಜ್ಞಾತಯಸ್ತ್ವನ್ನಪಾನೇನ ವಾಕ್ಯದಾನೇನ ಪಂಡಿತಾಃ ॥ – ವೃದ್ಧ ಚಾಣಕ್ಯ ಚರಿತ್ರ

ಒಳ್ಳೆಯ ಸ್ವಭಾವದಿಂದ ದೇವತೆಗಳು, ಸಜ್ಜನರು, ತಂದೆ- ಇವರು ಸಂತುಷ್ಟರಾಗುತ್ತಾರೆ. ಬಂಧು ಬಳಗದವರು ಅನ್ನಪಾನಗಳಿಂದ ಸಂತುಷ್ಟರಾಗುತ್ತಾರೆ. ವಿದ್ವಾಂಸರಾದವರೋ ಬರಿಯ ಮಾತಿನಿಂದ ಆನಂದಪಡುತ್ತಾರೆ- ಎಂಬುದು ಶ್ಲೋಕಾರ್ಥ.

'ಸಂತೋಷಂ ಜನಯೇತ್ ಪ್ರಾಜ್ಞ' ಪ್ರಾಜ್ಞನಾದವನು ಎಲ್ಲರನ್ನೂ ಸಂತೋಷಪಡಿಸಬೇಕು. ಇತರರನ್ನು ಸಂತೋಷಪಡಿಸುವುದರಲ್ಲಿ ಜೀವನ ಸಾರ್ಥಕ್ಯವಿದೆ. ಸಂತೋಷಪಡಿಸುವುದು ದೇವಪೂಜೆಗೆ ಸಮಾನವೆನ್ನುತ್ತಾರೆ.

ಒಂದೇ ಬಗೆಯ ಪ್ರವೃತ್ತಿಯಿಂದ ಎಲ್ಲರನ್ನೂ ಸಂತೋಷಪಡಿಸಲು ಸಾಧ್ಯವಿಲ್ಲ. ಲೋಕದಲ್ಲಿರುವ ಲೋಗರ ಸ್ವಭಾವ ವಿಭಿನ್ನವಾಗಿರುತ್ತವೆ. ಸತ್ಕರ್ಮ, ಸನ್ನಡತೆಗಳಿಂದ ಇತರರನ್ನು ಸಂತೋಷ ಪಡಿಸುವುದು ಸರಿಯಾದ ಮಾರ್ಗ. ಒಳ್ಳೆಯ ಸ್ವಭಾವದಿಂದಲೇ ಎಲ್ಲರನ್ನೂ ಸಂತೋಷ ಪಡಿಸಲು ಸಾಧ್ಯವಿಲ್ಲ. ಕೆಲವರ ವಿಷಯದಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆಯೇ ಹೊರತು ಎಲ್ಲರ ವಿಷಯದಲ್ಲಲ್ಲ. ಉತ್ತಮ ಗುಣ ನಡತೆಯಿಂದ ದೇವತೆಗಳು ಸಂತೋಷ ಪಡುತ್ತಾರೆ. ಸಜ್ಜನರು ಸಂತೋಷಪಡುತ್ತಾರೆ. ಹಾಗೂ ಹೆತ್ತವರು ಸಂತೋಷ ಪಡುತ್ತಾರೆ.

ದೇವತೆಗಳು ಬಯಸುವುದು ಜನರ ಉದಾತ್ತ ಚರಿತೆಯನ್ನು, ಉತ್ತಮ ನಡತೆಯನ್ನು. ಅದನ್ನು ಮನುಕುಲ ಪ್ರದರ್ಶಿಸಿದರೆ ಸಹಜವಾಗಿ ಸಂತುಷ್ಟರಾಗುತ್ತಾರೆ. ದೇವಪೂಜೆ, ಮಂತ್ರ ಪಠಣ ಭಜನೆಗಳನ್ನು ಶುದ್ಧಮನಸ್ಸಿನಿಂದ ಜನರು ನೆರವೇರಿಸಿದರೆ ದೇವತೆಗಳು ಸಂತೋಷಿಸುತ್ತಾರೆ.

ಸಜ್ಜನರು ನೆಚ್ಚಿಕೊಳ್ಳುವುದು ಸಜ್ಜನಿಕೆಯನ್ನು. ಸಜ್ಜನಿಕೆಯ ವ್ಯವಹಾರಕ್ಕೆ ಸಜ್ಜನರು ಸಹಜವಾಗಿ ಸಂತೋಷವನ್ನು ಅನುಭವಿಸುತ್ತಾರೆ. ಮುಖಿತಃ ಸದ್ಗುಣಗಳ ಆರಾಧಕರೂ, ಸಂಪೋಷಕರೂ ಆದ ಸಜ್ಜನರು ಎಲ್ಲೆಲ್ಲಿಯೂ ಒಳ್ಳೆಯತನವನ್ನು ಅಪೇಕ್ಷಿಸುತ್ತಾರೆ. ಅದಕ್ಕಾಗಿ ಹಂಬಲಿಸುತ್ತಾರೆ.

ಹೆತ್ತವರು ಮಕ್ಕಳಲ್ಲಿ ಒಳ್ಳೆಯ ಸ್ವಭಾವವನ್ನು ಅಪೇಕ್ಷಿಸಲೇಬೇಕು. ಕುಟುಂಬದ ಗೌರವ ಉಳಿಯಬೇಕು. ಹೆತ್ತವರ ಗೌರವ ಹೆಚ್ಚಾಗಬೇಕು. 'ಪುತ್ರಾದಿಚ್ಛೇತ್ ಪರಾಭವಂ' ಮಕ್ಕಳು ನಮ್ಮನ್ನು ಮೀರಿ ಬೆಳೆದು ನಿಲ್ಲಬೇಕು. ಹಾಗಾದಾಗ ಹೆತ್ತವರ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಮಕ್ಕಳ ಸಾಧನೆ, ಒಳ್ಳೆಯತನ ನೋಡಿ ಹೆತ್ತವರಿಗೆ ಸಂತೋಷವಾಗುವುದು ಸಹಜವೇ ಆಗಿದೆ.

ಇನ್ನು ಕೆಲವರಿಗೆ ಇವರ ಗೊಡವೆಯಿಲ್ಲ. ಅವರು ಹೆಚ್ಚೆಚ್ಚು ಸಂತೋಷಿಸುವುದು ಅವರು ಬಂದಾಗ ಪುಷ್ಕಳ ಊಟೋಪಚಾರ ನೀಡುವುದರಿಂದ. ಅವರಿಗೆ ಸಾಧನೆ, ಒಳ್ಳೆತನಗಳೆಲ್ಲ ಗೌಣ. ಒಳ್ಳೆಯ ಭೋಜನಾದಿಗಳು ಸಿಕ್ಕರೆ ಸಾಕು. ಇವರೆಲ್ಲ ಊಟಾದಿಗಳಿಂದ ಸಂತುಷ್ಟರಾಗುವವರು. ಈ ಕಾರಣಕ್ಕಾಗಿಯೇ ಭೋಜನಕೂಟ ಮೊದಲಾದ ವ್ಯವಸ್ಥೆ ಮಾಡಿ ಸಂತೋಷಪಡಿಸುತ್ತಾರೆ. ವಿದ್ವಾಂಸರಿಗೆ ಇದಾವುದೂ ಅಪೇಕ್ಷಿತವಲ್ಲ. ಇವುಗಳಿಂದ ತೃಪ್ತರಾಗುವುದೂ ಇಲ್ಲ. ಅವರಿಗೆ ಬೇಕಾಗಿರುವುದು ಸಂಸ್ಕಾರಪೂರ್ಣ ಒಳ್ಳೆಯ ನಡೆನುಡಿಗಳು. ಇದನ್ನೇ ಅವರು ನಿರೀಕ್ಷಿಸುವುದು. ಇದನ್ನೆಲ್ಲ ಗಮನಿಸದ ನಾವು ಯಾರೊಡನೆ ಹೇಗೆ ವ್ಯವಹರಿಸಬೇಕು ಎಂಬ ಚಿತ್ರಣವನ್ನು ನೀಡಲಾಗಿದೆ. ಇದನ್ನು ಅರಿತು ನಮ್ಮ ಜೀವನವನ್ನು ಕಟ್ಟಿಕೊಳ್ಳಬೇಕಾಗಿದೆ.

ಪ್ರತಿ ಬಾರಿ ಚುನಾವಣೆ ಬಂದಾಗಲೂ ಆರ್‌ಎಸ್‌ಎಸ್‌ನ್ನು ವಿವಾದದಲ್ಲಿ ಸಿಲುಕಿಸುವ ಪ್ರಯತ್ನಗಳು ಕೆಲವರಿಂದ ನಡೆಯುತ್ತವೆ.

ಸಂಘದ ಕುರಿತು 'ಗಾಳಿಪಟ ಹಾರಿಸುವವರು'

• ರಾಮ್ ಮಾಧವ್

ಪ್ರತಿಬಾರಿ ಚುನಾವಣೆ ಬಂದಾಗಲೂ ಮಾಧ್ಯಮಗಳು ಹಾಗೂ ಕೆಲವು ರಾಜಕೀಯ ಪಕ್ಷಗಳು ಆರ್‌ಎಸ್‌ಎಸ್ ಅನ್ನು ಅನವಶ್ಯ ಚರ್ಚೆಗೆ ಎಳೆಯುತ್ತವೆ. ಜೀವನದಲ್ಲಿ ದೊಡ್ಡ ಗುರಿ ಇದ್ದಾಗ ಕ್ಷುಲ್ಲಕ ವಿಷಯಗಳು ನಗಣ್ಯವಾಗುತ್ತವೆ. ಅಂತೆಯೇ ದೊಡ್ಡ ಗುರಿ ಹೊಂದಿರುವ ಆರ್‌ಎಸ್‌ಎಸ್ ಸ್ವಯಂಸೇವಕರು ಇಂತಹ ಅನವಶ್ಯ ಚರ್ಚೆಗಳಿಗೆ ಕಿವಿಗೊಡುವುದು, ಅದರಲ್ಲಿ ಭಾಗಿಯಾಗುವುದು ಕಡಿಮೆ.

ಇತ್ತೀಚೆಗೆ ಮುಗಿದ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೂಡಾ ಆರ್‌ಎಸ್‌ಎಸ್‌ನ್ನು ವಿವಾದಕ್ಕೆ ಎಳೆದುತರುವ ಪ್ರಯತ್ನ ನಡೆಯಿತು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಧ್ಯೆ ಎಲ್ಲವೂ ಸರಿಯಾಗಿಲ್ಲ ಎಂಬಂತಹ ಸುಳ್ಳನ್ನು ಹರಡಲಾಯಿತು. 'ಸಂಘ ಮತ್ತು ಬಿಜೆಪಿ ಮಧ್ಯೆ ಬಿರುಕು' ಎಂಬುದಾಗಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವೊಂದು ಘೋಷಿಸಿತು. 'ಬಿಜೆಪಿ ತನ್ನ ಕರುಳುಬಳ್ಳಿಯನ್ನು ಕತ್ತರಿಸಲು ಹೊರಟಿದೆ' ಎಂದು ಆನ್‌ಲೈನ್ ಮೀಡಿಯಾವೊಂದರ ಲೇಖನವೊಂದು ಸಾರಿತು.

ಇವೆಲ್ಲ ವದಂತಿಗಳು ಹಾಗೂ ಗಾಳಿಪಟ ಹಾರಿಸುವ ಪ್ರಯತ್ನಗಳು ರಾಜಕೀಯದ ಒಂದು ಭಾಗ. ಆದರೆ ಆರ್‌ಎಸ್‌ಎಸ್ ಬಹಳಷ್ಟು ಹಿಂದೆಯೇ ರಾಜಕೀಯದಲ್ಲಿ, ಅದರಲ್ಲೂ ಮುಖ್ಯವಾಗಿ ಚುನಾವಣಾ ರಾಜಕೀಯದಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ನಿರ್ಧರಿಸಿಯಾಗಿದೆ. ಸಾಮಾಜಿಕ ಏಕತೆಯನ್ನು ಬೆಳೆಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ತಮ್ಮ ಸಂಘಟನೆಯು ಚುನಾವಣಾ ರಾಜಕೀಯದಲ್ಲಿ ಪಾಲ್ಗೊಳ್ಳುವುದು ತರವಲ್ಲವೆಂಬುದು ಸಂಘದ ನಿಲುವಾಗಿದೆ. 'ಸಂಘವು ರಾಜಕೀಯದಲ್ಲಿಲ್ಲ' ಎಂಬುದು ಅದರ ನೀತಿ. ಸಂಘದ ಸ್ವಯಂಸೇವಕರು ಯಾವುದೇ ಪಕ್ಷ ಸೇರುವುದಕ್ಕೆ ಸಂಘವು ಅಭ್ಯಂತರ ಹೇರುವುದಿಲ್ಲ. ಆದರೆ ಹಿಂಸಾತ್ಮಕ ಮತ್ತು ರಹಸ್ಯ ಕಾರ್ಯಸೂಚಿ ಇರುವ ರಾಜಕೀಯ ಪಕ್ಷಗಳಿಗೆ ಸೇರಬಾರದೆಂಬುದು ನಿಯಮವಾಗಿದೆ.

ಆರ್‌ಎಸ್‌ಎಸ್ ಅನ್ನು ರಾಜಕೀಯಕ್ಕೆ ಎಳೆದುತರಲು ಈ ಹಿಂದೆಯೂ ಕೆಲವರಿಂದ ಪ್ರಯತ್ನಗಳು ನಡೆದುದುಂಟು. ಅಂತಹ ಮೊದಲ ಪ್ರಯತ್ನವು ಸರ್ದಾರ್ ಪಟೇಲರಿಂದ ನಡೆದಿತ್ತು. ಗಾಂಧೀಜಿ ಹತ್ಯೆಯ ವಿವಾದದ ನಂತರ ಅವರು ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದರು. ಆರ್‌ಎಸ್‌ಎಸ್ ಸರಸಂಘಚಾಲಕರಿಗೆ 1948ರ ಸೆಪ್ಟೆಂಬರ್ 11ರಂದು ಬರೆದ ಪತ್ರವೊಂದರಲ್ಲಿ ''ಇಂತಹ ಸಂಕೀರ್ಣ ಸಮಯದಲ್ಲಿ ಪಕ್ಷ ಸಂಘರ್ಷ ಮತ್ತು ಹಳೆ ಜಗಳಗಳಿಗೆ ಅವಕಾಶವಿಲ್ಲ. ಆರ್‌ಎಸ್‌ಎಸ್ ಕಾರ್ಯಕರ್ತರು ಕಾಂಗ್ರೆಸ್ ಸೇರುವ ಮೂಲಕ ತಮ್ಮ ದೇಶಭಕ್ತ ಕಾರ್ಯವನ್ನು ಮುಂದುವರಿಸಬಹುದಾಗಿದೆ ಎಂಬುದು ನನ್ನ ಅಭಿಪ್ರಾಯ'' ಎಂದು ಹೇಳಿದ್ದರು. ಆದರೆ ಸರಸಂಘಚಾಲಕ ಗುರೂಜಿಯವರು ಅದಕ್ಕೆ ಒಪ್ಪಿರಲಿಲ್ಲ. ಆದಾದ ಬಳಿಕ ನವೆಂಬರ್ 15ರಂದು ನೆಹರೂ ಸರಕಾರವು ಅವರನ್ನು ಬಂಧಿಸಿತು.

ಪಟೇಲ್ ತಮ್ಮ ಪ್ರಯತ್ನವನ್ನು ಮತ್ತೂ ಮುಂದುವರಿಸಿದ್ದರು. 1949ರ ಅಕ್ಟೋಬರ್ 1ರಂದು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಕಾಂಗ್ರೆಸ್ ಪಕ್ಷ ಸೇರಲು ಅನುಮತಿ ನೀಡಲಾಗುವುದು ಎಂದು ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ನೆಹರೂ ಬಳಿಕ ಈ ನಿರ್ಣಯದಲ್ಲಿ ತಿದ್ದುಪಡಿ ಮಾಡಿದ್ದರು. 'ಆರ್‌ಎಸ್‌ಎಸ್ ಕಾರ್ಯಕರ್ತರು ತಮ್ಮ ಸಂಘದ ಸದಸ್ಯತ್ವವನ್ನು ತ್ಯಜಿಸಿ ಕಾಂಗ್ರೆಸ್

ಸೇರಬಹುದಾಗಿದೆ' ಎಂದು ಬದಲಿಸಿದ್ದರು. ಆರ್‌ಎಸ್‌ಎಸ್‌ನ ಪ್ರಭಾವ ಹೆಚ್ಚಿದಂತೆ ಕಾಂಗ್ರೆಸ್‌ಗೆ ಆತಂಕ ಶುರುವಾಗಿತ್ತು. ಆರ್‌ಎಸ್‌ಎಸ್ ತಾನೇ ರಾಜಕೀಯ ಪಕ್ಷವಾಗಿ ಬದಲಾಗಬಹುದು ಅಥವಾ ಬೇರೊಂದು ಪಕ್ಷವನ್ನು ಬೆಂಬಲಿಸಬಹುದು ಎಂದು ಕಾಂಗ್ರೆಸ್ ಭೀತಿ ಪಟ್ಟಿತ್ತು.

ಆದರೆ ಆರ್‌ಎಸ್‌ಎಸ್ ಸಕ್ರಿಯ ರಾಜಕಾರಣದಿಂದ ದೂರ ಉಳಿಯುವ ತನ್ನ ನಿರ್ಧಾರದಲ್ಲಿ ಅಚಲವಾಗಿ ಉಳಿಯಿತು. ರಾಜಕಾರಣಕ್ಕೆ ಬರುವ ಅಗತ್ಯವೇ ಅದಕ್ಕೆ ಕಾಣಲಿಲ್ಲ. ಸಂಘಟನೆಯೊಳಗೂ ಈ ಕುರಿತು ಚರ್ಚೆ ನಡೆಯಲಿಲ್ಲವೆಂದಲ್ಲ. ಗಾಂಧಿ ಹತ್ಯೆ ಆರೋಪ ಹೊರಿಸಿ ಸಂಘವನ್ನು ಹಣಿಯಲು ಪ್ರಯತ್ನಿಸಿದಾಗ ಕೆಲವರು ಸಂಘವು ರಾಜಕೀಯ ಪ್ರವೇಶಿಸಲಿ ಎಂದು ಆಶಿಸಿದ್ದುಂಟು. ಗುರೂಜಿಯವರು ಒಮ್ಮೆ ಹೇಳಿದ್ದರು ''ಸ್ವಯಂಸೇವಕರು ತಾವು ಇಚ್ಛಿಸಿದ್ದಲ್ಲಿ ಸಂಘವನ್ನು ರಾಜಕೀಯ ಪಕ್ಷವಾಗಿ ಬದಲಿಸಬಹುದು. ಅದು ಪ್ರಜಾತಾಂತ್ರಿಕ ವಿಧಾನ. ನಾನು ಸರ್ವಾಧಿಕಾರಿಯಲ್ಲ. ಆದರೆ ವೈಯಕ್ತಿಕವಾಗಿ ನಾನು ರಾಜಕೀಯದಿಂದ ದೂರ''.

ಆರ್‌ಎಸ್‌ಎಸ್‌ನ ಮುಖಂಡರಾದ ಬಲರಾಜ್ ಮಧೋಕ್ ಮುಂತಾದವರು ಭಾರತೀಯ ಜನಸಂಘವನ್ನು ಸ್ಥಾಪಿಸುವಂತೆ 1951ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿಯವರನ್ನು ಉತ್ತೇಜಿಸಿದ್ದರು. ಆ ಸಮಯದಲ್ಲಿ ಗುರೂಜಿಯವರು ಕೂಡಾ 200 ಸ್ವಯಂಸೇವಕರನ್ನು ಅದರೊಂದಿಗೆ ಕಾರ್ಯನಿರ್ವಹಿಸಲು ಕಳುಹಿಸಲು ಒಪ್ಪಿದ್ದರು. ಆದರೆ ಆರ್‌ಎಸ್‌ಎಸ್ ಮಾತ್ರ ರಾಜಕೀಯದಿಂದ ದೂರ ಇರಲಿದೆ ಎಂದು ಸ್ಪಷ್ಟವಾಗಿ ಸಾರಿದ್ದರು. ಆರಂಭಿಕ ಹಂತದಲ್ಲಿ ಆರ್‌ಎಸ್‌ಎಸ್ ಮತ್ತು ಜನಸಂಘವನ್ನು ರೈಲು ಹಳಿಯ ಎರಡು ಕಂಬಿಗಳಿಗೆ ಹೋಲಿಸಲಾಗುತ್ತಿತ್ತು. ಅವೆಂದೂ ಜತೆಯಾಗಿ ಸೇರಲಾರವು ಹಾಗೂ ಎಂದಿಗೂ ದೂರವೂ ಸಾಗಲಾರವು ಎಂಬುದು ಇದರ ಅರ್ಥವಾಗಿತ್ತು.

ಕಳೆದ 7 ದಶಕಗಳಲ್ಲಿ ಈ ಸಂಬಂಧವು ಹಲವಾರು ಆಯಾಮಗಳನ್ನು ಪಡೆದಿದೆ. ಕೆಲವೊಮ್ಮೆ ಸಣ್ಣ ಮಟ್ಟಿನ ಅಭಿಪ್ರಾಯ ಭೇದವೂ ಮೂಡಿದ್ದಿದೆ. ಒಟ್ಟಿನಲ್ಲಿ ಆರ್‌ಎಸ್‌ಎಸ್ ಸಕ್ರಿಯ ರಾಜಕಾರಣದಿಂದ ದೂರವೇ ಉಳಿದಿದೆ.

ಇದಕ್ಕೆ ಎರಡು ಬಾರಿ ಅಪವಾದ ತೋರಿ ಬಂದಿದೆ. ಮೊದಲನೆಯದು 1977ರಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದಾಗ. ಇಂದಿರಾಗಾಂಧಿಯವರ ಕರಾಳ ಸರ್ವಾಧಿಕಾರದಿಂದ ದೇಶದ ಪ್ರಜಾತಂತ್ರವನ್ನು ರಕ್ಷಿಸಬೇಕಾದುದು ಅಗತ್ಯ ಎಂದು ಆರ್‌ಎಸ್‌ಎಸ್ ಭಾವಿಸಿತು. ಆರ್‌ಎಸ್‌ಎಸ್ ಕೂಡಾ ನಿಷೇಧಕ್ಕೊಳಗಾಯಿತು. ಆ ಸಮಯದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಹೊಸತಾಗಿ ರೂಪುಗೊಂಡ ಜನತಾ ಪಕ್ಷದ ಪರ ಚುನಾವಣಾ ಪ್ರಚಾರ ನಡೆಸಿದ್ದರು. ಈ ಐತಿಹಾಸಿಕ ಹೋರಾಟ ಪೂರ್ಣಗೊಂಡು ಜನತಾ ಪಕ್ಷದ ಸರಕಾರ ಅಧಿಕಾರಕ್ಕೇರಿದ ಬಳಿಕ ಆರ್‌ಎಸ್‌ಎಸ್ ಮತ್ತೆ ರಾಜಕೀಯದಿಂದ ದೂರ ಉಳಿಯಿತು. ವಾಜಪೇಯಿ ಮತ್ತು ಆಡ್ವಾಣಿ ಮೊದಲಾದವರು ಸಂಘದ ಸ್ವಯಂಸೇವಕರಾಗಿ ಮುಂದುವರಿಯುವುದಕ್ಕೆ ಜನತಾ ಪಕ್ಷದ ಕೆಲವು ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ 1980ರಲ್ಲಿ ಭಾರತೀಯ ಜನತಾ ಪಕ್ಷ ಜನ್ಮತಾಳಿತು. ಆದರೆ ಈ ಸಂದರ್ಭದಲ್ಲಿ ಸಂಘವು ಯಾವುದೇ ಸಕ್ರಿಯ ಪಾತ್ರ ವಹಿಸಲಿಲ್ಲ. ಅದು ರಾಜಕೀಯದಿಂದ ದೂರವೇ ಉಳಿಯಿತು. 1984ರ ಚುನಾವಣೆಯಲ್ಲಿ ಕಾಂಗ್ರೆಸ್ ಭಾರೀ ಬಹುಮತದಿಂದ ಗೆದ್ದು, ಬಿಜೆಪಿ ಅತ್ಯಂತ ಕಳಪೆ ನಿರ್ವಹಣೆ ತೋರಿದ್ದಾಗಲೂ ಕೆಲವರು ಸಂಘವು ಕಾಂಗ್ರೆಸನ್ನು ಬೆಂಬಲಿಸಿತ್ತು ಎಂದು ಹೇಳಿದ್ದಿದೆ. ಆದರೆ ಈ ಮಾತು ಸುಳ್ಳಾಗಿತ್ತು. ಸಂಘವು ಆ ಸಂದರ್ಭದಲ್ಲಿ ಸಕ್ರಿಯ ರಾಜಕೀಯದಲ್ಲಿ ತೊಡಗುವ ಯಾವುದೇ ಚಿಂತನೆ ನಡೆಸದೆ ತಟಸ್ಥವಾಗಿತ್ತು ಎನ್ನುವುದೇ ಹೆಚ್ಚು ಸರಿ.

ಎರಡನೆಯದಾಗಿ 2014ರಲ್ಲಿ ಸಂಘವು ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಲು ನಿರ್ಧರಿಸಿತು. ಯುಪಿಎ ಸರಕಾರವು ಅತಿಯಾದ ಭ್ರಷ್ಟಾಚಾರ ನಡೆಸಿದ್ದು ಮತ್ತು ಅಲ್ಪಸಂಖ್ಯಾತ ತುಷ್ಟೀಕರಣದ ಮೂಲಕ ಸಮಾಜದ ಏಕತೆಯನ್ನು ಮುರಿಯಲು ಯತ್ನಿಸಿದ್ದು ಇದಕ್ಕೆ ಕಾರಣ. ಸರಕಾರವು 'ಹಿಂದು ಭಯೋತ್ಪಾದನೆ' ಎಂಬ ಮಿಥ್ಯೆಯನ್ನು ಸೃಷ್ಟಿಸಿ ಹಿಂದುಗಳ ದಮನ ಕಾರ್ಯಕ್ಕೂ ಮುಂದಾಗಿತ್ತು. ಹಾಗಾಗಿ ಅಂತಹ ಸರಕಾರವನ್ನು ಸೋಲಿಸುವುದು ಕರ್ತವ್ಯವಾಗಿತ್ತು. ಚುನಾವಣೆಯಲ್ಲಿ ಈ ಕರಾಳ ಶಕ್ತಿಗಳನ್ನು ಸೋಲಿಸಿದ ಬಳಿಕ ಆರ್‌ಎಸ್‌ಎಸ್ ಮತ್ತೆ ರಾಷ್ಟ್ರ ನಿರ್ಮಾಣದ ತನ್ನ ಕಾರ್ಯಕ್ಕೆ ಹಿಂತಿರುಗಿತು.

ಇಷ್ಟೆಲ್ಲಾ ಹೇಳಿದ ಮೇಲೆ ಆರ್‌ಎಸ್‌ಎಸ್ ರಾಜಕೀಯವನ್ನು ಅಮುಖ್ಯ ಅಥವಾ ಅಸ್ಪೃಶ್ಯ ಎಂದು ಭಾವಿಸುವುದಿಲ್ಲ ಎಂದು ಸ್ಪಷ್ಟಪಡಿಸಬೇಕು. ಸಾಮಾಜಿಕ-ಸಾಂಸ್ಕೃತಿಕ ಸಂಘಟನೆಯಾಗಿ ಸಂಘವು, ರಾಜಕೀಯ ಈ ದೇಶದ ಸಾಮಾಜಿಕ ಬದುಕಿನ ಒಂದು ಅವಿಭಾಜ್ಯ ಅಂಗ ಎಂದು ಭಾವಿಸುತ್ತದೆ. ಉತ್ತಮ ಸಮಾಜ ರೂಪುಗೊಳ್ಳಲು ಉತ್ತಮ ರಾಜಕೀಯ ಅವಶ್ಯ ಎಂಬುದು ಸಂಘದ ನಿಲುವು. ಉತ್ತಮ ರಾಜಕೀಯವನ್ನು ಬೆಳೆಸಲು ಜನರಿಗೆ ಪ್ರೇರಣೆ ನೀಡಲು ಸಂಘ ಬಯಸುತ್ತದೆ. ಚುನಾವಣೆಯ ಮೂಲಕ ಉತ್ತಮ ಸರಕಾರವನ್ನು ಆರಿಸುವುದಕ್ಕೂ ಸಂಘವು ಆದ್ಯತೆ ಕೊಡುತ್ತದೆ.

''ಜನರು ನಮ್ಮನ್ನು ರಾಜಕೀಯಕ್ಕೆ ಏಕೆ ಎಳೆಯುತ್ತಾರೆ? ಅವರು ರಾಜಕಾರಣಿಗಳಾಗಿರುವುದರಲ್ಲಿ ಹಾಗೂ ನಾವು ಸ್ವಯಂಸೇವಕರಾಗಿರುವುದರಲ್ಲಿ ಸಂತೋಷ ಹೊಂದಿದ್ದೇವೆ'' ಎಂಬುದಾಗಿ ಗುರೂಜಿಯವರು ಹಿಂದೊಮ್ಮೆ ಹೇಳಿದ್ದರು. ಇದು ರಾಜಕೀಯದ ಕುರಿತಂತೆ ಸಂಘದ ಭಾವನೆಯೂ ಹೌದು.

ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ: ಯಾರು, ಏಕೆ ಮತ್ತು ಯಾವಾಗ?

• ವಿಜಯಲಕ್ಷ್ಮೀ ಬಿ. ವಿ

ಪ್ರಜೆಗಳು ತಮ್ಮ ಆದಾಯದ ಒಂದು ಭಾಗವನ್ನು ದೇಶದ ಪ್ರಗತಿಗೆ ಕೊಡುಗೆಯಾಗಿ ನೀಡುವ ವ್ಯವಸ್ಥೆಯೇ ಆದಾಯ ತೆರಿಗೆ ಪಾವತಿ. ಪ್ರತಿಯೊಬ್ಬ ವ್ಯಕ್ತಿ, ಪಾಲುದಾರಿಕಾ ಸಂಸ್ಥೆಗಳು, ಸಂಘ-ಸಂಸ್ಥೆಗಳು, ಸ್ಥಳೀಯ ಪ್ರಾಧಿಕಾರಗಳು, ಟ್ರಸ್ಟ್‌ಗಳು ಆರ್ಥಿಕ ವರ್ಷದಲ್ಲಿ (ಏಪ್ರಿಲ್ 1ರಿಂದ ಮಾರ್ಚ್ 31 ರವರೆಗೂ) ತಮಗೆ ಬಂದ ಆದಾಯದ ಆಧಾರದಲ್ಲಿ ಆದಾಯ ತೆರಿಗೆ ಕಾಯ್ದೆಯನ್ವಯ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. 2022ರ ಮಾಹಿತಿಯಂತೆ ಭಾರತದ ಒಟ್ಟು ಜನಸಂಖ್ಯೆ 141.72 ಕೋಟಿಯಿದ್ದು ಅದರಲ್ಲಿ ಸುಮಾರು 9.37 ಕೋಟಿ (ಶೇ. 6.6 ರಷ್ಟು) ಜನರು ತಮ್ಮ ಆದಾಯ ತೆರಿಗೆ ರಿಟರ್ನ್ಸ್ (ITR) ಅನ್ನು ಸಲ್ಲಿಸುತ್ತಿದ್ದಾರೆ.

ಆದಾಯ ತೆರಿಗೆಯ ರಿಟರ್ನ್ಸ್ ಎಲ್ಲರೂ ಸಲ್ಲಿಸಬೇಕೇ?

ವಿವಿಧ ಆದಾಯ ಮೂಲಗಳಾದ ಸಂಬಳ, ಬಾಡಿಗೆ, ವ್ಯವಹಾರಗಳಿಂದ ಬಂದ ಲಾಭ, ಆಸ್ತಿ (ನಿವೇಶನ, ಮನೆ, ಷೇರು, ಕೃಷಿ ಭೂಮಿ ಇತರೆ ಸ್ಥಿರಾಸ್ತಿ-ಚರಾಸ್ತಿ) ಮಾರಾಟದಿಂದ ಬರುವ ಲಾಭ, ಬಡ್ಡಿ, ಡಿವಿಡೆಂಡ್, ಉಡುಗೊರೆ ಇತ್ಯಾದಿಗಳ ಮೊತ್ತ ಮೂಲ ವಿನಾಯಿತಿಯ ಮಿತಿಗಿಂತಲೂ ಹೆಚ್ಚಿಗೆ ಇದ್ದಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಅನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಮೂಲ ವಿನಾಯಿತಿಯ ಮಿತಿಯ ಲೆಕ್ಕಾಚಾರಕ್ಕೆ ಯಾವುದೇ ರೀತಿಯ ಡಿಡಕ್ಷನ್‌ಗಳನ್ನು (ಮನೆ ಖರೀದಿಯ ಸಾಲದ ಬಡ್ಡಿ, ಎಲ್‌ಐಸಿ, ಟ್ಯೂಷನ್ ಫೀ, ಭವಿಷ್ಯ ನಿಧಿ ಮತ್ತು ಕಾಯ್ದೆಯನ್ವಯವಿರುವ ಇತರೆ ಡಿಡಕ್ಷನ್) ಕಳೆಯದೆ ಇರುವ ಆದಾಯವನ್ನು ಪರಿಗಣಿಸಬೇಕಾಗುತ್ತದೆ. ಮೂಲ ವಿನಾಯಿತಿಯ ಮಿತಿಯು ಈ ಕೆಳಕಂಡಂತಿದೆ:

80 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಿಗೆ / ಸಂಸ್ಥೆಗಳಿಗೆ / ಟ್ರಸ್ಟ್‌ಗಳಿಗೆ ರೂ. 3 ಲಕ್ಷ, 80 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ರೂ. 5 ಲಕ್ಷ, ಕಂಪನಿ-ಪಾಲುದಾರಿಕಾ ಸಂಸ್ಥೆ ಮತ್ತು ಸಹಕಾರ ಸಂಘಗಳಿಗೆ ಆದಾಯ ಶೂನ್ಯವಿದ್ದರೂ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯ. ಆದಾಯ ತೆರಿಗೆ ಕಾಯ್ದೆಯನ್ವಯ ಆದಾಯ ಮೂಲ ವಿನಾಯಿತಿ ಮಿತಿಯೊಳಗಿದ್ದರೂ ಸಹ ITR ಅನ್ನು ಫೈಲ್ ಮಾಡಬೇಕಾದ ಕೆಲವು ಷರತ್ತುಗಳು ಇಂತಿವೆ:

- ಒಂದು ಆರ್ಥಿಕ ವರ್ಷದಲ್ಲಿ ಒಬ್ಬ ವ್ಯಕ್ತಿಯು ಒಂದು ಅಥವಾ ಹೆಚ್ಚಿನ ಉಳಿತಾಯ ಬ್ಯಾಂಕ್ ಖಾತೆಗಳಲ್ಲಿ ರೂ. 50 ಲಕ್ಷಗಳನ್ನು ಠೇವಣಿ ಇಟ್ಟಿದ್ದರೆ.
- ಒಂದು ಅಥವಾ ಹೆಚ್ಚಿನ ಚಾಲ್ತಿ ಖಾತೆಗಳಲ್ಲಿ ರೂ. 1 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಹಣವನ್ನು ಠೇವಣಿ ಇಟ್ಟಿದ್ದರೆ.
- ವ್ಯಾಪಾರದಲ್ಲಿ ರೂ. 60 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಮಾರಾಟ ವಹಿವಾಟು ಮಾಡಿದ್ದರೆ.
- ಒಂದು ಆರ್ಥಿಕ ವರ್ಷದಲ್ಲಿ ವೃತ್ತಿಪರ ಆದಾಯವು ರೂ. 10 ಲಕ್ಷಗಳನ್ನು ಮೀರಿದ್ದರೆ.
- ಒಬ್ಬ ವ್ಯಕ್ತಿಯ ವಿದ್ಯುತ್ ಬಿಲ್ ರೂ. 1 ಲಕ್ಷಕ್ಕಿಂತ ಹೆಚ್ಚಿದ್ದರೆ.
- ಒಬ್ಬ ವ್ಯಕ್ತಿಯ TDS/TCS ರೂ. 25,000 ಕ್ಕಿಂತ ಹೆಚ್ಚಿದ್ದರೆ. (ಈ ಮಿತಿ ಹಿರಿಯ ನಾಗರಿಕರಿಗೆ ರೂ. 50,000 ಗಳಿರುತ್ತದೆ)
- ಒಬ್ಬ ವ್ಯಕ್ತಿಯು ವಿದೇಶದಲ್ಲಿ ಆಸ್ತಿಯನ್ನು ಹೊಂದಿದ್ದರೆ ಅಥವಾ ವಿದೇಶದಲ್ಲಿ ಆಸ್ತಿಯ ಫಲಾನುಭವಿಯಾಗಿದ್ದರೆ.
- ಒಬ್ಬ ವ್ಯಕ್ತಿಯು ಆರ್ಥಿಕ ವರ್ಷದಲ್ಲಿ ತನಗಾಗಿ ಅಥವಾ ಇನ್ನೊಬ್ಬ ವ್ಯಕ್ತಿಗಾಗಿ ವಿದೇಶಿ ಪ್ರಯಾಣಕ್ಕಾಗಿ ರೂ. 2 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಖರ್ಚು ಮಾಡಿದ್ದರೆ. ಅಂತಹ ವ್ಯಕ್ತಿಗಳು ITR ಅನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಈ ಷರತ್ತುಗಳೊಂದಿಗೆ ಕೆಳಗೆ ನಮೂದಿಸಿರುವ ವ್ಯವಹಾರಗಳನ್ನು ಮಾಡಿದ್ದರೆ, ಅದರ ಕುರಿತ ಮಾಹಿತಿ ಆದಾಯ ತೆರಿಗೆ ಇಲಾಖೆಗೆ ತಲುಪಿರುತ್ತದೆ. ರಿಟರ್ನ್ಸ್ ಸಲ್ಲಿಸದೇ ಇದ್ದಾಗ ವ್ಯವಹಾರ ಮಾಡಿದ ಮೊತ್ತದ ಆದಾಯ ಮೂಲವನ್ನು ಕೇಳಿ ಇಲಾಖೆಯು ನೋಟೀಸ್ ಕಳುಹಿಸುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ ಇಂತಹ ವ್ಯವಹಾರಗಳನ್ನು ಮಾಡಿದಲ್ಲಿ, ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಸೂಕ್ತ.
- ಬ್ಯಾಂಕ್ ಡ್ರಾಫ್ಟ್‌ಗಳು, ಪೇ ಆರ್ಡರ್‌ಗಳು, ಪೂರ್ವ-ಪಾವತಿಸಿದ ಉಪಕರಣಗಳ ಅಥವಾ ಬ್ಯಾಂಕ್ ಚೆಕ್‌ಗಳನ್ನು ಖರೀದಿಸಲು ನಗದು ರೂಪದಲ್ಲಿ ಮಾಡಿದ ಪಾವತಿಯು ರೂ. 10 ಲಕ್ಷಗಳನ್ನು ಮೀರಿದರೆ.
- ಒಂದು ಅಥವಾ ಹೆಚ್ಚು ಚಾಲ್ತಿ ಖಾತೆಯಲ್ಲಿ ನಗದು ಠೇವಣಿ ಅಥವಾ ನಗದು ಹಿಂಪಡೆಯುವಿಕೆಗಳು (ಬೇರರ್ ಚೆಕ್‌ಗಳು ಸೇರಿ) ಒಂದು ಹಣಕಾಸು ವರ್ಷದಲ್ಲಿ ರೂ. 50 ಲಕ್ಷಗಳನ್ನು ಮೀರಿದರೆ.
- ಒಂದು ಅಥವಾ ಹೆಚ್ಚು ಉಳಿತಾಯ ಖಾತೆಯಲ್ಲಿ ನಗದು ಠೇವಣಿ ಒಂದು ಹಣಕಾಸು ವರ್ಷದಲ್ಲಿ ರೂ. 10 ಲಕ್ಷಗಳನ್ನು ಮೀರಿದರೆ.
- ಒಂದು ಅಥವಾ ಹೆಚ್ಚು ನಿಶ್ಚಿತ ಠೇವಣಿಗಳಲ್ಲಿ ಒಂದು ಹಣಕಾಸು ವರ್ಷದಲ್ಲಿ ರೂ. 10 ಲಕ್ಷಗಳನ್ನು ಮೀರಿದ ಠೇವಣಿ ಮಾಡಿದರೆ.
- ಕ್ರೆಡಿಟ್ ಕಾರ್ಡ್ ಪಾವತಿಗಳು ಒಂದು ಆರ್ಥಿಕ ವರ್ಷದಲ್ಲಿ-ನಗದಲ್ಲಿ ರೂ. ಒಂದು ಲಕ್ಷ ಮೀರಿದರೆ ಅಥವಾ ಬೇರೆ ಯಾವುದೇ ವಿಧಾನದಿಂದ ರೂ. 10 ಲಕ್ಷಗಳನ್ನು ಮೀರಿದರೆ.
- ಷೇರು / ಮ್ಯೂಚುಯಲ್ ಫಂಡ್ / ಬಾಂಡ್ / ಡಿಬೆಂಚರ್‌ಗಳನ್ನು ಖರೀದಿಸಲು ಒಂದು ಹಣಕಾಸು ವರ್ಷದಲ್ಲಿ ರೂ. 10 ಲಕ್ಷ ಮೀರಿದ ಪಾವತಿ ಮಾಡಿದರೆ.
- ವಿದೇಶಿ ಕರೆನ್ಸಿ / ಕ್ರೆಡಿಟ್ / ಡೆಬಿಟ್ ಮೂಲಕ ಪಾವತಿಗಳು ರೂ. 10 ಲಕ್ಷಗಳನ್ನು ಮೀರಿದರೆ.
- ರೂ. 30 ಲಕ್ಷಕ್ಕೂ ಮೀರಿದ ಸ್ಥಿರಾಸ್ತಿಯ ಖರೀದಿ ಮಾಡಿದರೆ.
- ಸರಕು ಅಥವಾ ಸೇವೆಗಳಿಗಾಗಿ ರೂ. 2 ಲಕ್ಷಕ್ಕಿಂತ ಹೆಚ್ಚಿನ ನಗದು ಪಾವತಿ ಮಾಡಿದರೆ.

ಆದಾಯ ತೆರಿಗೆ ರಿಟರ್ನ್ಸ್ (ITR) ಸಲ್ಲಿಕೆಯ ಪ್ರಯೋಜನಗಳೇನು?

- ದೇಶದ ಅಭಿವೃದ್ಧಿಗಾಗಿ ಪ್ರಜೆಗಳು ನೀಡುವ ತಮ್ಮ ಆದಾಯದ ಪಾಲು ತೆರಿಗೆಯಾಗಿರುತ್ತದೆ. ತೆರಿಗೆ ಪಾವತಿ ಕೇವಲ ಕರ್ತವ್ಯವಲ್ಲ, ತೆರಿಗೆದಾರರ ಹೆಮ್ಮೆ.
- TDS ಅನ್ನು ವ್ಯಕ್ತಿಗೆ ಅನ್ವಯಿಸುವ ತೆರಿಗೆಗಿಂತ ಅಧಿಕವಾಗಿ ಕಡಿತಗೊಳಿಸಿದ್ದರೆ, ಅದನ್ನು ITR ಫೈಲ್ ಮಾಡುವ ಮೂಲಕ ಮರುಪಾವತಿಯನ್ನು ಪಡೆಯಬಹುದು.
- ನಿಗದಿತ ಸಮಯದೊಳಗೆ ITR ಫೈಲ್ ಮಾಡುವುದರಿಂದ ನಷ್ಟವಿದ್ದರೆ ಅದನ್ನು ಮುಂದಿನ ವರ್ಷಗಳಲ್ಲಿ ಬರುವ ಲಾಭಕ್ಕೆ ಪ್ರತಿಭಾರ ಮಾಡಿ, ತೆರಿಗೆಯನ್ನು ಕಡಿಮೆ ಪಾವತಿಸಬಹುದು.
- ಬ್ಯಾಂಕ್‌ಗಳು ಸಾಲವನ್ನು ನೀಡುವಾಗ ಆದಾಯದ ಪುರಾವೆಯಾಗಿ ITR ಅನ್ನು ಕೇಳುತ್ತಾರೆ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಲ್ಲಿ ಸುಲಭವಾಗಿ ಸಾಲ ಅನುಮೋದನೆಗೊಳ್ಳುತ್ತದೆ.
- ಹೆಚ್ಚಿನ ರಾಯಭಾರಿ ಕಚೇರಿಗಳು ವೀಸಾಕ್ಕೆ ಅರ್ಜಿ ಸಲ್ಲಿಸುವಾಗ ಹಿಂದಿನ ವರ್ಷಗಳ ನಿಮ್ಮ ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಕೇಳುತ್ತಾರೆ. ಹೀಗೆ ITR ಇದ್ದಲ್ಲಿ ತ್ವರಿತವಾಗಿ ವೀಸಾ ದೊರಕುತ್ತದೆ.

2023-24 ಆರ್ಥಿಕ ವರ್ಷದ ITR ಫೈಲ್ ಮಾಡಲು ಕೊನೆ ದಿನಾಂಕ:

ITR ಸಲ್ಲಿಸಲು ಕೊನೆಯ ದಿನಾಂಕ ಪ್ರತಿ ವರ್ಷ 31 ಜುಲೈ ಆಗಿರುತ್ತದೆ. ನಿಗದಿತ ಸಮಯದೊಳಗೆ ಸಲ್ಲಿಸಲು ಸಾಧ್ಯವಾಗದೇ ಇದ್ದರೆ, ಬಡ್ಡಿ ಮತ್ತು ದಂಡದೊಂದಿಗೆ ಡಿಸೆಂಬರ್ 31 ರ ಒಳಗಾಗಿ ಸಲ್ಲಿಸಬಹುದು. ತೆರಿಗೆ ಲೆಕ್ಕಪರಿಶೋಧನೆಗೆ ಒಳಪಟ್ಟ ವ್ಯಕ್ತಿಗಳಾಗಿದ್ದರೆ 31ನೇ ಅಕ್ಟೋಬರ್ 2024ರವರೆಗೂ ಸಮಯವಿರುತ್ತದೆ.

ITR ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದರೆ ಆಡ್ಡ ಪರಿಣಾಮಗಳು

- ITR ಅನ್ನು 31ನೇ ಜುಲೈ 2024 ರೊಳಗೆ ಸಲ್ಲಿಸದಿದ್ದರೆ ಲೇಟ್ ಫೈಲಿಂಗ್ ಶುಲ್ಕವಾಗಿ ರೂ. 5,000 (ರೂ. 5 ಲಕ್ಷಕ್ಕಿಂತ ಹೆಚ್ಚಿನ ಆದಾಯದವರು) ಹಾಗೂ ರೂ. 1,000 (ರೂ. 5 ಲಕ್ಷಕ್ಕಿಂತ ಕಡಿಮೆ ಆದಾಯದವರು) ಪಾವತಿಸಬೇಕಾಗುತ್ತದೆ.
- ತಡವಾಗಿ ಸಲ್ಲಿಸಿದ ಅವಧಿಗೆ ತೆರಿಗೆದಾರರು ಪ್ರತಿ ತಿಂಗಳು 1% ಬಡ್ಡಿಯನ್ನು ಪಾವತಿಸಬೇಕು.
- ತೆರಿಗೆ ಅಧಿಕಾರಿಗಳು ತೆರಿಗೆ ವಂಚನೆ ಎಂದು ಕೂಡ ಪರಿಗಣಿಸಬಹುದು ಹಾಗೂ 6 ತಿಂಗಳಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ.

ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಕೇವಲ ಕಾನೂನು ಬಾಧ್ಯತೆ ಮಾತ್ರವಲ್ಲದೆ ಪ್ರಜೆಗಳು ರಾಷ್ಟ್ರಕ್ಕಾಗಿ ತೋರುವ ಆರ್ಥಿಕ ದೇಶಪ್ರೇಮವಾಗಿರುತ್ತದೆ. ಆದಾಯ ತೆರಿಗೆ ರಿಟರ್ನ್ಸ್ ಯಾರು, ಯಾಕೆ ಮತ್ತು ಯಾವಾಗ ಸಲ್ಲಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವ ಮೂಲಕ ತೆರಿಗೆದಾರರು ದಂಡವನ್ನು ತಪ್ಪಿಸಬಹುದು ಮತ್ತು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬಹುದು. ನೆನಪಿಡಿ, ಸಕಾಲಿಕ ಮತ್ತು ನಿಖರವಾದ ತೆರಿಗೆ ಸಲ್ಲಿಸುವಿಕೆ ದೇಶದ ಹಣಕಾಸಿನ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಮಹತ್ತ್ವದ ಪಾತ್ರವನ್ನು ವಹಿಸುತ್ತದೆ.

ಆಟವೂ ಒಂದು ಹಕ್ಕು-ಆಟಕ್ಕೂ ಒಂದು ಅಂತಾರಾಷ್ಟ್ರೀಯ ದಿನ!

ಆಟವನ್ನು ಒಂದು ಹಕ್ಕಾಗಿ ನೋಡುವಾಗ ಅದು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖಪಾತ್ರ ವಹಿಸುತ್ತದೆ ಎನ್ನುವುದನ್ನು ಅರಿಯಬೇಕು.

• ಸುರೇಶ್ ಎಸ್. ಗೌಡ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಜೂನ್ 11 ಅನ್ನು 'ಅಂತಾರಾಷ್ಟ್ರೀಯ ಆಟದ ದಿನ'ವಾಗಿ ಅಂಗೀಕರಿಸಿದೆ. ಮೊನ್ನೆ ಜೂನ್ 11ರಂದು ವಿಶ್ವಾದ್ಯಂತ ಮೊಟ್ಟ ಮೊದಲ ಅಂತಾರಾಷ್ಟ್ರೀಯ ಆಟದ ದಿನವನ್ನು ಆಚರಿಸಲಾಯಿತು. ಅರೆ! ಆಟಕ್ಕೂ ಒಂದು ದಿನವೇ? ನಿತ್ಯ ಜೀವನ ಭಾಗವಾಗಿರುವ ಆಟಕ್ಕೇಕೆ ಒಂದು ದಿನ? ಅದೂ ಕೂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ? ಈ ಪ್ರಶ್ನೆಗಳು ಸಹಜವೇ.

ವಿಶ್ವದಲ್ಲಿ ನಿರಂತರವಾಗಿರುವ ಯುದ್ಧ, ಬಡತನ, ಹಸಿವು, ನಿರುದ್ಯೋಗ, ವಲಸೆ, ನೈಸರ್ಗಿಕ ವಿಕೋಪ ಮುಂತಾದವುಗಳಿಗೆ ಪರಿಹಾರ ಒದಗಿಸುವ ತುರ್ತು ಕಾರ್ಯಗಳ ಹೊರತಾಗಿಯೂ ಕಳೆದ ಮಾರ್ಚ್ 25ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂತಾರಾಷ್ಟ್ರೀಯ ಆಟದ ದಿನವನ್ನು ಅಳವಡಿಸಿಕೊಳ್ಳುವ ಬಗ್ಗೆ ನಿರ್ಣಯ ಮಾಡಿತು. ಇದಕ್ಕೆ 140ಕ್ಕೂ ಹೆಚ್ಚು ದೇಶಗಳು ಸಹಮತ ವ್ಯಕ್ತಪಡಿಸಿದವು. ಈ ಎಲ್ಲಾ ದೇಶಗಳಲ್ಲಿಯೂ ಅಲ್ಲಿನ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ನೀಡುವ ಆದ್ಯತೆಯೊಂದಿಗೆ ಇದಕ್ಕೆ ಸಹಮತ ತೋರಿರುವುದು, ಜಾಗತಿಕ ಮಟ್ಟದಲ್ಲಿ ಆಟಕ್ಕೂ ಅಷ್ಟೇ ಮಹತ್ತ್ವವಿದೆ ಎನ್ನುವುದನ್ನು ನಿರೂಪಿಸುತ್ತದೆ. ಪ್ರಸ್ತುತ ವಿವಿಧ ಕಾರಣಕ್ಕೆ ಆಟಗಳಿಂದ ವಂಚಿತರಾಗುತ್ತ, ಡಿಜಿಟಲ್ ಮಾಧ್ಯಮದ ವ್ಯಾಪಕವಾದ ಪ್ರಭಾವ, ಶೈಕ್ಷಣಿಕವಾಗಿ ಒತ್ತಡಗಳಿಗೆ, ಒಳಗಾಗುತ್ತಾ ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರಾಗುತ್ತಿರುವ ಹೊತ್ತಿನಲ್ಲಿ ಮಕ್ಕಳ ಆಟದ ಹಕ್ಕಿನ ಸಾಕಾರಕ್ಕೆ, ಅವರ ಜೀವನದಲ್ಲಿ ಆಟದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವಲ್ಲಿ ವಿಶ್ವಸಂಸ್ಥೆಯ ಈ ಹೆಜ್ಜೆಯು ಒಂದು ಮೈಲಿಗಲ್ಲಾಗಿದೆ.

ಆಟವನ್ನು ಒಂದು ಹಕ್ಕಾಗಿ ನೋಡುವಾಗ ಅದು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದನ್ನು ಅರಿಯಬೇಕು. ಒಂದು ಮಗುವನ್ನು ಗಮನಿಸಿದಾಗ ಮಗುವು ಕೈಕಾಲು, ತಲೆಯನ್ನು ಆಡಿಸುವುದು, ಇಡೀ ದೇಹವನ್ನು ಬೇರೆ ಬೇರೆ ರೀತಿಯಲ್ಲಿ ಅಲ್ಲಾಡಿಸುವುದರ ಮೂಲಕ ಸಂವಹನ ಮಾಡುತ್ತದೆ. ಮಗುವಿನ ತುಂಟಾಟವೆಂದು ಕರೆಯುತ್ತ ನಾವೂ ಅವುಗಳನ್ನು ಅನುಕರಿಸುತ್ತೇವೆ. ನಾವು ಮಾಡಿದಂತೆ ಅದೂ ಮಾಡುತ್ತ, ನೋಡುತ್ತ ಕಲಿಯುತ್ತದೆ. ಮಗುವಿಗೆ ಸ್ಪರ್ಶದ ಅನುಭವಕ್ಕೆ, ಸ್ನಾಯುಗಳ ಬೆಳವಣಿಗೆಗೆ, ನಡೆಯಲು, ಕಲಿಯಲು ಇತ್ಯಾದಿಗಳಿಗೆ ಪೂರಕವಾಗಿ ನೀಡುವ ವಸ್ತುಗಳನ್ನು ಮಗುವು ಆಟದ ಸಾಮಗ್ರಿಗಳಂತೆ ಬಳಸುತ್ತದೆ. ಮಗುವಿಗೆ ಅರಿವಿಲ್ಲದೇ ಈ ಚಟುವಟಿಕೆಯು ಮಗುವಿನ ಬೆಳವಣಿಗೆಗೆ ಪೂರಕವಾಗುತ್ತವೆ.

ಪ್ರತಿ ಮಗುವೂ ಪ್ರಮುಖವಾಗಿ, ದೈಹಿಕ, ಮಾನಸಿಕ, ಭೌದ್ಧಿಕ, ಸಾಮಾಜಿಕ ಮತ್ತು ಭಾಷಾ ಬೆಳವಣಿಗೆಗಳೆಂಬ 5 ಬೆಳವಣಿಗೆಗಳನ್ನು ಹೊಂದಬೇಕು. ಈ ಎಲ್ಲಾ ಬೆಳವಣಿಗೆಗಳು ಸರಿಯಾಗಿ ಆಗಲು ಕೌಟುಂಬಿಕ ವಾತಾವರಣದಲ್ಲಿ ರಕ್ಷಣೆಯ ಭಾವ, ಅಗತ್ಯ ಆರೋಗ್ಯ ಸೇವೆ, ಆಡಲು, ಹಾಡಲು, ಹೇಳಲು ಬರೆಯಲು ಸಾಕಷ್ಟು ಸ್ವಾತಂತ್ರ್ಯ ಸಿಗಬೇಕಾಗುತ್ತದೆ. ಇವುಗಳಲ್ಲಿ ಹೆಚ್ಚಿನವು ಚಟುವಟಿಕೆಯಾಧಾರಿತವಾಗಿಯೇ ನಡೆಯುತ್ತದೆ. ಬಾಲ್ಯದಲ್ಲಿ ಈ ಎಲ್ಲ ಬೆಳವಣಿಗೆಗಳಿಗೆ ಹೇಗೆ ವಿವಿಧ ಚಟುವಟಿಕೆಗಳು ಪೂರಕವಾಗುತ್ತವೋ, ನಂತರದ ಹಂತಗಳಲ್ಲೂ ಇವುಗಳನ್ನು ಗಮನದಲ್ಲಿಟ್ಟುಕೊಂಡರೆ, ಆಟದ ಮಹತ್ವವನ್ನು ಸರಳವಾಗಿ ಅರ್ಥಮಾಡಿಕೊಳ್ಳಬಹುದು. ಎಲ್ಲದನ್ನೂ ನಿಯಂತ್ರಿಸುತ್ತಾ ಹೋದಂತೆ ಮಗುವಿನ ಬೆಳವಣಿಗೆಯೂ ಕುಂಠಿತವಾಗುತ್ತದೆ.

ಎಲ್ಲರಿಗೂ ಆಟದ ವಿಧಾನ ಖುಷಿ ಕೊಡುತ್ತವೆ. ಕೇವಲ ಉಪನ್ಯಾಸ, ಬೋಧನೆಯಿಂದಷ್ಟೇ ಹೇಳಲಾಗದ ಹಲವಾರು ಪರಿಕಲ್ಪನೆಗಳನ್ನು ಆಟದೊಂದಿಗಿನ ಕಲಿಕೆಯು ಸರಳ ಮತ್ತು ಸುಲಭ ಮಾಡುತ್ತದೆ. ಶಾಲೆಯ ಕೊನೆಯ ತರಗತಿಗಾಗಿ ಕಾಯುವ ಕಾಲವೊಂದಿತ್ತು. ಹಾಗೆಂದು ಆಟ ಮಕ್ಕಳ ಹಕ್ಕು ಎನ್ನುವ ನೆಲೆಯಲ್ಲಿ ಅರ್ಥೈಸಿಕೊಂಡು ಇವುಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದರು ಎನ್ನುವುದಕ್ಕಿಂತಲೂ ಪಠ್ಯಕ್ರಮದ ಭಾಗ ಅಥವಾ ದಿನಚರಿಯ ಸಹಜ ಭಾಗವಾಗಿತ್ತು. ಕ್ರೀಡಾಕೂಟಗಳಲ್ಲಿ ಶಾಲೆಯ ಹೆಸರೂ ಮುಂಚೂಣಿಯಲ್ಲಿರಬೇಕೆಂಬ ಒಂದು ರೀತಿಯ ಉತ್ಸಾಹದ ತವಕವೂ ಸೇರಿರುತ್ತಿತ್ತು. ಇನ್ನೊಂದು ವಿಶೇಷವೆಂದರೆ ಇಲ್ಲಿನ ಆಟಗಳು ಹೆಚ್ಚಾಗಿ ಗ್ರಾಮೀಣ ಅಥವಾ ಸಾಂಪ್ರದಾಯಿಕ ಆಟಗಳಾಗಿರುತ್ತಿತ್ತು. ಈ ರೀತಿಯ ಆಟಗಳಲ್ಲಿ ಮುಖ್ಯವಾಗಿ ಎಲ್ಲರೂ ಸೇರಿ ಒಟ್ಟಿಗೆ ಆಡುತ್ತಿದ್ದರು. ಮನೆಯ ನಂತರದಲ್ಲಿ ಸಾಮಾಜಿಕರಣವು ಬಹಳ ಸರಳ ಮತ್ತು ಸಹಜವಾಗಿ ನಡೆಯಲು ಆಟವು ಪ್ರಮುಖ ಸಾಧನವಾಗುತ್ತಿತ್ತು. ಸಾಮಾಜಿಕ ಸಂವಹನ, ಇತರರೊಂದಿಗೆ ಬೆರೆಯುವುದು, ಅಭಿಪ್ರಾಯಗಳ ವಿನಿಮಯ, ಹೊಂದಾಣಿಕೆಗಳು ತನ್ನಿಂದ ತಾನಾಗಿ ಒದಗುತ್ತಿದ್ದವು.

ಅಂದು ಒಟ್ಟಿಗೆ ಆಟ ಆಡುವಾಗ ಯಾರದ್ದೂ ತೀವ್ರ ನಿಗಾವಣೆಯ ಅಗತ್ಯ ಇರಲಿಲ್ಲ, ಅಗತ್ಯವಾದಷ್ಟು ಆಟದ ಸಾಮಗ್ರಿಗಳು ಇರುತ್ತಿರಲಿಲ್ಲ, ಆದರೆ ಇವುಗಳಿಗೆ ಸ್ಥಳೀಯವಾಗಿ ಸಿಗುವ ವಸ್ತುಗಳನ್ನೇ ಆಟದ ಸಾಮಗ್ರಿಗಳಾಗಿ ಜೊತೆ ನೀಡುತ್ತಿದ್ದವರು. ಇಂದು ಆಟ ಆಡಬೇಕೆಂದರೆ ಒಂದಿಷ್ಟು ಅವಶ್ಯಕತೆಗಳು ಇವೆ. ಇವುಗಳಿಲ್ಲ ಎನ್ನುವ ಕಾರಣಕ್ಕೆ ಆಟದಿಂದ ವಿಮುಖರಾಗಬಾರದು. ಆಟವನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಇವುಗಳಿರುವಲ್ಲಿ ಮಾತ್ರ ಆಟವು ಸಮರ್ಪಕವಾಗಿರುತ್ತದೆ, ಇಲ್ಲದಿರುವಲ್ಲಿ ಆಟಕ್ಕೆ ಮಹತ್ವವೇ ಇಲ್ಲ ಎನ್ನುವುದು, ಜೊತೆಗೆ ಇವುಗಳು ಆಟದ ಪ್ರಾಮುಖ್ಯತೆ ಹಾಗೂ ಅಲ್ಲಿ ಆಡುವವರ ಅಂತಸ್ತು/ಸ್ಥಿತಿಯನ್ನು ನಿರ್ಧರಿಸುವ ಮಾನದಂಡಗಳಾಗಬಾರದು. ಇವುಗಳೆಲ್ಲ ಇರುವ ಜಾಗದಲ್ಲಿ ನಿಗಾವಹಿಸುವ ಕಣ್ಗಾವಲಿನ ವ್ಯವಸ್ಥೆಯೂ ಹೆಚ್ಚಿಗೆ ಇರುತ್ತದೆ. ಇದು ಅವರಿಗಿಷ್ಟದಂತೆ ಸಹಜವಾಗಿ ಆಡುವುದನ್ನು ನಿಯಂತ್ರಿಸುತ್ತದೆ.

ದುಡಿಯುವ ಮಕ್ಕಳು, ವಲಸೆ ಸಮುದಾಯ, ನಿರಾಶ್ರಿತರಾಗಿರುವವರು, ಅಂಗವಿಕಲತೆಯಿರುವ ಮಕ್ಕಳು ಹೀಗೆ ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳ ಬದುಕಿಗೂ ಆಟ ಬಹಳ ಮುಖ್ಯ. ಆದರೆ ಅವರು ಎದುರಿಸುತ್ತಿರುವ ಸಮಸ್ಯೆಗಳೇ ಬೇರೆ ವಿಧದಾಗಿದ್ದು ಅದಕ್ಕೆ ಪೂರಕವಾದ ಪರಿಹಾರಗಳ ಅಗತ್ಯತೆ ಎಲ್ಲರಿಗಿಂತ ಹೆಚ್ಚಿದೆ. ಅವರು ತಮ್ಮ ಬದುಕಿನ ಹಲವು ಪ್ರಮುಖ ವರ್ಷಗಳನ್ನು ಸಂತಸ, ನಲಿವುಗಳಿಲ್ಲದೇ ಕಳೆಯುವ ಸನ್ನಿವೇಶದಲ್ಲಿ, ಲಭ್ಯವಿರುವುದರಲ್ಲಿಯೇ ಸಾಧ್ಯವಾದಷ್ಟು ಆಟದಂತಹ ಚಟುವಟಿಕೆಗಳನ್ನು ಒದಗಿಸುವ ತುರ್ತು ಬಹಳಷ್ಟಿದೆ.

ಈ ಎಲ್ಲಾ ಪ್ರಮುಖ ಅಂಶಗಳ ಆಧಾರದಲ್ಲಿ ಮಕ್ಕಳು ಹಾಗೂ ಹದಿಹರೆಯದವರು ತಮ್ಮ ಆಟದ ಹಕ್ಕನ್ನು ಪಡೆಯಲು ಜಾಗತಿಕವಾಗಿ ನಡೆದ ಸಮಾಲೋಚನೆಗಳಲ್ಲಿ ಬಹಳ ಸ್ಪಷ್ಟವಾದ, ಪ್ರಬಲವಾದ ಹಕ್ಕೊತ್ತಾಯಗಳನ್ನು ಮಾಡಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಮನವರಿಕೆ ಮಾಡಿಕೊಟ್ಟು, ಇಂದು ಆಟಕ್ಕಾಗಿ ಒಂದು ದಿನವನ್ನು ಅಂಗೀಕಾರ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಆಚರಣೆಯು ಕೇವಲ ಒಂದು ದಿನಕ್ಕೆ ಸೀಮಿತವಾಗದೇ ನಿತ್ಯವೂ ಆಟದ ಮಹತ್ವ ಅರಿತು ಅವಕಾಶ ನೀಡುವಂತಾದಾಗ ಮಾತ್ರ, ಇದರ ಆಶಯ ಈಡೇರುತ್ತದೆ.

ಶುದ್ಧೀಕರಣ ಘಟಕ ಸ್ಥಾಪನೆಗೆ ಆಗ್ರಹ

ಚಿಕ್ಕತುಮಕೂರು ಗ್ರಾಮಸ್ಥರಿಂದ ಕಂದಾಯ ಸಚಿವ ಕೃಷ್ಣಬೈರೇಗೌಡರಿಗೆ ಮನವಿ

ದೊಡ್ಡಬಳ್ಳಾಪುರ: ಕೈಗಾರಿಕೆಗಳು ಹಾಗೂ ನಗರ ಸಭೆ ಒಳಚರಂಡಿ ತ್ಯಾಜ್ಯಗಳಿಂದ ತಾಲೂಕಿನ ದೊಡ್ಡತುಮಕೂರು ಕೆರೆ ಮತ್ತು ಚಿಕ್ಕತುಮಕೂರು ಕೆರೆಗಳಲ್ಲಿ ಮೂರನೇ ಶುದ್ಧೀಕರಣ ಘಟಕ ಸ್ಥಾಪನೆ ಮಾಡಬೇಕು ಎಂದು ಕೆರೆ ಹೋರಾಟ ಸಮಿತಿ ವತಿಯಿಂದ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಮನವಿ ಮಾಡಿದರು.

ತಾಲೂಕಿಗೆ ಭೇಟಿ ನೀಡಿದ ವೇಳೆ ದೊಡ್ಡ ತುಮಕೂರು ಮತ್ತು ಮಜರಾ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕೆರೆ ಹೋರಾಟ ಸಮಿತಿ ವತಿಯಿಂದ ಕಂದಾಯ ಸಚಿವ ಕೃಷ್ಣಬೈರೇಗೌಡರನ್ನು ಭೇಟಿ ಮಾಡಿ ಸ್ಥಳೀಯ ಸಮಸ್ಯೆಗಳ ಬಗ್ಗೆ ವಿವರಿಸಿದರು.

ನೀರು ಸಂಪೂರ್ಣವಾಗಿ ಕಲುಷಿತವಾಗಿದ್ದು, ಕೆರೆಗಳ ಶುದ್ಧೀಕರಣದ ನಿಟ್ಟಿನಲ್ಲಿ ಮೂರನೇ ಹಂತದ ಶುದ್ಧೀಕರಣ ಘಟಕವನ್ನು ಸ್ಥಾಪಿಸಬೇಕು ಎಂದು ಅರ್ಕಾವತಿ ನದಿ ಪಾತ್ರಗಳ ಕೆರೆಗಳ ಸಂರಕ್ಷಣಾ ವೇದಿಕೆ ಹಾಗೂ ಮಜರಾ ಹೊಸಹಳ್ಳಿ ಗ್ರಾಮ ಪಂಚಾಯಿತಿ ಕೆರೆ ಹೋರಾಟ ಸಮಿತಿ ಒತ್ತಾಯಿಸಿದರು. ಸಚಿವರಿಗೆ ಮನವಿ ಸಲ್ಲಿಸಿದ ಮುಖಂಡರು ಮಾಹಿತಿ ನೀಡಿ, ದೊಡ್ಡಬಳ್ಳಾಪುರ ನಗರಸಭೆ ಮತ್ತು ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಒಳಚರಂಡಿ ನೀರನ್ನು ಶುದ್ಧೀಕರಿಸದೆ ದೊಡ್ಡತುಮಕೂರು ಹಾಗೂ ಚಿಕ್ಕತುಮಕೂರು ಕೆರೆಗಳಿಗೆ ನೇರವಾಗಿ ಬಿಡಲಾಗುತ್ತಿದೆ. ಇದಲ್ಲದೇ

ಕಾರ್ಖಾನೆಗಳ ತ್ಯಾಜ್ಯ ನೀರು ರಾಜಕಾಲುವೆ ಮುಖಾಂತರ ಕೆರೆ ಗಳಿಗೆ ಹರಿಯುತ್ತಿದೆ. ಇದರ ಪ್ರತಿಫಲವಾಗಿ ಕೊಳವೆ ಬಾವಿಗಳ ನೀರು ಕುಡಿಯಲು ಯೋಗ್ಯವಿಲ್ಲ ಎನ್ನುವ ವರದಿಯನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ನೀಡಿದ್ದಾರೆ.ಈ ನಿಟ್ಟಿನಲ್ಲಿ ತ್ಯಾಜ್ಯ ನೀರಿನ ಶುದ್ಧೀಕರಣಕ್ಕಾಗಿ ಮೂರನೇ ಹಂತದ ಶುದ್ಧೀಕರಣ ಘಟಕವನ್ನು ಶೀಘ್ರವೇ ನಿರ್ಮಿಸುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರತಿಕ್ರಿಯಿಸಿ, ಕೆರೆಗಳಲ್ಲಿ ತ್ಯಾಜ್ಯ ಶುದ್ಧೀಕರಣ ಘಟಕ ಅಳವಡಿಸಲು

> ಕೆರೆಗಳಲ್ಲಿ ತ್ಯಾಜ್ಯ ಶುದ್ಧೀಕರಣ ಘಟಕ ಅಳವಡಿಸಲು ಅವಕಾಶವಿದೆ. ಇದನ್ನು ನಿಯಮಾನುಸಾರ ಪಾಲಿಸಬೇಕು. ನಾಗರಕೆರೆಯಲ್ಲಿರುವ ಒಳಚರಂಡಿ ಪೈಪ್‌ಗಳನ್ನು ಸ್ಥಳಾಂತರಿಸಲು ಸ್ಥಳಾವಕಾಶದ ಕೊರತೆ ಇದೆ.
> ■ ಕೃಷ್ಣಬೈರೇಗೌಡ, ಕಂದಾಯ ಸಚಿವ

ಅವಕಾಶವಿದ್ದು, ಇದನ್ನು ನಿಯಮಾನುಸಾರ ಪಾಲಿಸಬೇಕು. ನಾಗರಕೆರೆಯಲ್ಲಿರುವ ಒಳಚರಂಡಿ ಪೈಪ್ ಗಳನ್ನು ಸ್ಥಳಾಂತರಿಸಲು ಸ್ಥಳಾವಕಾಶದ ಕೊರತೆ ಇರುವುದರಿಂದ, ಕೆರೆಯ ಬಫರ್ ಜೋನ್ ನಲ್ಲಿ ಅಳವಡಿಸುವ ಅನಿವಾರ್ಯತೆಯನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬಹುದಾಗಿದೆ. ಈ ಕುರಿತು ಜಿಲ್ಲಾಧಿಕಾರಿಗಳು ಗಮನ ಹರಿಸುವಂತೆ ಸೂಚಿಸಿದರು. ದೊಡ್ಡತುಮಕೂರು,ಮಜರಾಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 21 ಗ್ರಾಮಗಳ ಕುಡಿಯುವ ನೀರಿನ ಯೋಜನೆಯಾಗಿ 12 ಕೋಟಿ ವೆಚ್ಚದ ಯೋಜನಾವರದಿಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ಕಳುಹಿಸಲಾಗಿದೆ. ಇದನ್ನು ಪರಿಷ್ಕರಿಸಿ ಮತ್ತೆ ಕಳುಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಎನ್. ಶಿವಶಂಕರ ಮಾಹಿತಿ ನೀಡಿದರು.

ಗ್ರಾಮಗಳ ಸ್ವಚ್ಛತೆಗೆ ಒತ್ತು ನೀಡಿ

ಕ್ಯಾಂಪಸ್ ಸಂಯೋಜಕ ಶರತ್ ದರ್ಶನ್ ಸಲಹೆ

ತಾವರೆಕೆರೆ: ಗ್ರಾಮಗಳ ಸ್ವಚ್ಛತೆ ಮಾಡುತ್ತಿರುವ ಎನ್‌ಎಸ್‌ಎಸ್ ಸಂಘಟನೆಯ ವಿದ್ಯಾರ್ಥಿಗಳ ಶ್ರಮ ಫಲದಿಂದ ಗ್ರಾಮಗಳು ಸ್ವಚ್ಛವಾಗಿ ಕಾಯಿಲೆಗಳು ಬರದೆ ಪರಿಸರ ಉತ್ತಮವಾಗಿರುತ್ತದೆ ಎಂದು ಕ್ಯಾಂಪಸ್ ಸಂಯೋಜಕ ಶರತ್ ದರ್ಶನ್ ಹೇಳಿದರು.

ಅವರು ನಂದಗುಡಿ ಹೋಬಳಿ ಕೆ.ಸತ್ಯವಾರ ಸರ್ಕಾರಿ ಶಾಲೆಯಲ್ಲಿ ಬೆಂಗಳೂರಿನ ಬಿಎಂಎಸ್ ಇಂಜಿನಿಯರ್ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಶ್ರಮದಾನದ ಮೂಲಕ 2ನೇ ದಿನ ಶಾಲಾ ಕಾಂಪೌಂಡ್ ಸ್ವಚ್ಛ ಮಾಡಿದ ನಂತರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಇಂತಹ ಕಾರ್ಯಕ್ರಮಗಳು ಮಾಡುವುದರಿಂದ ಗ್ರಾಮೀಣ ಭಾಗದಲ್ಲಿ ಸ್ವಚ್ಛತೆಯ ಮೂಲಕ ಅನೇಕ ರೋಗ ರುಜಿನಗಳು ಬರದಂತೆ ನೋಡಿಕೊಳ್ಳಬಹುದು ಗ್ರಾಮಗಳಲ್ಲಿನ ಜನತೆಯ ಮುಖಾಂತರ ತಮ್ಮ ಬಾಂಧವ್ಯಗಳನ್ನು ಮುಂದುವರೆಸಬಹುದು. ನಗರದಲ್ಲಿ ಹುಟ್ಟಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಇಂತಹ ಹಳ್ಳಿಗಳಿಗೆ ಬಂದು ಶ್ರಮದಾನ ಮಾಡಿ ಸ್ವಚ್ಛತೆ ಮಾಡುತ್ತಿರುವುದು ಸಂತೋಷದ ವಿಷಯ. ವಿದ್ಯಾರ್ಥಿಗಳ ಜೊತೆ ಗ್ರಾಮದ ಜನತೆ ಸಂಘ ಸಂಸ್ಥೆಗಳು ರಾಜಕೀಯ ಮುಖಂಡರು ಕೈ ಜೋಡಿಸಿ ತ್ಯಾಜ್ಯ ಮುಕ್ತ ಗ್ರಾಮ ಮಾಡಬಹುದು ಎಂದು ಹೇಳಿದರು.

ಶಾಲಾ ಮುಖ್ಯ ಶಿಕ್ಷಕಿ ಕೆ.ಎಸ್.ಮಂಜುಳಾ ಮಾತನಾಡಿ, ವಿದ್ಯಾರ್ಥಿಗಳು ಇಂತಹ ಎನ್‌ಎಸ್‌ಎಸ್ ಶಿಬಿರಗಳಲ್ಲಿ ಪಾಲ್ಗೊಂಡು ಶ್ರಮದಾನ ಮಾಡುವುದರ ಮುಖಾಂತರ ಗ್ರಾಮಗಳನ್ನ ಮಾದರಿ ಗ್ರಾಮಗಳಾಗುತ್ತವೆ. ಪರಿಸರ ಸಂರಕ್ಷಣೆಯ ಅರಿವು ಜನರಿಗೆ ಮನವರಿಕೆ ಮಾಡಿಕೊಡಬೇಕು

ಹಾಗೂ ಗಿಡ ನೆಡುವ ಕಾರ್ಯಕ್ರಮದ ಬಗ್ಗೆ ಉತ್ತೇಜನ ನೀಡಬೇಕು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಸ್ವಚ್ಛತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದರಿಂದ ನೈರ್ಮಲ್ಯವಾಗುತ್ತದೆ. ಗ್ರಾಮದಲ್ಲಿನ ಸರ್ಕಾರಿ ಶಾಲೆಗಳು ದೇವಾಲಯಗಳು ಕಲ್ಯಾಣಿಗಳು ಚರಂಡಿಗಳು ಸ್ವಚ್ಛತೆ ಮಾಡುವ ಮೂಲಕ ಗ್ರಾಮದ ಜನತೆಯ ಬಾಯಲ್ಲಿ ಸೈ ಎನಿಸಿಕೊಂಡಿದ್ದಾರೆ. ಈ ಎಲ್ಲ ಶ್ರಮದಾನದ ಪ್ರತಿಫಲ ಈ ಶಿಬಿರದ ಮೇಲ್ವಿಚಾರಕರಿಗೆ ಸೇರುತ್ತದೆ ಕಾರ್ಯಕ್ರಮ ಯಶಸ್ವಿಯಾಗಲೆಂದು ಬಯಸುತ್ತೇವೆ. ಕಾರ್ಯಕ್ರಮದಲ್ಲಿ ಎಸ್‌ಎಫ್‌ಸಿಎಸ್ ನಿರ್ದೇಶಕ ದೊಡ್ಡನೆ ರಮೇಶ್, ಎಸ್.ಡಿ.ದಿವಾಕರ್, ಲಕ್ಕೇಶ, ಪ್ರಕಾಶ್, ಅರುಣ್, ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಶಾಲೆಯ ಎಲ್ಲಾ ಮಕ್ಕಳಿಗೆ ಕಲಿಕೋಪಕರಣ ಹಾಗೂ ಬ್ಯಾಗ್‌ಗಳನ್ನ ವಿತರಣೆ ಮಾಡಿದರು.

ವೀಲ್ ಚೇರ್ ವಿತರಣೆ

ತಾವರೆಕೆರೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ಈಗಾಗಲೇ ಗ್ರಾಮೀಣ ಭಾಗದ ಜನರ ಸೇವೆ ಮಾಡುತ್ತಿದ್ದಾರೆ ಎಂದು ಜನಜಾಗೃತಿ ವೇದಿಕೆ ಸದಸ್ಯ ಶಂಕರಪ್ಪ ತಿಳಿಸಿದರು.

ಹೊಸಕೋಟೆ ತಾಲೂಕಿನ ತಾವರೆಕೆರೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ (ರಿ)ವತಿಯಿಂದ ಜನಮಂಗಳ ಕಾರ್ಯಕ್ರಮದಡಿಯಲ್ಲಿ ಮಂಜೂರಾತಿ ಆದ ಕಮೋಡ್ ವಿತ್ ವೀಲ್ ಚೇರನ್ನು ವಿತರಿಸಿ ಮಾತನಾಡಿದರು. ಧರ್ಮಸ್ಥಳ ಸಂಘದಿಂದ ಮಹಿಳೆಯರಿಗೆ ತಮ್ಮದೇ ಆದ ಜೀವನ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಸ್ವಸಹಾಯ ಸಂಘಗಳ ಮೂಲಕ ಅನೇಕ ಸೌಲಭ್ಯ ಕಲ್ಪಿಸುತ್ತಿದ್ದಾರೆ. ಈಗ ದೇವಾಲಯಗಳ ಅಭಿವೃದ್ಧಿಗೆ ಹಣ ಸಹಾಯ ಮಾಡುವುದರ ಜೊತೆಗೆ ಈರೀತಿಯಾಗಿ ಅಂಗವಿಕಲರು ಸೇರಿದಂತೆ ಅನೇಕರಿಗೆ ಸಹಾಯ ಮಾಡುವ ಮೂಲಕ ಬಡವರ ಪಾಲಿನ ಕಷ್ಟದ ಸಮಯದಲ್ಲಿ ಕೈಹಿಡಿಯುವ ಆದಾರ ಸ್ಥಂಭವಾಗಿದೆ. ಈಗ ದೊಡ್ಡನಲ್ಲಾಲ ಗ್ರಾಮದ ವಿಕಲಚೇತನ ಯುವಕನಿಗೆ ಸಹಾಯ ಮಾಡಿರುವುದು ಅವರ ಕುಟುಂಬಕ್ಕೆ ಹಾಗೂ ಆ ಹುಡುಗನ ಬಾಳಿನಲ್ಲಿ ಹೆಚ್ಚಿನ ಅನುಕೂಲ ಕಲ್ಪಿಸಿದಂತಾಗುತ್ತದೆ. ಇದೇ ರೀತಿ ಸಂಘದವತಿಯಿಂದ ಅಥವಾ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ಸಹಾಯ ಪಡೆದವರು ಸಹ ಅದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು ಆಗ ಅದಕ್ಕೆ ಒಂದು ಅರ್ಥ ಸಿಗುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಯೋಜನಾಧಿಕಾರಿ ಹರೀಶ್, ವಲಯ ಮೇಲ್ವಿಚಾರಕರಾದ ಮಹೇಶ್, ಸೇವಾ ಪ್ರತಿನಿಧಿ ಶ್ಯಾಮಲಾ ಹಾಗೂ ಸ್ವಸಹಾಯ ಸಂಘದ ಸದಸ್ಯರು ಇತರರು ಉಪಸ್ಥಿತರಿದ್ದರು.

ವಸತಿ ಯೋಜನೆ ಪೂರ್ಣಗೊಳಿಸಿ: ಸಚಿವ

ಬೆಂಗಳೂರು: ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಕೈಗೊಂಡಿರುವ ವಸತಿ ಯೋಜನೆಗಳು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವಂತೆ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಸೂಚನೆ ನೀಡಿದರು.

ರಾಜೀವ್ ಗಾಂಧಿ ವಸತಿ ನಿಗಮದ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನಗರ ಆವಾಸ್ ಯೋಜನೆಯಡಿ ಬಡ ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿ ಕೊಡುವ ಕಾಮಗಾರಿಗೆ ವೇಗ ನೀಡಬೇಕು ಎಂದು ನಿರ್ದೇಶನ ನೀಡಿದರು.

ರಾಜ್ಯದಲ್ಲಿ ಈ ಯೋಜನೆಯಡಿ ಚಾಲ್ತಿಯಲ್ಲಿರುವ 52 ಸಾವಿರ ಮನೆಗಳ ಪೈಕಿ 11,400 ಮನೆ ಆದಷ್ಟು ಶೀಘ್ರ, ಹಂಚಿಕೆ ಮಾಡಬೇಕಿದೆ. ವಸತಿ ಸಮುಚ್ಚಯ ಹಾಗೂ ಮೂಲ ಸೌಕರ್ಯ ಕಾಮಗಾರಿ ಕಾಲ ಮಿತಿಯಲ್ಲಿ ಪೂರ್ಣಗೊಳಿಸಿ. ಬಸವ, ಅಂಬೇಡ್ಕರ್, ದೇವರಾಜ ಅರಸು, ವಾಜಪೇಯಿ ನಗರ ಹಾಗೂ ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಮನೆಗಳ ವಿಚಾರದಲ್ಲಿ ಫಲಾನುಭವಿಗಳ ಆಯ್ಕೆ ವಿಳಂಬದ

ಬಗ್ಗೆ ದೂರುಗಳಿದ್ದು, ಶಾಸಕರೊಂದಿಗೆ ಪತ್ರ ವ್ಯವಹಾರ ನಡೆಸಿ ಸಮಸ್ಯೆ ಬಗೆಹರಿಸಿಕೊಳ್ಳಿ, ಸಬ್ಸಿಡಿ ಮೊತ್ತ ಸಕಾಲಕ್ಕೆ ತಲುಪುವಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಿದರು.

ಬೆಂಗಳೂರು ನಗರದಲ್ಲಿ ರೂಪಿಸಿರುವ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಕಾಮಗಾರಿ ಆದಷ್ಟು ಶೀಘ್ರ ಪೂರ್ಣಗೊಳಿಸಿ, ಫಲಾನುಭವಿಗಳು ವರ್ಷಗಳಿಂದ ಕಾಯುತ್ತಿದ್ದು ಶೀಘ್ರ ಹಂಚಿಕೆಗೆ ಕ್ರಮ ಕೈಗೊಳ್ಳಿ. ಪ್ರಧಾನ ಮಂತ್ರಿ ನಗರ ಮತ್ತು ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಪಾಲುದಾರಿಕೆ ಇರುವುದರಿಂದ ಹೆಚ್ಚಿನ ಅನುದಾನ ಪಡೆಯಲು ಸದ್ಯದಲ್ಲೇ ದಿಲ್ಲಿಗೆ ತೆರಳಿ ಕೇಂದ್ರ ಸಚಿವರನ್ನು ಭೇಟಿ ಮಾಡಲಾಗುವುದು ಎಂದು ಹೇಳಿದರು.

ವಸತಿ ಇಲಾಖೆ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಸುಶೀಲಮ್ಮ, ಪ್ರಧಾನ ಅಭಿಯಂತರ ಸಂಜೀವ ರೆಡ್ಡಿ, ಪರಶುರಾಮನ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಿರು ಸುದ್ದಿ

ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣಕ್ಕೆ ಕ್ರಮ

ಬೆಂಗಳೂರು: ತುಮಕೂರು ಜಿಲ್ಲೆಯ ವಸಂತನರಸಾಪುರದ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್. ಸುರೇಶ (ಬೈರತಿ) ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ವಿಧಾನಸೌಧದ ತಮ್ಮ ಕಚೇರಿಯಲ್ಲಿ ನಗರಾಭಿವೃದ್ಧಿ ಇಲಾಖೆಯಡಿಯಲ್ಲಿ ಬರುವ ಹತ್ತು ಮಹಾನಗರ ಪಾಲಿಕೆಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯಗಳ ಪ್ರಗತಿ ಪರಿಶೀಲನೆ ನಡೆಸಿದರು.

> ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್. ಸುರೇಶ ಬೈರತಿ ಹೇಳಿಕೆ

ಆಯವ್ಯಯದಲ್ಲಿ ವಸಂತನರಸಾಪುರದ ಬಳಿ ಸುಮಾರು 500 ಎಕರೆ ಪ್ರದೇಶದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣ ಮಾಡುವುದಾಗಿ ಘೋಷಿಸಲಾಗಿದೆ. ಆದ್ದರಿಂದ ಅದರ ನಿರ್ಮಾಣದ ಬಗ್ಗೆ ಗಮನ ಹರಿಸುವಂತೆ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಹಾಸನ, ಚಿಕ್ಕಮಗಳೂರು, ಬೆಳಗಾವಿ ಮತ್ತು ಕೋಲಾರ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದೆ. ರಸ್ತೆಗೆ ಡಾಂಬರೀಕರಣ, ರಸ್ತೆ ನಿರ್ಮಾಣ ಹಾಗೂ ರಿಂಗ್ ರಸ್ತೆ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಮೈಸೂರು ರಿಂಗ್ ರಸ್ತೆ ನಿರ್ಮಾಣ ಮಾಡಲು ಕೆಲ ಅಡೆತಡೆಗಳು ಎದುರಾಗಿದ್ದು, ಮತ್ತೆ ಅಲ್ಪಾವಧಿಗೆ ಮರುಟೆಂಡರ್ ಕರೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇರುವಂತೆಯೇ ಇತರೆ ಮಹಾನಗರ ಪಾಲಿಕೆಗಳಲ್ಲಿಯೂ ಪಾಲಿಕೆ ಶಾಲೆಗಳನ್ನು ತೆರೆಯಲು ಸರ್ಕಾರ ಚಿಂತನೆ ನಡೆಸಿದೆ. ಎಲ್ಲೆಲ್ಲಿ ತೆರೆಯಲು ಸಾಧ್ಯವಿದೇ ಎನ್ನುವುದನ್ನು ಪರಿಶೀಲಿಸಿ. ಅಲ್ಲದೇ ಸ್ಮಾರ್ಟ್ ಸಿಟಿ ಯೋಜನೆಯಡಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪಾಲಿಕೆ ಶಾಲೆಗಳನ್ನು ತೆರೆಯಲು ಸಾಧ್ಯವೇ ಎಂಬುದನ್ನು ಪರಿಶೀಲಿಸಿ ತಿಳಿಸುವಂತೆ ಸಚಿವರು ಹೇಳಿದರು. ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಸೇರಿದಂತೆ ತಾಂತ್ರಿಕ ಸಿಬ್ಬಂದಿಯನ್ನು ಎರವಲು ಸೇವೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಸಚಿವರು ಸಭೆಯಲ್ಲಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕಾಮಗಾರಿ ಪರಿಶೀಲನೆ

ದೊಡ್ಡಬಳ್ಳಾಪುರ: ದಾಬಸಪೇಟೆ – ಹೊಸಕೋಟೆಯ ರಾಷ್ಟ್ರೀಯ ಹೆದ್ದಾರಿಯ ಕೋಲಾರ ಜಂಕ್ಷನ್ ಹಾಗೂ ಚೆನ್ನೈ –ಬೆಂಗಳೂರು ಹೈವೇಯಲ್ಲಿ ರೋಡ್ ಅಲೈನ್‌ಮೆಂಟ್‌ಗೆ ಸಂಬಂಧಿಸಿದಂತೆ ಇಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ರೋಡ್ ಅಲೈನ್‌ಮೆಂಟ್‌ಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು. ಹಾಗೆಯೇ ಆನೇಕಲ್, ಹೊಸೂರು ಕಡೆಗೆ ರಸ್ತೆ ವಿಸ್ತೀರ್ಣಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ನಂತರ ದೊಡ್ಡಬಳ್ಳಾಪುರ ರಸ್ತೆಯಲ್ಲಿರುವ ಹಳೆಯ ಘನತ್ಯಾಜ್ಯ ನಿರ್ವಹಣಾ ಪ್ರದೇಶಕ್ಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಸ್.ಟಿ.ಆರ್.ಆರ್ ಯೋಜನೆ ಸಾಗುವ ಮಾರ್ಗದಲ್ಲಿ ನೂತನ ಟೌನ್ ಶಿಪ್ ಗಳನ್ನು ನಿರ್ಮಿಸುವ ಉದ್ದೇಶ ನಮ್ಮ ಮುಂದಿದ್ದು, ಈ ಹಿನ್ನೆಲೆ ದೊಡ್ಡಬಳ್ಳಾಪುರದ ಬಳಿ ಎರಡು ಸ್ಥಳಗಳಲ್ಲಿ ಜಾಗ ಗುರುತಿಸುವ ಕಾರ್ಯ ನಡೆಸಲಾಯಿತು. ಈ ವೇಳೆ ಉದ್ದೇಶಿತ ಯೋಜನಾ ಪ್ರದೇಶದ ನೀಲನಕ್ಷೆಯನ್ನು ಪರಿಶೀಲಿಸಲಾಯಿತು. ಹೊಸಕೋಟೆಯಲ್ಲಿ 18500 ಎಕರೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ನಂದಗುಡಿ ಟೌನ್‌ಶಿಪ್ ಯೋಜನೆಯ ಕುರಿತಂತೆ ಇಂದು ಪರಿಶೀಲನೆ ನಡೆಸಿದೆ. ಬೆಂಗಳೂರನ್ನು ಗ್ರೇಟರ್ ಬೆಂಗಳೂರು ಮಾಡುವ ಹೊಸ ದಿಕ್ಕಿನತ್ತ ನಾವು ಹೆಜ್ಜೆ ಇಡುತ್ತಿದ್ದೇವೆ. ಸ್ಯಾಟಲೈಟ್ ರಿಂಗ್ ರಸ್ತೆ ಸಾಗುವ ಕಡೆಗೆ ಹೊಸ ಟೌನ್ ಶಿಪ್‌ಗಳನ್ನು ನಿರ್ಮಿಸಿ ಅಗತ್ಯ ಮೂಲಸೌಕರ್ಯ ಒದಗಿಸುವುದು, ರಸ್ತೆ, ರೈಲು ಮೊದಲಾದ ಸಂಪರ್ಕ ನೀಡುವುದು ನಮ್ಮ ಗುರಿಯಾಗಿದೆ ಎಂದರು.

ಉದ್ಯಮಗಳಿಗೆ ಆಧುನಿಕ ತಂತ್ರಜ್ಞಾನ ಅಗತ್ಯ

ಬೆಂಗಳೂರು: ಮೆಷಿನ್ ಟೂಲ್ಸ್ ವಲಯವು ಜಾಗತಿಕ ಸ್ಪರ್ಧೆ ಗಮನದಲ್ಲಿಟ್ಟುಕೊಂಡು ಸೂಕ್ಷ್ಮಾತಿಸೂಕ್ಷ್ಮ ಬಿಡಿಭಾಗಗಳನ್ನೂ ತಯಾರಿಸುವ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಹೇಳಿದರು.

ರಾಜ್ಯ ಸರ್ಕಾರವು ಮಹತ್ವಾಕಾಂಕ್ಷೆಯೊಂದಿಗೆ ರಚಿಸಿರುವ ಮೆಷಿನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಮೊದಲ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕುರಿತು ಉದ್ಯಮಿಗಳು ಸರ್ಕಾರಕ್ಕೆ ರಚನಾತ್ಮಕ ಸಲಹೆ ನೀಡಬೇಕು. ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಮುಂದಿನ ಹೆಜ್ಜೆ ಇಡಲಿದೆ ಎಂದರು. ಮೆಷಿನ್ ಟೂಲ್ಸ್ ತಯಾರಿಕೆಯಲ್ಲಿ ಪುಣೆ ಮತ್ತು ರಾಜಕೋಟ್ ಕೂಡ ಮುಂಚೂಣಿಯಲ್ಲಿವೆ. ನಮ್ಮ ರಾಜ್ಯದಲ್ಲಿ ಈ ವಲಯದಲ್ಲಿ ಹೂಡಿಕೆ ಆಕರ್ಷಣೆ, ಉದ್ಯೋಗ ಸೃಷ್ಟಿಯತ್ತ ಗಮನ ಕೊಡಬೇಕಾಗಿದೆ. ಮದ್ರಾಸ್ ಐಐಟಿ ಸಂಸ್ಥೆಯಲ್ಲಿರುವ ಮೆಷಿನ್ ಟೂಲ್‌ನ ಕೇಂದ್ರದಂತೆ ಕರ್ನಾಟಕದಲ್ಲೂ ಇಂಥದೊಂದು ಕೇಂದ್ರ ಸ್ಥಾಪಿಸಬೇಕು ಎಂದು ಉದ್ಯಮಿಗಳು ಸಲಹೆ ನೀಡಿದರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು. ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಪಾಧ್ಯಕ್ಷ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಸದಸ್ಯರಾದ ಟಿಮ್ ಕೆನ್ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಕೌಲ್, ವ್ಯವಸ್ಥಾಪಕ ನಿರ್ದೇಶಕ ಸಾರಂಗ್ ವಿ. ಪಾರೀಖ್, ಇಂಡಿಯನ್ ಮೆಷಿನ್ ಟೂಲ್ಸ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಶನ್ ಅಧ್ಯಕ್ಷ ರಾಜೇಂದ್ರ ಎಸ್. ರಾಜಮಾನೆ, ಹಿರಿಯ ಸಲಹೆಗಾರ ಸತೀಶ್‌ಕುಮಾರ್, ಕೆಐಎಡಿಬಿ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಮತ್ತಿತರರಿದ್ದರು.

ಮರುಮೌಲ್ಯ ಮಾಪನ: ಸ್ಪಂದನಾ ಪ್ರಥಮ ಸ್ಥಾನ

ನೆಲಮಂಗಲ : ನಗರದ ವಿಶಾಲ್ ಆಂಗ್ಲಶಾಲೆಯ ವಿದ್ಯಾರ್ಥಿನಿಎನ್.ಎಸ್ ಸ್ಪಂದನಾ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 614ಅಂಕ ಪಡೆದು ಎರಡನೇ ಸ್ಥಾನ ಪಡೆದಿತ್ತು, ಅನಂತರಮರುಮೌಲ್ಯಮಾಪನಮಾಡಿದ ನಂತರ

617ಅಂಕ ಪಡೆದಿದ್ದು ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ಪ್ರಥಮ ಸ್ಥಾನ ಪಡೆದ ಎನ್.ಎಸ್ ಸ್ಪಂದನಾ ಮಾತನಾಡಿ, ಎಸ್‌ಎಸ್‌ಎಲ್‌ಸಿಯ ಮರುಮೌಲ್ಯಮಾಪನದಲ್ಲಿ 617ಅಂಕ ಬಂದು ತಾಲೂಕಿಗೆ ಪ್ರಥಮ ಸ್ಥಾನ ಬಂದಿರುವುದು ಬಹಳಷ್ಟು ಸಂತೋಷವಾಗಿದೆ. ಶಿಕ್ಷಕರಿಗೆ, ಪೋಷಕರಿಗೆ ಧನ್ಯವಾಗಳನ್ನು ತಿಳಿಸುತ್ತೇನೆ ಎಂದರು.

ಅಭಿನಂದನೆ: 617 ಅಂಕ ಪಡೆದ ಸ್ಪಂದನಾಗೆ ಬಿಇಓ ತಿಮ್ಮಯ್ಯ, ಶಾಲೆಸಂಸ್ಥಾಪಕ ಕಾರ್ಯದರ್ಶಿಟಿ.ಕೆ ನರಸೇಗೌಡ,ಪ್ರಾಂಶುಪಾಲೆ ವಿಜಯಲಕ್ಷ್ಮೀ,ಮುಖ್ಯಶಿಕ್ಷಕ ಚಿಕ್ಕರುದ್ರಪ್ಪ, ವ್ಯವಸ್ಥಾಪಕ ಟ್ರಸ್ಟಿಮಿಥುನ್ ಗೌಡಸೇರಿದಂತೆಅನೇಕರು ಅಭಿನಂದನೆ ಸಲ್ಲಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ದೊಡ್ಡಬಳ್ಳಾಪುರ: 2023–24ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಕ್ರೀಡಾ ವಿದ್ಯಾರ್ಥಿ ವೇತನ ಯೋಜನೆಯಡಿ ಪ್ರತಿಭಾವಂತ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಾಧ್ಯಮಿಕ/ಪ್ರೌಢಶಾಲಾ ವಿದ್ಯಾರ್ಥಿ ಕ್ರೀಡಾಪಟು (6 ರಿಂದ 10ನೇ ತರಗತಿ)ಗಳಿಗೆ ವಾರ್ಷಿಕ ರೂ. 10,000/– ದಂತೆ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡುವ ಯೋಜನೆ ಇಲಾಖೆಯಲ್ಲಿ ಜಾರಿಯಲ್ಲಿದ್ದು, ಈ ಯೋಜನೆಯನ್ವಯ ಪ್ರಸ್ತುತ ಮಾಧ್ಯಮಿಕ ಅಥವಾ ಪ್ರೌಢಶಾಲೆಯಲ್ಲಿ ಓದುತ್ತಿರುವ ಕ್ರೀಡಾಪಟುಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು.

ವಿದ್ಯಾರ್ಥಿ ವೇತನಕ್ಕಾಗಿ ಅರ್ಹ ಕ್ರೀಡಾಪಟುಗಳಿಂದ ಕಚೇರಿಯ ಅಧಿಕೃತ ಜಾಲತಾಣ: https://sevasindhuservices.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಜೂನ್ 30 ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದು.

ಪೋಷಕರಿಗೆ ಸೂಲಿಬೆಲೆ ಗ್ರಾಪಂ ಕಾರ್ಯದರ್ಶಿ ಚಂದ್ರಪ್ಪ ಕಿವಿಮಾತು

ಕ್ರೀಡೆಯಿಂದ ಮಕ್ಕಳ ಆರೋಗ್ಯ ವೃದ್ಧಿ

ಸೂಲಿಬೆಲೆ: ಪ್ರತಿ ಮಗು ತನ್ನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಳಕ್ಕೆ ಕ್ರೀಡೆ ಸಹಕಾರಿಯಾಗಲಿದೆ ಎಂದು ಸೂಲಿಬೆಲೆ ಗ್ರಾಪಂ ಕಾರ್ಯದರ್ಶಿ ಚಂದ್ರಪ್ಪ ಹೇಳಿದರು

ಸೂಲಿಬೆಲೆ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಅರಿವು ಕೇಂದ್ರ, ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾದರಿ ಶಾಲೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಆಟದ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಅರಿವು ಕೇಂದ್ರಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ ಅಂತರಾಷ್ಟ್ರೀಯ ಆಟದ ದಿನದ ಅಂಗವಾಗಿ ಮಕ್ಕಳಿಗೆ ಆಟಗಳ ಮಹತ್ವವನ್ನು ತಿಳಿಸಿ ಅವುಗಳಲ್ಲಿ ಮಕ್ಕಳು ಭಾಗವಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಆಟೋಟಗಳನ್ನು ಆಯೋಜಿಸಿದೆ.ಆಟಗಳಿಂದ ಮಕ್ಕಳಲ್ಲಿ ಆತ್ಮ ವಿಶ್ವಾಸ,ಸೃಜನ ಶೀಲತೆಯ ಜತೆಗೆ ಸಮಾಜದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಆಟಗಳು ಮುಖ್ಯವಾಗಿವೆ. ಪ್ರತಿಯೊಂದು ಮಗು ತನ್ನಗೆ ಆಸಕ್ತಿರುವ ಆಟಗಳಲ್ಲಿ ಪಾಲ್ಗೊಳ್ಳಬೇಕು ಎಂದರು. ಸೂಲಿಬೆಲೆ ಗ್ರಾಮ

ಪಂಚಾಯಿತಿ ಲೆಕ್ಕಿಗರಾದ ರಂಗಸ್ವಾಮಿ ಮಾತನಾಡಿ, ಗ್ರಾಪಂ ಗ್ರಂಥಾಲಯದ ಅರಿವು ಕೇಂದ್ರಗಳಲ್ಲಿ ಓದುವ ಬೆಳಕು ಕಾರ್ಯಕ್ರಮದಡಿಯಲ್ಲಿ ಹಲವಾರು ಅಭಿಯಾನಗಳನ್ನು ಪ್ರತಿ ತಿಂಗಳು ನಡೆಸಲಾಗುತ್ತದೆ.ಈ ಮೂಲಕ ಪ್ರತಿ ತಿಂಗಳು ಉಪಯುಕ್ತ ಮಾಹಿತಿ ಚಟುವಟಿಕೆಗಳನ್ನು ಮಕ್ಕಳಿಗೆ ನೀಡಲಾಗುತ್ತಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಆಟಗಳ ಬಗ್ಗೆ ಪ್ರಬಂಧ, ಆಟೋಟ ಚಟುವಟಿಕೆಗಳನ್ನು ನಡೆಸಿ ವಿಜೇತರಾದ ಮಕ್ಕಳಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಮುಖ್ಯ ಶಿಕ್ಷಕಿ ಸೌಮ್ಯ, ಗ್ರಂಥಾಲಯ ಮೇಲ್ವಿಚಾರಕ ಪ್ರಶಾಂತ್,ಸಹ ಶಿಕ್ಷಕರಾದ ಮಂಜುಳಾ, ರಾಧಿಕಾ, ಲಕ್ಷ್ಮಿ, ಸೌಮ್ಯ, ಶಿಲ್ಪ, ವನುಜಾ, ವಿನಯ್ ಹಾಜರಿದ್ದರು.

ಇನ್‌ಟ್ರಾನ್ಸ್‌ಪೋರ್ಟ್ ಸಂಸ್ಥೆ ಸಹಾಯಕ ವ್ಯವಸ್ಥಾಪಕ ವಿಜಯ್ ಅಭಿಮತ

ಮಕ್ಕಳಿಗೆ ಉದ್ಯೋಗ ಕೌಶಲ ಅಗತ್ಯ

> **ಉದ್ಯೋಗ ಸೃಷ್ಟಿಗೆ ಒತ್ತು**
> ಯುವಪೀಳಿಗೆಗೆ ಉದ್ಯೋಗ ಸೃಷ್ಟಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. ಯುವಕರು ಕೌಶಲ ತರಬೇತಿಯನ್ನು ಪಡೆದುಕೊಂಡು ಉದ್ಯೋಗ್ಯ ಕಂಡುಕೊಳ್ಳಬೇಕಿದೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಯುವಜನತೆಯು ಸಹಕಾರ ನೀಡಬೇಕಿದೆ. ಪ್ರತಿಯೊಬ್ಬ ಯುವಕರಿಗೆ ಕೌಶಲ್ಯ ತರಬೇತಿ ಮತ್ತು ಮಾನ್ಯತೆಗಳನ್ನು ಒದಗಿಸುವ ಮೂಲಕ ಅವರು ಉತ್ತಮ ವೃತ್ತಿ ಅವಕಾಶಗಳನ್ನು ಹೊಂದಲು ರಾಜ್ಯ ಸರ್ಕಾರದ ವಿಶಿಷ್ಟ ಉಪಕ್ರಮವಾಗಿದೆ.

ದೊಡ್ಡಬಳ್ಳಾಪುರ: ಸ್ಪರ್ಧಾತ್ಮಕ ವಾತಾವರಣದಲ್ಲಿ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಜೊತೆಗೆ ಸಂವಹನ ಕೌಶಲ ಅಗತ್ಯವಾಗಿದೆ ಎಂದು ಇನ್‌ಟ್ರಾನ್ಸ್‌ಪೋರ್ಟ್ ಸಂಸ್ಥೆ ಸಹಾಯಕ ವ್ಯವಸ್ಥಾಪಕ ವಿಜಯ್ ಸಲಹೆ ನೀಡಿದರು.

ಇಲ್ಲಿನ ಶ್ರೀ ದೇವರಾಜ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯದ ಆಂತರಿಕ ಗುಣಮಟ್ಟ ಅಭಿವೃದ್ಧಿ ಕೋಶ – ಐಕ್ಯೂಎಸಿ, ಉದ್ಯೋಗ ತರಬೇತಿ ಘಟಕದ ಸಹಯೋಗದಲ್ಲಿ ಪದವಿ ವಿದ್ಯಾರ್ಥಿಗಳಿಗೆ ಉದ್ಯೋಗ ಕೌಶಲ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನ ಇತ್ಯಾದಿಗಳೂ ಪ್ರಮುಖ. ಭಾಷಾ ಜ್ಞಾನವನ್ನು ಪರಿಣಾಮಕಾರಿ ಯಾಗಿ ಹೊಂದುವುದರಿಂದ ನಿರಂತರ ಸಾಧನೆ ಸಾಧ್ಯವಾಗುತ್ತದೆ. ಉದ್ಯೋಗಾವಕಾಶ ಸಂದರ್ಶನ ಮಾದರಿಗಳ ಪರಿಚಯ ವಿದ್ಯಾರ್ಥಿಗಳಿಗೆ ಅಗತ್ಯ ಎಂದರು. ಉದ್ಯೋಗಾಧಿಕಾರಿ ಬಾಬು ಸಾಬಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪಠ್ಯ ಚಟುವಟಿಕೆಗಳ ಜೊತೆಗೆ ಮೃದುಕೌಶಲಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸುವುದು ಅಗತ್ಯವಾಗಿದ್ದು, ಪದವಿ ಬಳಿಕ ಉತ್ತಮ ಉದ್ಯೋಗಾವಕಾಶಗಳನ್ನು ಹೊಂದುವುದು ಗುರಿಯಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇನ್‌ಟ್ರಾನ್ಸ್‌ಪೋರ್ಟ್ ಸಂಸ್ಥೆ ಸಿಇಒ ಕಾರ್ತಿಕ್, ಸಿಒಒ ಸ್ಪಂದನ್, ಟ್ಯಾಲಿ ಡಿಜಿಎಂ ಪಿ.ಎನ್.ಮೂರ್ತಿ, ಉಪಪ್ರಾಂಶುಪಾಲ ಕೆ.ದಕ್ಷಿಣಾಮೂರ್ತಿ, ಐಕ್ಯೂಎಸಿ ಸಂಯೋಜಕ ಕೆ.ಆರ್. ರವಿಕಿರಣ್, ಕನ್ನಡ ವಿಭಾಗ ಮುಖ್ಯಸ್ಥ ಡಾ.ಎಂ. ಚಿಕ್ಕಣ್ಣ ಮತ್ತಿತರರು ಭಾಗವಹಿಸಿದ್ದರು.

ಬೆರಳ ತುದಿಯಲ್ಲಿ ಭೂ ಮಾಲೀಕರ ವಿವರ

ಸರ್ಕಾರಿ ಭೂಮಿ ಸಂರಕ್ಷಣೆ | ರಾಜ್ಯದಲ್ಲಿ 4.30 ಕೋಟಿ ಭೂಮಾಲೀಕರು: ಕಂದಾಯ ಸಚಿವ ಕೃಷ್ಣಬೈರೇಗೌಡ

ದೊಡ್ಡಬಳ್ಳಾಪುರ: ಸರ್ಕಾರಿ ಜಾಗಗಳ ಸಂರಕ್ಷಣೆಗಾಗಿ ರಾಜ್ಯ ಸರ್ಕಾರ ಲ್ಯಾಂಡ್ ಬೀಟ್ ವ್ಯವಸ್ಥೆ ಜಾರಿಗೆ ತಂದಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ತಾಲೂಕಿನ ಮಧುರೆ ಹೋಬಳಿಯ ಕೋಡಿಪಾಳ್ಯ, ಚೆನ್ನಾದೇವಿ ಅಗ್ರಹಾರ ಗ್ರಾಮದಲ್ಲಿ ಸರ್ಕಾರಿ ಜಾಗ, ಕೆರೆ ಒತ್ತುವರಿ ಪರಿಶೀಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ಈ ಹಿಂದೆ ಆಡಳಿತ ನಡೆಸಿದ ಹಲವು ಸರ್ಕಾರಗಳು ಸರ್ಕಾರಿ ಜಾಗ ಸಂರಕ್ಷಣೆಗೆ ಪ್ರಯತ್ನಿಸಿವೆ. ಆದರೆ, ಪ್ರಗತಿ ಸಮಾಧಾನಕರವಾಗಿಲ್ಲ, ಕಾಂಗ್ರೆಸ್ ಸರ್ಕಾರ ಅಡಳಿತಕ್ಕೆ ಬಂದ ನಂತರ ಸರ್ಕಾರಿ ಜಾಗ ಸಂರಕ್ಷಣೆಗೆ ಹಲವು ಉಪಕ್ರಮಗಳನ್ನು ತೆಗೆದುಕೊಂಡಿದೆ. ಇದರಲ್ಲಿ ಲ್ಯಾಂಡ್ ಬೀಟ್ ವ್ಯವಸ್ಥೆಯೂ ಒಂದು. ಆರು ತಿಂಗಳ ಹಿಂದೆ ಲ್ಯಾಂಡ್ ಬೀಟ್ ಆ್ಯಪ್ ಸಿದ್ಧಪಡಿಸಿದ್ದು, ಸರ್ಕಾರಿ ಜಾಗದ ವಿವರ, ಒತ್ತುವರಿ ಮಾಹಿತಿ ಬೆರಳ ತುದಿಯಲ್ಲೇ ಸಿಗಲಿದೆ ಎಂದು ಹೇಳಿದರು.

ಈಗಾಗಲೇ ಆ್ಯಪ್ ನಲ್ಲಿ 14 ಲಕ್ಷ ಸರ್ಕಾರಿ ಜಾಗಗಳನ್ನು ಅಪ್ ಲೋಡ್ ಮಾಡಲಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಮಹಜರು ನಡೆಸಿ, ಒತ್ತುವರಿಯಾಗಿದ್ದರೆ ಅದರ ವಿವರವನ್ನು ಆ?ಯಪ್ ನಲ್ಲಿ ಹಂಚಿಕೊಳ್ಳಲಿದ್ದಾರೆ. ಇದರ ಆಧಾರ ಮೇಲೆ ಜಿಲ್ಲಾಧಿಕಾರಿಗಳು ಕ್ರಮ ವಹಿಸಲಿದ್ದಾರೆ. ಸದ್ಯ ರಾಜ್ಯಾದ್ಯಂತ 5.90 ಲಕ್ಷ ಸ್ಥಳಗಳನ್ನು ಮಹಜರು ಮಾಡಲಾಗಿದೆ ಎಂದು ಹೇಳಿದರು. ಸರ್ಕಾರಿ ಜಾಗಗಳ ಮಹಜರು ಪ್ರತಿ ಮೂರು ತಿಂಗಳಿಗೊಮ್ಮೆ ಪುನರಾವರ್ತಿತವಾಗಲಿದೆ. ಇದರಿಂದ ಒತ್ತುವರಿ, ಅತಿಕ್ರಮಣ ತಡೆಯಬಹುದಾಗಿದೆ ಎಂದರು. ಆಧಾರದ ಜೋಡಣೆಯಿಂದ ಪವತಿ ಖಾತೆ ಆಗದಿರುವ ಆಸ್ತಿಗಳ ಕುರಿತು ಸಹ ಮಾಹಿತಿ ಸಿಗಲಿದೆ. ಇದರಿಂದ ಆಡಳಿತ ಸರಳೀಕರಣಗೊಂಡು, ವೇಗವಾಗಿ ಕೆಲಸ ಮಾಡಲು ಸಾಧ್ಯವಾಗಲಿದೆ ಎಂದು ಹೇಳಿದರು. ಕೆರೆಗಳ ಒತ್ತುವರಿ ತೆರವುಗೊಳಿಸಿದ ಬಳಿಕ ಸುತ್ತಲೂ ಗ್ರೀನ್ ಫೆನ್ಸಿಂಗ್ ಹಾಕಬೇಕು. ಗಿಡಗಳನ್ನು ನೆಡಬೇಕು ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

ಈ ವೇಳೆ ಕಂದಾಯ ಇಲಾಖೆಯ ಕಾರ್ಯದರ್ಶಿ ಕಠಾರಿ, ಶಾಸಕ ಧೀರಜ್ ಮುನಿರಾಜು, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಶಿವಶಂಕರ್, ಉಪ ವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ವಿಭಾ ವಿದ್ಯಾ ರಾಥೋಡ್, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚುಂಚೇಗೌಡ, ಮಾಜಿ ಶಾಸಕ ಟಿ.ವೆಂಕಟರಮಣಯ್ಯ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ್-ಪಹಣಿಗೆ ಲಿಂಕ್ ವ್ಯವಸ್ಥೆ

ರಾಜ್ಯದಲ್ಲಿ 4.30 ಕೋಟಿ ಜಮೀನು ಮಾಲೀಕರಿದ್ದಾರೆ. ಇತ್ತೀಚೆಗೆ ಯಾರದ್ದೋ ಜಮೀನನ್ನು ಮತ್ಯಾರೋ ನೋಂದಣಿ ಮಾಡಿಸಿಕೊಂಡ ಪ್ರಕರಣಗಳು ಬೆಳಕಿಗೆ ಬಂದಿವೆ. ಪಹಣಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡುವುದರಿಂದ ಮಾಲೀಕತ್ವಕ್ಕೆ ಖಾತ್ರಿ ಕೊಟ್ಟಂತಾಗುತ್ತದೆ. ಜೊತೆಗೆ ಖಾತೆ, ಪಹಣಿ ವಿತರಣೆಯೂ ಸರಳೀಕರಣವಾಗಲಿದೆ ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು. ಪಹಣಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡುವುದರಿಂದ ಒಬ್ಬರ ಜಮೀನನ್ನು ಮತ್ತೊಬ್ಬರು ಲಪಟಾಯಿಸಲು ಆಗುವುದಿಲ್ಲ. ಆಧಾರ್ ಸಂಖ್ಯೆ ಜೋಡಣೆ ಅಭಿಯಾನವನ್ನು ಮಾರ್ಚ್ ತಿಂಗಳಿಂದಲೇ ಆರಂಭಿಸಲಾಗಿದೆ. ಸದ್ಯ 1.40 ಕೋಟಿ ಆಸ್ತಿಗಳು ಲಿಂಕ್ ಆಗಿವೆ. ಇನ್ನು ಮೂರ್ನಾಲ್ಕು ತಿಂಗಳಲ್ಲಿ ಎಲ್ಲ ಆಸ್ತಿಗಳ ಜೋಡಣೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಸರಕಾರಿ ಶಾಲೆಗೆ ಮಕ್ಕಳ ದಾಖಲಿಸಿ: ರಮೇಶ್

ಮಂಡ್ಯ: ಸರ್ಕಾರಿ ಕನ್ನಡ ಶಾಲೆಗೆ ಮಕ್ಕಳನ್ನು ದಾಖಲಿಸದ ಶಿಕ್ಷಕರು ಮತ್ತು ಸರ್ಕಾರಿ ನೌಕರರ ವೇತನ ಕಡಿತಗೊಳಿಸುವುದು, ತುಟ್ಟಿ ಭತ್ಯೆ ನೀಡದಂತೆ ಕದಂಬ ಸೈನ್ಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲೇ ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ ಎಂದರೆ ಮಂಡ್ಯ. ಇತ್ತೀಚೆಗೆ ನಡೆದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 3751 ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲೇ ಅನುತ್ತೀರ್ಣರಾಗಿದ್ದಾರೆ. ಇದಕ್ಕೆ ಶಿಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡಬೇಕು ಎಂದು ತಿಳಿಸಿದರು. ಶಿಕ್ಷಕರು ಮತ್ತು ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮದ ಖಾಸಗೀ ಶಾಲೆಗೆ ದಾಖಲಿಸುತ್ತಾರೆ. ಬಡ ಮಕ್ಕಳು ವ್ಯಾಸಂಗ ಮಾಡುವ ಕನ್ನಡದ ಸರ್ಕಾರಿ ಶಾಲೆಗಳ ಬಗ್ಗೆ ಗಮನ ಹರಿಸದಿರುವುದೇ ಇದಕ್ಕೆ ಕಾರಣವೆನ್ನಲಾಗಿದೆ ಎಂದು ಆರೋಪಿಸಿದರು. ಕಾವೇರಿ ನದಿ ನಮಗೆ ಹೇಗೆ ಜೀವದ್ರವ್ಯವೋ ಅದೇ ರೀತಿ ಕನ್ನಡ ನಮ್ಮ ಉಸಿರು. ಕನ್ನಡ ಭಾಷೆಯನ್ನು ಕಲಿಸದೆ ಇರುವ ಶಿಕ್ಷಕರು, ಶಿಕ್ಷಣ ಇಲಾಖೆ, ಪೋಷಕರು ಕಾವೇರಿ ನೀರು ಇಲ್ಲದೇ ಬದುಕಲು ಆಗುವುದಿಲ್ಲವೇ ಹಾಗೆ ತಾಯಿ ಭಾಷೆ ಕನ್ನಡ ಇಲ್ಲದೆ ಬದುಕಲು ಸಾಧ್ಯವಿಲ್ಲ. ಈ ಬಗ್ಗೆ ಪ್ರತಿಯೊಬ್ಬರೂ ಚಿಂತನೆ ಮಾಡಬೇಕು. ಕನ್ನಡವನ್ನು ಉಳಿಸುವ ಕೆಲಸವಾಗಬೇಕು ಎಂದು ಹೇಳಿದರು.

ಶಿಕ್ಷಕರು ಮತ್ತು ಸರ್ಕಾರಿ ಅಧಿಕಾರಿ, ನೌಕರರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ದಾಖಲಿಸಿ ಕನಿಷ್ಠ 7ನೇ ತರಗತಿಯವರೆಗಾದರೂ ಕನ್ನಡವನ್ನು ಕಲಿಸುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕು. ಎಲ್ಲ ವ್ಯಕ್ತಿಗಿಂತಲೂ ಸರ್ವಶ್ರೇಷ್ಠವಾದದ್ದು ಶಿಕ್ಷಕರ ವೃತ್ತಿ. ವೈದ್ಯ ತಪ್ಪು ಮಾಡಿದರೆ ಜೀವವೇ ಹೋಗುತ್ತದೆ, ವಕೀಲರು ತಪ್ಪು ಮಾಡಿದರೆ ಕಕ್ಷಿದಾರನಿಗೆ ಅನ್ಯಾಯವಾಗುತ್ತದೆ. ಶಿಕ್ಷಕ ತಪ್ಪು ಮಾಡಿದರೆ ಜೀವನವೇ ಹೋಗುತ್ತದೆ ಎಂಬುದನ್ನು ಎಲ್ಲರೂ ತಿಳಿಯುವುದು ಅಗತ್ಯ ಎಂದರು.

ಶಿಕ್ಷಕರು ಮತ್ತು ಶಿಕ್ಷಣ ಇಲಾಖೆ ಸರ್ಕಾರಿ ಶಾಲೆಗಳನ್ನು ಕಡೆಗಣನೆ ಮಾಡಿದ್ದರಿಂದಾಗಿ ಖಾಸಗೀ ಶಾಲೆಗಳು ತಲೆ ಎತ್ತಿ ಸಂಪೂರ್ಣ ಲಾಭ ಮಾಡಿಕೊಳ್ಳುತ್ತಿವೆ. ಕನ್ನಡ ಭಾಷೆ ಕಡ್ಡಾಯವಾಗಿ ಕಲಿಸಬೇಕು. ಆದರೆ ಬೇರೆ ಭಾಷೆಗಳ ವಿರೋಧಿಗಳು ನಾವಲ್ಲ, ಸ್ಪರ್ಧಾತ್ಮಕ ಯುಗದಲ್ಲಿ ಆಂಗ್ಲಭಾಷೆ ಮತ್ತು ಹಿಂದಿ ಸಹ ಅಗತ್ಯವಿದೆ. ಆದರೆ ಇವುಗಳ ನಡುವೆ ಕನ್ನಡ ಕಮರಿಹೋಗುವುದು ಸರಿಯಲ್ಲ ಎಂದು ಹೇಳಿದರು. ಸರ್ಕಾರಿ ಶಾಲೆಗಳನ್ನು ಇದೇ ರೀತಿಯಲ್ಲಿ ಕಡೆಗಣಿಸಿದ್ದೇ ಆದಲ್ಲಿ ಹಣವುಳ್ಳವರಿಗೆ ಮಾತ್ರ ವಿದ್ಯೆ ಎಂಬಂತಾಗುತ್ತದೆ. ಈ ಬಗ್ಗೆ ಪ್ರತಿಯೊಬ್ಬ ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳು ಎಚ್ಚೆತ್ತು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಕನ್ನಡ ಓದಲು ಮತ್ತು ಬರೆಯಲು ಬಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಖಾಸಗೀ ಮನೆ ಪಾಠಕ್ಕೆ ಸೇರಿ ಕನ್ನಡ ಕಲಿಯುವುದು ಒಳಿತು. ನಾಡಿನ ಇತಿಹಾಸದಲ್ಲೇ ಶಿಕ್ಷಣ ಸಚಿವರು ಈ ರೀತಿ ಕನ್ನಡವನ್ನು ತಪ್ಪು ತಪ್ಪಾಗಿ ಮಾತನಾಡಿ, ನಗೆಪಾಟಲಿಗೆ ಗುರಿಯಾದ ಮೊದಲ ಶಿಕ್ಷಣ ಸಚಿವರು ಎಂದು ಟೀಕಿಸಿದರು.

ಸೈನ್ಯದ ಪದಾಧಿಕಾರಿಗಳ ಜೋಸೆಫ್ ರಾಮು, ಉಮ್ಮಡಹಳ್ಳಿ ನಾಗೇಶ್, ಚಂದ್ರಶೇಖರ್, ಟಿ.ಡಿ. ಬಸವರಾಜು ಇತರರು ಗೋಷ್ಠಿಯಲ್ಲಿದ್ದರು.

ಚಾ.ನಗರ: ಜೂ.16ರಂದು ಶಿರಡಿ ಸಾಯಿಬಾಬಾ ಮಂದಿರ ಉದ್ಘಾಟನೆ

ಚಾಮರಾಜನಗರ: ನಗರದ ವಿವೇಕನಗರದಲ್ಲಿರುವ ಫಾರೆಸ್ಟ್ ನರ್ಸರಿ ಬಳಿ ನಿರ್ಮಿಸಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರವನ್ನು ಜೂ.16 ರಂದು ಉದ್ಘಾಟನೆ ಮಾಡಲಾಗುವುದು ಎಂದು ಶ್ರೀ ಶಿರಡಿ ಸಾಯಿಬಾಬಾ ಧಾರ್ಮಿಕ ಮತ್ತು ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಆರ್. ರಾಜು ತಿಳಿಸಿದರು.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿರಡಿ ಸಾಯಿ ಬಾಬಾ ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಜೂ.14ರಿಂದ ಮೂರು ದಿನಗಳ ಕಾಲ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳಲಾಗಿದೆ. ಜೂ.14ರಂದು ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿದೆ. ಅಂದು ಸಂಜೆ 6 ಗಂಟೆಗೆ ಶ್ರೀ ಶಿರಡಿ ಸಾಯಿ ಬಾಬಾರವರ ಹಾಗೂ ಧ್ಯಾನಾಂಜನೇಯಸ್ವಾಮಿಯವರ ಭಕ್ತಿ ಗೀತೆಗಳ ಗಾಯನ ನಡೆಯಲಿದೆ ಎಂದರು. ಜೂ.15 ರಂದು ಸಂಜೆ 4 ಗಂಟೆಗೆ ಪ್ರಧಾನ ಹೋಮಗಳು, ಶಾಂತಿ-ಪುಷ್ಟಿ ಹೋಮಗಳು, ಕುಬೇರ ಹೋಮ, ಪೂಜೆ, ಆರತಿ ನಡೆಯಲಿದೆ. ಸಂಜೆ 6 ಗಂಟೆಗೆ ಖ್ಯಾತ ಹರಿಕಥಾ ವಿದೂಷಿ ಡಾ.ಮಾಲಿನಿ ಅವರಿಂದ ಶ್ರೀ ಶಿರಡಿ ಸಾಯಿಬಾಬಾರವರ ವೈಭವದ ಕಥಾವಲೋಕನ ಜರುಗಲಿದೆ. 16ರಂದು ತ್ರಿವೇಣಿ ಸಂಗಮದಿಂದ ನೀರು ತಂದು ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬಳಿಕ ಅದನ್ನು ಸಾಯಿಬಾಬಾ ಮಂದಿರಕ್ಕೆ ಕೊಂಡೊಯ್ಯಲಾಗುವುದು. ದೇವರ ಪ್ರತಿಷ್ಠಾಪನೆ. ಮಹಾಕುಂಭಾಭಿಷೇಕ, ಮಹಾಮಂಗಳಾರತಿ ನಡೆಯಲಿದೆ. ಟ್ರಸ್ಟ್ ಅಧ್ಯಕ್ಷ ಬಾಲಸುಬ್ರಹ್ಮಣ್ಯ, ಟ್ರಸ್ಟ್‌ನ ಗೌರವಾಧ್ಯಕ್ಷ ಎಂ.ರಾಜು, ಕಾರ್ಯಾಧ್ಯಕ್ಷ ಉಮೇಶ್ ಎಸ್‌ಪಿಕೆ, ಕಾರ್ಯದರ್ಶಿ ಆರ್.ರಾಜು ಎಸ್‌ಪಿಕೆ, ಸಹ ಕಾರ್ಯದರ್ಶಿ ಆರ್. ಮುರುಗೇಶನ್, ಸದಸ್ಯ ವಿ. ಶಕ್ತಿ, ಉತ್ತರಸ್ವಾಮಿ, ಆರ್. ಲೋಕೇಶ್ ಇದ್ದರು.

ಕಾರ್ಕಳ ಪುರಸಭೆ, ಕಾರ್ಕಳ, ಉಡುಪಿ ಜಿಲ್ಲೆ–574104
ದೂರವಾಣಿ: 08258–230292, 231023 ಫ್ಯಾಕ್ಸ್: 08258–235664
E-Mail: itstaff_ulb_karkala@yahoo.co.in, tmckarkala@yahoo.co.in
Website: www.karkalatown.mrc.gov.in
ಕಾಮಸುಶಾಂತ್ರಿಕ ವಿಭಾಗ: ಸಿಆರ್:86:2022–23 ದಿನಾಂಕ: 07–06–2024

ಮರು ಇ-ಟೆಂಡರ್ ಪ್ರಕಟಣೆ

ಕಾರ್ಕಳ ಪುರಸಭೆಯ 2023–24 ನೇ ಸಾಲಿನ 15ನೇ ಹಣಕಾಸು ಅನುದಾನ ಹಾಗೂ 2023–24 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ (ಪ.ಜಾ.ಪ್ರ) ಅನುದಾನದಡಿ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document KW-1) ಟೆಂಡರನ್ನು ಇ-ಪೋರ್ಟಲ್ (Website: http://kppp.karnataka.gov.in/) ಮುಖಾಂತರ ಆಹ್ವಾನಿಸಲಾಗಿದೆ.
(1) DMA/2023-24/WS/WORK_INDENT 11981/Call-3 – ರೂ. 5.50 ಲಕ್ಷ (SC) (2) DMA/2023-24/WS/WORK_INDENT 11910/Call-3 – ರೂ. 6.00 ಲಕ್ಷ (SC) (3) DMA/2023-24/RD/WORK_INDENT 11715/Call-3 – ರೂ. 4.00 ಲಕ್ಷ (SC) (4) DMA/2023-24/WS/WORK_INDENT 12104/Call-3 – ರೂ. 10.00 ಲಕ್ಷ (5) DMA/2023-24/BD/ WORK_INDENT 13298/Call-3 – ರೂ. 0.51 ಲಕ್ಷ (6) DMA/2023-24/WS/WORK_INDENT 11987/Call-3 – ರೂ. 6.00 ಲಕ್ಷ (7) DMA/2023-24/WS/WORK_INDENT 11975/Call-3 – ರೂ. 4.50 ಲಕ್ಷ (8) DMA/2023-24/ WS/WORK_INDENT 11919/Call-3 – ರೂ. 5.00 ಲಕ್ಷ (9) DMA/2023-24/WS/WORK_INDENT 11835/Call-3 – ರೂ. 4.50 ಲಕ್ಷ (10) DMA/2023-24/WS/ WORK_INDENT 11812/Call-3 – ರೂ. 4.10 ಲಕ್ಷ (11) DMA/2023-24/WS/ WORK_INDENT 11747/Call-3 – ರೂ. 1.30 ಲಕ್ಷ (12) DMA/2023-24/RD/WORK_INDENT 11470/Call-3 – ರೂ. 4.00 ಲಕ್ಷ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 18/06/2024 ಅಪರಾಹ್ನ 4:30 ಗಂಟೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: 20/06/2024 ಪೂರ್ವಾಹ್ನ 10:30 ಗಂಟೆ
ಸಹಿ/– ಆಡಳಿತಾಧಿಕಾರಿ, ಪುರಸಭೆ, ಕಾರ್ಕಳ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕಾರ್ಕಳ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಮೈಸೂರು ಜಿಲ್ಲೆ, ಮೈಸೂರು. ದೂ:0821-2424070 ಇಮೇಲ್: dudc_mys@yahoo.co.in
ಸಂಖ್ಯೆ:ಮುನಿಸಿ(4)/ಎಸ್‌ಬಿಎಂ2.0/ಎಂ.ಆರ್.ಎಫ್/2024–25 ದಿನಾಂಕ:11.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ, ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಘನತ್ಯಾಜ್ಯ ನಿರ್ವಹಣೆಗಾಗಿ ಅವಶ್ಯವಿರುವ ಯಂತ್ರಗಳ ಖರೀದಿಗಾಗಿ ಮತ್ತು ಕಾಮಗಾರಿಗಳಿಗೆ ಈ ಕೆಳಕಂಡ ಇಂಡೆಂಟ್‌ಗಳಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು/ಬಿಡ್ಡುದಾರರು ಕೆಪಿಪಿಪಿ ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ. ಇಂಡೆಂಟ್ ಸಂಖ್ಯೆಗಳು–DMA/2024-25/IND1946, DMA/2024-25/IND1952, DMA/2024-25/IND1947, DMA/2024-25/IND1948, DMA/2024-25/IND1949, DMA/2024-25/IND1950, DMA/2024-25/IND1951, DMA/2023-2024/OW/WORK_INDENT/15673/CALL-3, DMA/2023-2024/OW/WORK_INDENT/15671/CALL-3, DMA/2023-2024/OW/WORK_INDENT/15824/CALL-2, DMA/2023-2024/OW/WORK_INDENT/15819/CALL-3
ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ : 20–06–2024 ಸಂಜೆ 5.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:21–06–2024 ಸಂಜೆ 05.10 ಗಂಟೆ. ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು
DIPR/MYS/KAVITA/68/24-25

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/47/2023–24 ದಿನಾಂಕ: 16–03–2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹಂಚಿಪುರ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)** ರ ಅಡಿಯಲ್ಲಿ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **'ವ್ಯವಸಾಯ ವಲಯದಿಂದ ಕೈಗಾರಿಕೆ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ನರಸಿಂಹಮೂರ್ತಿ ಬಿನ್ ವೆಂಕಟನರಸಯ್ಯ	ನೆಲಮಂಗಲ/ ಕಸಬಾ/ ಹಂಚೀಪುರ	150/2	01-16	ವ್ಯವಸಾಯ	ಕೈಗಾರಿಕೆ
		151/2	01-09		
		ಒಟ್ಟು	02-25		

ಷರಾ:– ಪ್ರಸ್ತಿತ ಜಮೀನುಗಳಲ್ಲಿ ಕೈಗಾರಿಕೆ ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ ವಲಯದಿಂದ ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಅಸಂ/ಬೆಂ.ಗ್ರಾ/289/ಅಕ್ಟೋಬರ್/2024–25

IN THE COURT OF THE PRINCIPAL CIVIL JUDGE AND JMFC AT HOSAKOTE
C.Misc No.84/2024
Between:Smt. Padma W/o Narayanaswamy, Aged about 41 years, R/O Muthagadahalli village, Sulibe Hobli, Hosakote Town, Bengaluru Rural District ...**Petitioners**
And: Tahsildar, Birth & Death Registrar, Hosakote ...**Respondent**
NOTICE TO GENERAL PUBLIC
Whereas the petitioners have filed above petition seeking direction to the Tahasidhar, Hoskote Taluk, for issuance of the death certificate for mother Lakshmidevamma W/o Late Narayanaswamy was died on 03.02.2021 at Muthugadahalli Village, Sulibele Hobli, Hoskote Taluk, Bangalore rural district. The said case is posted for appearance of interested parties on **12.07.2024 at 11 am** before the above said court. Any interested parties shall appear in person through advocate filing which the above case will be disposed as ex-parte.
Given under my hand and seal of the court this day of 12/6/2024
BY ORDER OF THE COURT
Sd/- Sheristedar
Civil Judge & J.M.F.C. Hoskote
Ravi D. R. Advocate
Hoskote

PUBLIC NOTICE
Documents Missing
This is to inform the general public that my client **Munvardeen Sirajudeen** has lost his 3 Sale Deeds of his earlier vendors i.e. 1. Sale Deed Dated: 19.01.1993 registered as Document No.2995/1993-94 in the office of the sub-registrar Jayanagar executed by Janab Abdul Jabbar conveyed the Schedule property to and favour of R.Danish Khanum alias Nowzia Khanum.
2. Sale Deed Dated: 24.03.1998 and registered as Document No.3424/1997-98 in the office of the sub-registrar Jayanagar executed by R.Danish Khanum alias Nowzia Khanum conveyed the Schedule property to and in favour of Siraj Ahmed, Parveez Ahmed and Nazeer Ahmed. 3. Sale Deed Dated: 17.12.2003 and registered as Document No.4996/2003-04 in the office of the sub-registrar Jayanagar executed by Siraj Ahmed, Parveez Ahmed and Nazeer Ahmed conveyed the Schedule property to and in favour of B. Khasim Shariff and Rahathunissa.
In respect of land and residential All that piece and parcel of the Residential House Property constructed on Site bearing No.6, [formerly Site No.9, situated at the 2nd Main Road, 4 Cross, Someshwaranagar, Jayanagar, 1st Block, earlier called as Lalbagh Siddapura, Behind Mental Hospital, Bangalore], presently comes under the Jurisdiction of Bruhath Bangalore Mahanagara Palike, Bangalore, situated at 2nd Main Road, Someshwara Nagara, Bangalore, having PID No.61-54-6, and BBMP Ward No.61, measuring East to West: 30 ft North to South: 35 ft total 1050 Sq.Feets, Bounded East by 2nd Main Road, West by property bearing no.10, North by 4th cross, property bearing no.5. Inspite of best efforts same could not be traced, hence for which i had lodged a online police complaint dated on 01.06.2024 and Lr report no. 1079995/2024. If found, kindly inform to
Mahaboob Basha Advocate.
Access Law, VOX Spectrum House, No.65, Cock Burn Road, Shivajinagar, Bangalore-560051 Mobile -7899767873.
Date: 13.06.2024 **Place:** Bangalore

ಲೋಕಾಯುಕ್ತ ಕುಂದುಕೊರತೆ ಸಭೆ

ಶ್ರೀರಂಗಪಟ್ಟಣ: ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಮಂಡ್ಯ ಜಿಲ್ಲಾ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ ನಡೆಯಿತು.

ಸಭೆಯಲ್ಲಿ ಕಂದಾಯ ಇಲಾಖೆಯಲ್ಲಿ ನಡೆದಿರುವ 7 ಅಕ್ರಮ ದೂರುಗಳ ಅರ್ಜಿ, ಪುರಸಭೆ ಹಾಗೂ ತಾ.ಪಂ ಕಚೇರಿ ಅಧಿಕಾರಿಗಳ ಅಕ್ರಮ ದೂರು ಸೇರಿದಂತೆ ಒಟ್ಟು 9 ಅರ್ಜಿಗಳನ್ನ ಸಾರ್ವಜನಿಕರು ಜಿಲ್ಲಾ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಅವರಿಗೆ ನೀಡಿದರು. ಸ್ಥಳದಲ್ಲೇ ಸಾರ್ವಜನಿಕರ ಕೆಲ ದೂರುಗಳ ಕುರಿತು ಆಯಾ ಸಂಬಂಧಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದು ವಿಲೇವಾರಿ ಮಾಡಿದರು. ಇನ್ನುಳಿದ ಅರ್ಜಿಗಳಿಗೆ ಮಂಡ್ಯ ಕಚೇರಿಗೆ ಆಗಮಿಸಿ ಅಗತ್ಯ ದಾಖಲೆ ಹಾಗೂ ಸರಿಯಾದ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಸೂಚನೆನೀಡಿದರು. ಸಭೆಯಲ್ಲಿ ತಹಶೀಲ್ದಾರ್ ಪರುಶುರಾಮ್ ಸತ್ತಿಗೇರಿ, ತಾ.ಪಂ ಇಒ ವೇಣು, ಲೋಕಾಯುಕ್ತ ಡಿವೈಎಸ್‌ಪಿ ಸುನೀಲ್ ಕುಮಾರ್, ಇನ್‌ಸ್ಪೆಕ್ಟರ್ ಮೋಹನ್ ರೆಡ್ಡಿ ಹಾಗೂ ಬ್ಯಾಟರಾಯಿ ಗೌಡ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಮಕ್ಕಳ ದುಡಿಮೆ ಬೇಡ

ಶ್ರೀರಂಗಪಟ್ಟಣ: ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿ ದುಡಿಯಲು ಬಳಸಿಕೊಳ್ಳದೆ ಅವರನ್ನು ಒಳ್ಳೆಯ ಶಿಕ್ಷಣ ಕೊಡಿಸುವ ಮೂಲಕ ಉತ್ತಮ ಪ್ರಜೆಯನ್ನಾಗಿ ಮಾಡಿ ಎಂದು ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಚ್. ಮಹದೇವಪ್ಪ ಹೇಳಿದರು.

Advocate for Petitioner: **Sri.Bhavya.G.K.**, Advocate, Gowribidanur.

CHICKBALLAPUR, DATE: 06.06.2024

PAPER NOTICE

BEFORE THE HON'BLE COURT OF PRINCIPAL SMALL CAUSES AND MACT AT MYSORE

MVC NO: 1562/2023

PETITIONER: Dhanush P S/o Prabhuswamy N, aged about 12 years, R/O Lingayatha Street, Gumballi Chamarajanagar Tq. and Town. (The petitioner is being minor represented by his father by name Prabhuswamy N s/o Nagaraju as a guardian and next friend).

V/S

RESPONDENTS: Azgar Pasha S/o Bakshi, #69, Cowdalli Village and Post, Kollegala Tq., Chamarajanagar Dist.-571434 (Owner cum driver of the Bolero Vehicle bearing no : KA-10-M-2786)

The Branch Manager **IFFCO TOKIO General Insurance Company Ltd.** #846, New Kantharaj Road, Above Krishna Bakery, Near Akshay Bhandar, Kuvempunagar, Mysore. Policy No: 1-210FCUUOP400 Policy: MR905927 Valid From: 24-11-2022 to 23-11-2023 (Insurer of the Bolero Vehicle bearing no : KA-10-M- 2786)

COURT NOTICE

The petitioner has filed the above case against the Respondents for seeking compensation in respect of accidental injuries in the RTA that took place on 25.05.2023. The above said case is posted on 19-07-2024 for the appearance of the Respondent No.1. Hence, the Respondent No.1 in the above case is hereby informed to appear before this Hon'ble Court at 11.00 a.m. on the above said date of hearing either personally or through your counsel without fail and to file objections if any. Otherwise, you will be placed ExParte and the case will be heard and disposed off in your absence.

Given under my hand and seal of the court 10-05-2024

By the order of the court, Chief Ministerial Officer, Court Small Causes, Mysore

Sri. Mallikarjunaswamy, Advocate

ಐದು ಭಾಗಗಳಾಗಿ ಬಿಬಿಎಂಪಿ ವಿಭಜನೆ

ಸರ್ಕಾರದ ನಿರ್ಧಾರಕ್ಕೆ ವ್ಯಾಪಕ ಆಕ್ರೋಶ | ವಿವಿಧ ಸಂಘಟನೆಗಳಿಂದ ಉಗ್ರ ಹೋರಾಟದ ಎಚ್ಚರಿಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಭಾಗಗಳಾಗಿ ವಿಭಜನೆ ಮಾಡಲು ರಾಜ್ಯ ಸರ್ಕಾರವು ತಯಾರಿ ನಡೆಸುತ್ತಿದ್ದು, ಸರ್ಕಾರದ ನಿರ್ಧಾರಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಬೆಂಗಳೂರನ್ನು ವಿಭಜನೆ ಮಾಡಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಕನ್ನಡಪರ ಹೋರಾಟಗಾರರು ಎಚ್ಚರಿಕೆ ನೀಡಿದ್ದಾರೆ. ಅಲ್ಲದೇ ವಿವಿಧ ಸಂಘಟನೆಗಳು ಹಾಗೂ ನಗರವಾಸಿಗಳಿಂದ ತೀವ್ರ ವಿರೋಧ ಪ್ರಾರಂಭವಾಗಿದೆ.

ಈ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಮಾಜಿ ಅಧ್ಯಕ್ಷ ರಮೇಶ್ ಎನ್.ಆರ್., ಯಾವುದೇ ಕಾರಣಕ್ಕೂ ಕನ್ನಡಿಗರ ಮಾನಸಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ಕಾರ್ಯಗಳಿಗೆ ಕೈಹಾಕಬಾರದು ಮತ್ತು ಬೆಂಗಳೂರಿನ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡಹುವ ಕಾರ್ಯಕ್ಕೆ ಕೈಹಾಕಬಾರದೆಂದು ಒತ್ತಾಯಿಸಿದ್ದಾರೆ.

ನಾಡಪ್ರಭು ಕೆಂಪೇಗೌಡರು ಕಟ್ಟಿರುವ ಬೆಂಗಳೂರು ಮಹಾನಗರವನ್ನು ಏಕ ಬೆಂಗಳೂರು ಮಹಾನಗರವನ್ನಾಗಿಯೇ ಉಳಿಸಿಕೊಳ್ಳುವ ಸಂಬಂಧ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ವಿಭಜನೆ ಮಾಡಲು ಹೊರಟರೆ ಪ್ರತಿಭಟನೆ: ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಮಾತನಾಡಿ, ನಾಡಪ್ರಭು ಕೆಂಪೇಗೌಡರು ನಿರ್ಮಿಸಿರುವ ಬೆಂಗಳೂರನ್ನು ವಿಭಜನೆ ಮಾಡಲು ಹೋದರೆ, ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ನಾಡಪ್ರಭು ಕೆಂಪೇಗೌಡ ನಾಗರಿಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ಎ.ಎಚ್.ಬಸವರಾಜ್ ಮಾತನಾಡಿ, ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರನ್ನು ವಿಭಜನೆ ಮಾಡಲು ಮುಂದಾದರೆ ಹೋರಾಟ ಅನಿವಾರ್ಯ ಎಂದಿದ್ದಾರೆ.

ಹೇಗೆ ವಿಂಗಡನೆ ಮಾಡಲಾಗುತ್ತದೆ?

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಇರುವ 225 ವಾರ್ಡ್‌ಗಳನ್ನು 400 ವಾರ್ಡ್‌ಗಳಾಗಿ ವಿಭಜಿಸಲಾಗುತ್ತದೆ. ನಂತರ 80 ವಾರ್ಡ್‌ಗಳನ್ನೊಳಗೊಂಡ ಒಂದು ಪಾಲಿಕೆ ರಚನೆ ಮಾಡುವುದು ಕಾಂಗ್ರೆಸ್ ಸರ್ಕಾರದ ಉದ್ದೇಶವಾಗಿದೆ.

ಹಳೇ ಸಮಿತಿಯಿಂದ ಮತ್ತೊಮ್ಮೆ ವರದಿ!

ನಿವೃತ್ತ ಐಎಎಸ್ ಅಧಿಕಾರಿ ಬಿ.ಎಸ್.ಪಾಟೀಲ್ ನೇತೃತ್ವದ ಸಮಿತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಭಾಗಗಳಾಗಿ ವಿಭಜನೆಗೆ ವರದಿ ಪಡೆಯಲು ಮುಂದಾಗಿದೆ. ಇದಕ್ಕೂ ಮೊದಲು ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯನವರು ಇದೇ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ಐದು ವಿಭಾಗ ಮಾಡಬಹುದೆಂದು ವರದಿ ಸಲ್ಲಿಸಿತ್ತು. ಆ ನಂತರದಲ್ಲಿ ಬಿಜೆಪಿ ಸರ್ಕಾರ ಇದನ್ನು ಜಾರಿ ಮಾಡದೆ ಹಾಗೇ ಬಿಟ್ಟಿತ್ತು. ಈಗ ಪುನಃ ಸಿದ್ದರಾಮಯ್ಯ ಸರ್ಕಾರವು ಹಳೇ ಸಮಿತಿ ರಚಿಸಿ ಮತ್ತೊಂದು ವರದಿ ಪಡೆಯುವುದಕ್ಕೆ ತಯಾರಿ ನಡೆಸಿದೆ. ಅಲ್ಲದೇ ಅದನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ.

"ನಾಡಪ್ರಭು ಕೆಂಪೇಗೌಡರು ಬೆಂಗಳೂರನ್ನು ಅತ್ಯಂತ ಸುಂದರವಾಗಿ, ಸುಸಜ್ಜಿತವಾಗಿ ಕಟ್ಟಿ ಬೆಳೆಸಿದ್ದರು. ಆದರೆ, ಈ ವಿಭಜನೆ ವಿಚಾರದಿಂದ ಬೇಸರ ತಂದಿದ್ದು, ಯಾಕೆಂದರೆ ಬೆಂಗಳೂರನ್ನು ಐದು ವಿಭಾಗಗಳಾಗಿ ವಿಂಗಡಿಸಲು ಹೋಗುವುದು ಬೆಂಗಳೂರನ್ನು ಒಡೆದಂತೆ. ಇದು ಅತ್ಯಂತ ದುಷ್ಪರಿಣಾಮದ ವಿಚಾರವಾಗಿದೆ. ಹಾಗಾಗಿ ಯಾವುದೇ ಕಾರಣಕ್ಕೆ ಆಗಬಾರದು.

■ ಉತ್ಕರ್ಷ್ ಕೆ.ಎಸ್., ಸಾಮಾಜಿಕ ಕಾರ್ಯಕರ್ತ



"ರಾಜ್ಯದ ಕಾಂಗ್ರೆಸ್ ಸರ್ಕಾರವು ಒಡೆದು ಆಳಲು ಹೊರಟಿದೆ, ಇನ್ನು ಬೆಂಗಳೂರನ್ನು ಒಡೆಯುತ್ತೇವೆ ಎಂದು ಹೇಳಿದರೆ ಜನರು ಧಂಗೆ ಏಳುತ್ತಾರೆ. ಹಾಗಾಗಿ, ಸರ್ಕಾರವು ಬಿಬಿಎಂಪಿಯನ್ನು ಐದು ಭಾಗ ಎಂದು ಹೆಸರಿಟ್ಟಿದೆ. ಇದು ಯಾವುದೇ ಕಾರಣಕ್ಕೂ ಆಗಬಾರದು, ಯಾಕೆಂದರೆ ಬೆಂಗಳೂರಿನಲ್ಲಿ ಆದಾಯ ಕಡಿಮೆ ಹಾಗೂ ಹೆಚ್ಚು ಬರುವ ಪ್ರದೇಶಗಳಿರುತ್ತದೆ. ವಿಭಜನೆ ಮಾಡಿದಾಗ ಯಾವ ಪ್ರದೇಶಕ್ಕೆ ಹೆಚ್ಚು ಆದಾಯ ಬರುತ್ತದೆಯೋ ಅಲ್ಲಿಗೆ ಹೆಚ್ಚು ಪ್ರಾಧಾನ್ಯ ಲಭಿಸುತ್ತದೆ.

■ ಸ್ಫೂರ್ತಿ ಮುರಳೀಧರ್, ವಿದ್ಯಾರ್ಥಿನಿ

"ಕೆಂಪೇಗೌಡರು ಕಟ್ಟಿರುವಂತಹ ಬೆಂಗಳೂರನ್ನು ಐದು ವಿಭಾಗಗಳನ್ನಾಗಿ ಮಾಡಲು ಹೊರಟಿರುವುದು ಖಂಡನೀಯ. ಏಕೆಂದರೆ ಬೆಂಗಳೂರು ಈಗಾಗಲೇ ಕೆಂಪೇಗೌಡರ ಕಾಲದಿಂದಲೇ ಅತ್ಯಂತ ಸುವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಮಾದರಿ ನಗರವಾಗಿದೆ. ನಾವು ಇದನ್ನು ವಿಭಾಗಿಸಲು ಮುಂದಾದರೆ, ಕೆಂಪೇಗೌಡರ ಅಸ್ಮಿತೆಗೆ ಧಕ್ಕೆ ತಂದಂತಾಗುತ್ತದೆ.

■ ನವೀನ್ ಹುಲಿಯೂರುದುರ್ಗ, ಸಾಮಾಜಿಕ ಕಾರ್ಯಕರ್ತ

"ಈಗ ಬೆಂಗಳೂರನ್ನು ನಗರವನ್ನು ವಿಭಜನೆ ಮಾಡುವುದು ಅಷ್ಟೊಂದು ಒಳ್ಳೆಯದಾಗುವುದಿಲ್ಲ ಎಂದೆನಿಸುತ್ತದೆ. ಯಾಕೆಂದರೆ ಎಲ್ಲಾ ಪ್ರದೇಶದ ಶಕ್ತಿಯನ್ನು ಒಟ್ಟುಗೂಡಿಸಿದರೆ ಅಭಿವೃದ್ಧಿಯಾಗುತ್ತದೆ. ಹಾಗಿರುವಾಗ ವಿಭಜನೆ ಮಾಡುವುದು ತೀರ ಒಳ್ಳೆಯ ಮಟ್ಟದಲ್ಲಿ ಒಳಿತಾಗಲು ಸಾಧ್ಯವಿಲ್ಲ.

■ ವಿದುಷಿ ರಂಜನೀ ಕೀರ್ತಿ, ನಿರೂಪಕಿ

ಸಚಿವರಿಂದ ಪರಿಹಾರ ಚೆಕ್ ವಿತರಣೆ

ಬೆಂಗಳೂರು: ನೌಕರರ ಕುಟುಂಬಸ್ಥರು ಒಂದು ಕೋಟಿ ರೂ.ಗಳನ್ನು ಸದುಪಯೋಗ ಪಡಿಸಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆ ಕಟ್ಟಿಕೊಳ್ಳಲು ಬಳಸಿ. ಬೇರೆ ಇತರೆ ಎಲ್ಲೂ ಹಣ ಪೋಲು ಮಾಡದಿರಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಸೇವೆಯಲ್ಲಿದ್ದ ಮೃತಪಟ್ಟ ನಾಲ್ವರು ನೌಕರರ ಅವಲಂಬಿತರಿಗೆ ತಲಾ ಒಂದು ಕೋಟಿ ರೂ. ಅಪಘಾತ ಪರಿಹಾರ ವಿಮೆಯ ಚೆಕ್ ವಿತರಿಸಿ, ನಿಗಮವು ಕಾರ್ಮಿಕರ ಕಲ್ಯಾಣಕ್ಕಾಗಿ ಹಾಗೂ ಪ್ರಯಾಣಿಕರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಮೃತರಾದವರ ಜೀವ ಅಮೂಲ್ಯವಾದದ್ದು, ಅದನ್ನು ಮರಳಿ ತರಲಾಗುವುದಿಲ್ಲ, ಆದರೆ, ಅವರ ಕುಟುಂಬದ ಆರ್ಥಿಕ ಸ್ವಾವಲಂಬನೆಗಾಗಿ ನಿಗಮವು ರೂಪಿಸಿರುವ ಯೋಜನೆ ದೂರದೃಷ್ಟಿ ಹೊಂದಿರುವುದಾಗಿ ಹೇಳಿದರು.

ನಿಗಮವು ಯಶಸ್ವಿಯಾಗಿ ಶಕ್ತಿ ಯೋಜನೆ ಅನುಷ್ಠಾನಿಸಲು ಮುಖ್ಯ ಪಾತ್ರ ವಹಿಸಿರುವ ನಿಗಮದ ಸಿಬ್ಬಂದಿ ಪಾತ್ರ ಅಭಿನಂದನೀಯ. ನಿಗಮದ ವಿದ್ಯಾಚೇತನ ವಿದ್ಯಾರ್ಥಿ ವೇತನ ಯೋಜನೆಯ ಮೊತ್ತ ಹೆಚ್ಚಿಸುವ ಕುರಿತು ಪರಿಶೀಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಿದರು.

ಈ ವೇಳೆ ಕೆಎಸ್ಆರ್‌ಟಿಸಿ ಅಧ್ಯಕ್ಷ ಶ್ರೀನಿವಾಸ್ ಗುಬ್ಬಿ, ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಕಾರ್ಮಿಕ ಸಂಘಟನೆ ಮುಖಂಡರಾದ ಅನಂತಸುಬ್ಬರಾವ್, ವಿಜಯಭಾಸ್ಕರ್, ರೇವಪ್ಪ, ಮಂಜುನಾಥ್, ಚಂದ್ರಶೇಖರ್, ನಾಗರಾಜು ಮುಂತಾದವರಿದ್ದರು.

ಪ್ರಜ್ವಲ್ ಲೈಂಗಿಕ ಪ್ರಕರಣ: ಎಸ್ಐಟಿಗೆ ದೂರು ನೀಡಿ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣವನ್ನು ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಹಾಗೂ ಮತ್ತೊಂದು ದೂರನ್ನು ಪರಿಗಣಿಸುವಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ಬುಧವಾರ ವಿಚಾರಣೆಗೊಳಪಡಿಸಿತು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಉಪಾಧ್ಯಕ್ಷ ಎಸ್.ಎಚ್.ಲಿಂಗೇಗೌಡ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾ. ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಈಗಾಗಲೇ ಪ್ರಕರಣದ ತನಿಖೆಗೆ ಸರ್ಕಾರ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಏನೇ ಮನವಿ ಇದ್ದರೂ ಎಸ್ಐಟಿ ಮುಂದೆ ತಿಳಿಸಿ ಪರಿಹಾರ ಪಡೆದುಕೊಳ್ಳಬಹುದು ಎಂದು ಪೀಠವು ನಿರ್ದೇಶನ ನೀಡಿದೆ.

ಪ್ರಕರಣದ ಹಿನ್ನೆಲೆ: ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಪ್ರಯತ್ನಿಸಲಾಗಿತ್ತು. ಈ ವೇಳೆ ಪೊಲೀಸರು, ಇದೇ ಪ್ರಕರಣ ಸಂಬಂಧ ಈಗಾಗಲೇ ದೂರು ದಾಖಲಾಗಿದೆ. ಮತ್ತೊಂದು ದೂರು ದಾಖಲಿಸಿಕೊಳ್ಳುವುದಿಲ್ಲ ಎಂದು ಹಿಂಬರಹ ಬರೆದುಕೊಟ್ಟಿದ್ದರು. ಆ ಹಿಂಬರಹ ರದ್ದುಪಡಿಸಿ ಎಫ್ಐಆರ್ ದಾಖಲಿಸಿಕೊಳ್ಳಲು ಪೊಲೀಸರಿಗೆ ನಿರ್ದೇಶನ ನೀಡಬೇಕು. ವಿಡಿಯೋ ಮಾಡಿರುವವರು ಮತ್ತು ವಿಡಿಯೋವನ್ನು ಹಂಚಿಕೆ ಮಾಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಸ್ವತಂತ್ರ ತನಿಖಾ ಸಂಸ್ಥೆಗಳಿಗೆ ತನಿಖೆಯನ್ನು ವಹಿಸಬೇಕು ಎಂದು ಅರ್ಜಿ ಸಲ್ಲಿಸಲಾಗಿತ್ತು.

ಮಹಿಳೆಯ ಬರ್ಬರ ಹತ್ಯೆ

ಬೆಂಗಳೂರು: ಮಹಿಳೆಯೊಬ್ಬರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ ಘಟನೆ ಮಂಗಳವಾರ ತಡರಾತ್ರಿ, ಹೈಗ್ರೌಂಡ್ಸ್ ಠಾಣಾ ವ್ಯಾಪ್ತಿಯ ವಿಂಡ್ಸರ್ ಮ್ಯಾನರ್ ಹೋಟೆಲ್ ಬಳಿ ನಡೆದಿದೆ.

ಸೋಮಿನಿ ಸತ್ಯಭಾಮಾ (46) ಕೊಲೆಯಾದ ಮಹಿಳೆ. ಸ್ಟಾಫ್ ನರ್ಸ್ ಆಗಿದ್ದ ಸತ್ಯಭಾಮಾ ಕೆಲಸ ಮುಗಿಸಿ ಪಾರ್ಕಿಂಗ್ ಸ್ಥಳದ ಬಳಿ ಬಂದಿದ್ದರು. ಈ ವೇಳೆ ಹಂತಕರು ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಿದ್ದಾರೆ. ಬಳಿಕ ಘಟನಾಸ್ಥಳದಿಂದ ಓಡಿಹೋಗಿದ್ದ ಹಂತಕರ ಪೈಕಿ ಮೂವರು ಚಾಮರಾಜಪೇಟೆ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾರೆ. ಮೂವರನ್ನು ಬಂಧಿಸಿರುವ ಚಾಮರಾಜಪೇಟೆ ಠಾಣಾ ಪೊಲೀಸರು, ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣಾ ಪೊಲೀಸರಿಗೆ ಒಪ್ಪಿಸಿದ್ದಾರೆ. ಆಸ್ತಿ ವ್ಯಾಜ್ಯದ ವಿಚಾರವಾಗಿ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ವಿದ್ಯಾರ್ಥಿಗಳ ಉದ್ಯೋಗ ಕೌಶಲ ಪ್ರಗತಿಗಿರಲಿ ಆದ್ಯತೆ

ಕೆಂಗೇರಿ: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡುವಂತೆ ಶಿಕ್ಷಣ ಸಂಸ್ಥೆಗಳು ಉದ್ಯೋಗ ಕೌಶಲ ತರಬೇತಿ ನೀಡಿದರೆ, ವಿವಿಧ ಕ್ಷೇತ್ರಗಳಲ್ಲಿ ಶೈಕ್ಷಣಿಕ ಪದವಿಗಳೊಂದಿಗೆ ವಿದ್ಯಾರ್ಥಿಗಳ ಉದ್ಯೋಗ ಮತ್ತು ಕೌಶಲ ಅಭಿವೃದ್ಧಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂದು ಕೆ.ಕೆ. ಸಮೂಹ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ.ರೋಹಿತ್ ಕೆ.ಸಿ. ಹೇಳಿದರು.

ಕೆ.ಕೆ. ಸಮೂಹ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ.ರೋಹಿತ್ ಹೇಳಿಕೆ

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಚನ್ನಸಂದ್ರದಲ್ಲಿರುವ ಕೆ.ಕೆ.ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಪದವಿ ವಿದ್ಯಾರ್ಥಿಗಳಲ್ಲಿ ಉದ್ಯೋಗ ವಿಕಾಸನ ಶಕ್ತಿಯ ಕೌಶಲ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿದರು.

ಭಾರತ ದೇಶವು ಶಕ್ತಿಯುತ ಆರ್ಥಿಕತೆಗೆ ವೇಗವಾಗಿ ಪರಿವರ್ತನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಒಳಪಡಿಸುವ ಪ್ರಾಯೋಗಿಕ ಕೌಶಲಗಳಿಗಿಂತ ಉತ್ತಮ ಅಂಕಗಳನ್ನು ಗಳಿಸಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣ ಆಗುವುದನ್ನೇ ಬಯಸುತ್ತಿದೆ.

ಆದ್ದರಿಂದ ಪದವಿಗಳನ್ನು ಪಡೆದು ತಮ್ಮ ಜೀವನದ ಅವಧಿ ವ್ಯರ್ಥ ಮಾಡುವ ಬದಲು ಶೈಕ್ಷಣಿಕ ಪ್ರಗತಿಗೆ ಒತ್ತು ನೀಡುವಂತೆ ಅವರಿಗೆ ಉದ್ಯೋಗ ಕೌಶಲ ತರಬೇತಿ ನೀಡಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಕೆ.ಕುಂಬಣ್ಣ, ಕಾರ್ಯದರ್ಶಿ ಕೆ.ಸುಮಲತಾ, ಕಾಲೇಜಿನ ಪ್ರಾಂಶುಪಾಲ ಡಾ.ರೋಹಿತ್ ಕೆ.ಸಿ., ಸಾಧನ ಚಂದ್ರಶೇಖರ್ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಅಂಚೆ ವಿಮೆ: ಅಭ್ಯರ್ಥಿಗಳ ನೇರ ಸಂದರ್ಶನ

ಬೆಂಗಳೂರು: ಅಂಚೆ ಜೀವವಿಮೆ ಹಾಗೂ ಗ್ರಾಮೀಣ ಜೀವವಿಮೆಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನೇಮಕಾತಿಗಾಗಿ ಜೂ.18 ರಂದು ಬೆಳಗ್ಗೆ 11ಕ್ಕೆ, ಮಹಾಲಕ್ಷ್ಮೀಪುರ ಪೊಲೀಸ್ ಠಾಣೆ ಬಳಿಯಿರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ.

ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯತ್‌ಗಳ ಮಾಜಿ ಸದಸ್ಯರು ಸೇರಿದಂತೆ ಇತರೆ ಅಭ್ಯರ್ಥಿಗಳು ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಈ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಆಯ್ಕೆಗೊಳ್ಳುವ ಅಭ್ಯರ್ಥಿಗಳು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲಿ 5000 ರೂ. ಭದ್ರತಾ ಠೇವಣಿ ಇಡಬೇಕು. ಅಭ್ಯರ್ಥಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಸೂಕ್ತ ಕಮಿಷನ್ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ 9886854974 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ರೇವ್ ಪಾರ್ಟಿ: ಹೇಮಾಗೆ ಜಾಮೀನು ಮಂಜೂರು

ಬೆಂಗಳೂರು: ರೇವ್ ಪಾರ್ಟಿ ಪ್ರಕರಣದಲ್ಲಿ ಜೈಲು ಸೇರಿದ್ದ ನಟಿ ಹೇಮಾ ಅವರಿಗೆ ಬೆಂಗಳೂರು ಗ್ರಾಮಾಂತರ ಎನ್‌ಡಿಪಿಎಸ್ ವಿಶೇಷ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಜೂ.14ರವರೆಗೆ ನಟಿ ಹೇಮಾ ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿತ್ತು.

ಜಾಮೀನು ಕೋರಿ ಹೇಮಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಹೇಮಾ ಯಾವುದೇ ಮಾದಕವಸ್ತು ವಶಕ್ಕೆ ಪಡೆದಿಲ್ಲ, ಹಲವು ದಿನಗಳ ನಂತರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ ಎಂದು ಹೇಮಾ ಪರ ವಕೀಲ ಮಹೇಶ್ ಕಿರಣ್ ಶೆಟ್ಟಿ ವಾದ ಮಾಡಿ, ನ್ಯಾಯಾಲಯಕ್ಕೆ ಮನದಟ್ಟು ಮಾಡಿದರು. ಬಳಿಕ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಎಚ್ಚರಿಕೆ ಮಕ್ಕಳ ದುಡಿಮೆ ಶಿಕ್ಷಾರ್ಹ ಅಪರಾಧ

ಬೆಂಗಳೂರು: ಮಕ್ಕಳು ಕಾರ್ಮಿಕರಾಗಿ ದುಡಿಯುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಇದರ ತಡೆಗೆ ಸರ್ಕಾರದೊಂದಿಗೆ ಸಾರ್ವಜನಿಕರೂ ಕೈ ಜೋಡಿಸಬೇಕು ಎಂದು ಕಾರ್ಮಿಕ ಸಚಿವ ಸಂತೋಷ್‌ಲಾಡ್ ಕರೆ ನೀಡಿದರು.

ಬಾಲ ಕಾರ್ಮಿಕ ವಿರೋಧಿ ದಿನದಂಗವಾಗಿ ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ಬಾಲ ಕಾರ್ಮಿಕ ನಿರ್ಮೂಲನ ಯೋಜನಾ ಸೊಸೈಟಿ ಹಾಗೂ ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನ ಸೊಸೈಟಿಯಿಂದ ನಗರದ ಎಂಜಿ ರಸ್ತೆಯ ಗಾಂಧಿ ಪ್ರತಿಮೆಯಿಂದ ಕೆ.ಆರ್ ಸರ್ಕಲ್‌ವರೆಗೆ ಹಮ್ಮಿಕೊಳ್ಳಲಾಗಿದ್ದ ಜಾಥಾಕ್ಕೆ ಅವರು ಚಾಲನೆ ನೀಡಿದರು.

ಬಾಲಕಾರ್ಮಿಕಪದ್ಧತಿಯಸಂಪೂರ್ಣನಿರ್ಮೂಲನೆಗೆ ನಮ್ಮ ಕಾರ್ಮಿಕ ಇಲಾಖೆ ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಬಾಲ ಕಾರ್ಮಿಕರ ಪತ್ತೆ ಹಾಗೂ ಅವರ ರಕ್ಷಣೆಗೆ ಇಲಾಖೆಯ ವತಿಯಿಂದ ಸಾಕಷ್ಟು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಮಕ್ಕಳಿಂದ ಒತ್ತಾಯವಾಗಿ ದುಡಿಸಿಕೊಂಡರೆ ಅವರ ಭವಿಷ್ಯಕ್ಕೆ ಪೆಟ್ಟು ಬೀಳುತ್ತದೆ. ಆ ನಿಟ್ಟಿನಲ್ಲಿ ಬಾಲ ಕಾರ್ಮಿಕರಾಗದಂತೆ ತಡೆಯಲು ಇಲಾಖೆ ಸದಾ ಬದ್ಧವಾಗಿದೆ ಎಂದರು.

ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ: ಮಕ್ಕಳನ್ನು ಕಾರ್ಮಿಕರಾಗಿ ದುಡಿಸಿಕೊಳ್ಳುವ ಹಾಗೆಯೇ ಮಕ್ಕಳಿಂದ ಭಿಕ್ಷಾಟನೆ ಸಹ ಅಪಾಯಕಾರಿ. ಪ್ರಸ್ತುತ ನಗರದಲ್ಲಿ ಇದು ಹೆಚ್ಚಾಗಿದೆ. ಆದ್ದರಿಂದ ಪೊಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಯೋಜನೆ ರೂಪಿಸಿ ಜಾರಿಗೊಳಿಸಿದಾಗ ಬಾಲ ಕಾರ್ಮಿಕ ಮತ್ತು ಮಕ್ಕಳಿಂದ ಭಿಕ್ಷಾಟನೆಯನ್ನು ತಡೆಯಬಹುದಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಅವರು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ ಪ್ರಮಾಣವಚನ ಬೋಧಿಸಿದರು. ಕಾರ್ಮಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಮುಂತಾದವರಿದ್ದರು.

ಕಿರು ಸುದ್ದಿ

ವೆಬ್‌ಸೈಟ್‌ನಲ್ಲಿ ಕೆಪಿಸಿಎಲ್ ಅಂತಿಮ ಫಲಿತಾಂಶ ಪ್ರಕಟ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿನ 622 ಖಾಲಿ ಹುದ್ದೆಗಳಿಗೆ ಸಂಬಂಧಿಸಿದಂತೆ, ಈ ಮೊದಲು ಹಮ್ಮಿಕೊಳ್ಳಲಾದ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕಳೆದ ಬಾರಿಯಂತೆಯೇ ಈ ಬಾರಿಯೂ ಪ್ರತಿ ತಪ್ಪು ಉತ್ತರಕ್ಕೆ 1/3ರಷ್ಟು ನಕಾರಾತ್ಮಕ ಅಂಕ ಕಡಿತಗೊಳಿಸಿ ಅಂತಿಮ ಅಂಕಪಟ್ಟಿ ಸಿದ್ಧಪಡಿಸುವಂತೆ ಕೆಪಿಸಿಎಲ್ ಸಂಸ್ಥೆ ಲಿಖಿತ ರೂಪದಲ್ಲಿ ಸೂಚಿಸಿತ್ತು. ಅದರಂತೆ ಹುದ್ದೆವಾರು ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂತಿಮ ಅಂಕಪಟ್ಟಿ ಸಿದ್ಧಪಡಿಸಲಾಗಿದೆ. ಇನ್ನು ಅಂತಿಮ ಅಂಕಪಟ್ಟಿಯನ್ನು ಕೆಪಿಸಿಎಲ್ ಸಂಸ್ಥೆಗೆ ಹಸ್ತಾಂತರಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ನೇರ ಫೋನ್-ಇನ್ ಕಾರ್ಯಕ್ರಮ ನಾಳೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯಿಂದ ಜೂ.14ರಂದು ಬೆಳಗ್ಗೆ 9.30ರಿಂದ 10.30ರವರೆಗೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್‌ರೊಂದಿಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವುದು, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಜಲಮಂಡಳಿ ಅಧ್ಯಕ್ಷರೊಂದಿಗೆ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಇದಕ್ಕಾಗಿ 080-22945119 ಮತ್ತು 080-22229639 ಈ ದೂರವಾಣಿ ಸಂಖ್ಯೆಗೆ ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್‌ಆರ್ ಸಂಖ್ಯೆ ತಿಳಿಸಿ ದೂರನ್ನು ನೀಡಬಹುದಾಗಿದೆ.

ಅರ್ಜಿ ಪರಿಶೀಲಿಸಿ ವಿಲೇವಾರಿ ಮಾಡಿ

ಬೆಂಗಳೂರು: ಕೈಗಾರಿಕಾ ಘಟಕಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಅನುಮತಿ ಕೋರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಕೆಯಾಗುವ ಎಲ್ಲ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರವಾಗಿ ವಿಲೇವಾರಿ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜೂ.7ರ ಅಂತ್ಯದವರೆಗೆ ಮಂಡಳಿಯಲ್ಲಿ ಮೂಲಸೌಕರ್ಯ, ಗಣಿ ಸೇರಿದಂತೆ ಕೈಗಾರಿಕಾ ಘಟಕ ಸ್ಥಾಪನೆ/ವಿಸ್ತರಣೆ ಸಂಬಂಧಿಸಿದಂತೆ (ಸಿಎಫ್ಇ) ಮತ್ತು ಘಟಕ ಸ್ಥಾಪನೆಯ ನಂತರ ಕಾರ್ಯಾಚರಣೆ ಮಾಡಲು ಅನುಮತಿ ಕೋರಿ ಬಂದಿರುವ (ಸಿಎಫ್ಒ) ಒಟ್ಟು 769 ಅರ್ಜಿಗಳು ಬಾಕಿಯಿದೆ. ಈ ಅರ್ಜಿಗಳೆಲ್ಲವನ್ನೂ ಸಭೆಯಲ್ಲಿ ಮಂಡಿಸಿ, ಅಗತ್ಯವಿರುವ ಅನುಸರಣೆಗಳ ಬಳಿಕ ತ್ವರಿತವಾಗಿ ಅನುಮತಿ ನೀಡಬೇಕು ಅಥವಾ ಅರ್ಜಿಗಳನ್ನು ತಿರಸ್ಕರಿಸಬೇಕು. ಸಿಎಫ್ಇ ಮತ್ತು ಸಿಎಫ್ಒ ಅರ್ಜಿಗಳನ್ನು ದೀರ್ಘಕಾಲದವರೆಗೆ ವಿಲೇವಾರಿ ಮಾಡದೆ ಬಾಕಿ ಉಳಿಸಿಕೊಂಡಿದ್ದರೆ ಸಂಬಂಧ ಪಟ್ಟ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

3 ದಿನಗಳಲ್ಲಿ ಪ್ರಮಾಣಪತ್ರ ನೀಡಲು ಆದೇಶ: ಸಿಎಫ್ಇ ಮತ್ತು ಸಿಎಫ್ಒ ಅರ್ಜಿಗಳಿಗೆ ಅನುಮತಿ ನೀಡುವ ಸಂಬಂಧ ನಡೆಸಲಾಗುವ ಸಭೆಯ ಬಳಿಕ ಅಂಗೀಕಾರಗೊಂಡ ಅರ್ಜಿಗಳಿಗೆ ಸಂಬಂಧಿಸಿದಂತೆ 3 ದಿನಗಳೊಳಗಾಗಿ ಪ್ರಮಾಣ ಪತ್ರವನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಅಪ್‌ಲೋಡ್ ಮಾಡಬೇಕು. ಜೊತೆಗೆ ಮಂಡಳಿಯಲ್ಲಿ ಪಾರದರ್ಶಕತೆ ನಿಭಾಯಿಸಬೇಕು ಎಂದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್ ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಬುಧವಾರ ಅಧಿಕಾರ ಸ್ವೀಕರಿಸಿದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಡಾ.ಕೆ.ಹರೀಶ್ ಕುಮಾರ್, ಶಿವಾನಂದ್ ಕಲ್ಕೆರೆ ಮುಂತಾದವರಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣ

ಉನ್ನತ ಮಟ್ಟದ ಸಮಿತಿ ರಚನೆಗೆ ಆಗ್ರಹ

ಬೆಂಗಳೂರು: ಕೆಲವು ತಿಂಗಳಿನಿಂದ ರಾಜ್ಯದಲ್ಲಿ ನಡೆದಿರುವ ಮಹಿಳೆಯರ ಮೇಲಿನ ದೌರ್ಜನ್ಯ, ಕಗ್ಗೊಲೆ ಪ್ರಕರಣಗಳ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಲು ಸರ್ಕಾರ ಮುಂದಾಗಬೇಕು ಎಂದು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಆಗ್ರಹಿಸಿದರು.

ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ವಿರೋಧಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಲವು ಸಂಘಟನೆಗಳಿಂದ ಆಯೋಜಿಸಿದ್ದ ಹಕ್ಕೊತ್ತಾಯ ಸಭೆಯಲ್ಲಿ ಮಾತನಾಡಿದ ಅವರು, ಗೆಳತಿಯರು ಸಂಬಂಧ ಮುಂದುವರೆಸಲು ನಿರಾಕರಿಸಿದ್ದಕ್ಕಾಗಿ ಯುವಕರು ಹತ್ಯೆ ನಡೆಸಿರುವ ಪ್ರಕರಣಗಳು, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನೊಬ್ಬ ನಗರದಲ್ಲಿ ಇತ್ತೀಚೆಗೆ ವಿದ್ಯಾರ್ಥಿನಿ ಪ್ರಬುದ್ಧಳ ಹತ್ಯೆ ಮಾಡಿದ ಪ್ರಕರಣ ಸೇರಿದಂತೆ ಪ್ರಜ್ವಲ್ ರೇವಣ್ಣನ ಪ್ರಕರಣದ ಹಿಂದೆ ನೂರಾರು ಮಹಿಳೆಯರ ಅಸಹಾಯಕತೆಯ, ಕಣ್ಣೀರಿನ ದುರಂತ ಕಥೆಗಳಿವೆ. ಎಳೆಯ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಗಳು, ತಲೆ ಕತ್ತರಿಸಿ, ಬಹಿರಂಗವಾಗಿ ಇರಿದು ಕೊಲ್ಲುವಂತಹ ಭೀಕರ ಕೃತ್ಯಗಳು ಮಿತಿಮೀರಿ ಬೆಳೆಯುತ್ತಿವೆ. ಆದ್ದರಿಂದ ಸರ್ಕಾರವು ಮಹಿಳೆಯರ ಮೇಲಿನ ದೌರ್ಜನ್ಯ, ಕಗ್ಗೊಲೆ ಪ್ರಕರಣಗಳ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಮಾತನಾಡಿ, ಹೆಣ್ಣುಮಕ್ಕಳು ಮತ್ತು ಮಕ್ಕಳ ಮೇಲಿನ ಅತ್ಯಾಚಾರಗಳ, ಆ್ಯಸಿಡ್ ದಾಳಿಗಳ ಎಲ್ಲ ಪ್ರಕರಣಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ನಿರ್ದಿಷ್ಟ ಕ್ರಮಗಳನ್ನು ಶಿಫಾರಸ್ಸು ಮಾಡಲು, ತಜ್ಞರು, ಕಾನೂನು ಪರಿಣತರು, ಸರ್ಕಾರದ ಪ್ರತಿನಿಧಿಗಳು ಮತ್ತು ಸಾಮಾಜಿಕ ಹೋರಾಟಗಾರರನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚನೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರಗತಿಯಲ್ಲಿ ಟೆಂಡರ್ ಪ್ರಕ್ರಿಯೆ | ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಯೋಜನೆ

ಮಹಿಳೆಯರಿಗಾಗಿ 100 ಶೌಚಾಲಯ ನಿರ್ಮಾಣ

ಸುದೀಪ್ ರಾಜ್ ಸುಳ್ಯ

ದಿಗಂತ ವಿಶೇಷ

ಬೆಂಗಳೂರು: ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಬಿಬಿಎಂಪಿ ಮಹಿಳೆಯರಿಗಾಗಿ ಶಿ ಶೌಚಾಲಯ (ಮಹಿಳಾ ಶೌಚಾಲಯ) ಹೊಸ ಯೋಜನೆಯಲ್ಲಿ ನಗರದಾದ್ಯಂತ 100ಕ್ಕೂ ಅಧಿಕ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಕಾರ್ಯ ಯೋಜನೆ ರೂಪಿಸಿದೆ. ಪಾಲಿಕೆಯ ಘನ ತ್ಯಾಜ್ಯ ನಿರ್ವಹಣೆ ಮಾಡುವ ಇಲಾಖೆಯು ಇದರ ಜವಾಬ್ದಾರಿ ವಹಿಸಿಕೊಂಡಿದೆ. ಈಗಾಗಲೇ ಸರ್ಕಾರ ಈ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಒಂದು ವರ್ಷಕ್ಕೂ ಮೊದಲೇ ಟೆಂಡರ್ ಕರೆದಿದ್ದರೂ ಅದಕ್ಕೆ ಪ್ರತಿಕ್ರಿಯೆ ಬಂದಿರಲಿಲ್ಲ. ಆದರೆ, ಈ ಬಾರಿಯ ಟೆಂಡರ್‌ಗೆ ಸಕಾರಾತ್ಮಕ ಸ್ಪಂದನೆ ದೊರೆತಿದೆ.

ಅತಿ ಹೆಚ್ಚು ಕಡೆ ಮಹಿಳೆಯರು ಉದ್ಯೋಗ ಮಾಡುವ ಸ್ಥಳಗಳಲ್ಲಿ, ಈ ಶೌಚಾಲಯಗಳ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಜನದಟ್ಟಣೆ ಇರುವ ಶಾಪಿಂಗ್ ಕಾಂಪ್ಲೆಕ್ಸ್‌ಗಳ ಬಳಿ, ಪೀಣ್ಯ, ಕೈಗಾರಿಕಾ ವಲಯ, ಎಂ.ಜಿ.ರಸ್ತೆ, ಇಲೆಕ್ಟ್ರಾನಿಕ್ ಸಿಟಿ ಸೇರಿದಂತೆ ಬಹುಬಳಕೆ ಇರುವ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣವಾಗಲಿದೆ. 100 ಶೌಚಾಲಯಗಳ ಪೈಕಿ ಕೆಲ ಶೌಚಾಲಯಗಳ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿದೆ.

ಈ ಶಿ ಶೌಚಾಲಯಗಳಲ್ಲಿ ಉತ್ತಮ ಗುಣಮಟ್ಟದ ವ್ಯವಸ್ಥೆಗಳನ್ನು ಅಳವಡಿಸುವ ಯೋಜನೆಯಿದ್ದು, ಅದರಲ್ಲಿ ಶಿಶುಪಾಲನಾ ಕೊಠಡಿ, ವಿಶ್ರಾಂತಿ ಕೊಠಡಿ ಹಾಗೂ ಬಟ್ಟೆ ಬದಲಾಯಿಸುವ ಕೊಠಡಿಯ ವ್ಯವಸ್ಥೆ ಇರಲಿದೆ. ಇದಲ್ಲದೇ ಸೆನ್ಸಾರ್ ತಂತ್ರಜ್ಞಾನ, ಚಾರ್ಜಿಂಗ್ ಪಾಯಿಂಟ್, ತುರ್ತು ಸಂದರ್ಭ ಬೇಕಾದ ಎಸ್ಒಎಸ್ ವ್ಯವಸ್ಥೆ ಕೂಡ ಈ ಶೌಚಾಲಯದಲ್ಲಿರಲಿದೆ.

"ಮಹಿಳೆಯರು ಶಿ ಶೌಚಾಲಯಗಳನ್ನು ಉಚಿತವಾಗಿ ಬಳಸಬಹುದಾಗಿದೆ. ಏಜೆನ್ಸಿಗಳಿಗೆ ಬಿಬಿಎಂಪಿ ವತಿಯಿಂದ ಬಾಡಿಗೆ ಆಧಾರದಲ್ಲಿ ಜಾಗ ನೀಡಲಾಗುತ್ತದೆ. ಮಂಜೂರು ಮಾಡಿದ ಜಾಗದಲ್ಲಿ ಏನಾದರೂ ತಕರಾರು ಇದ್ದಲ್ಲಿ ಶೌಚಾಲಯ ಕಟ್ಟಲು ಪರ್ಯಾಯ ವ್ಯವಸ್ಥೆ ಮಾಡಲಾಗುವುದು.

■ ಭೀಮೇಶ್ ನಾಯಕ್, ಕಾರ್ಯನಿರ್ವಾಹಕ ಎಂಜಿನಿಯರ್, ಘನ ತ್ಯಾಜ್ಯ ನಿರ್ವಹಣೆ ಇಲಾಖೆ

14 ವರ್ಷದ ಬಳಿಕ ಬಿಬಿಎಂಪಿ ತೆಕ್ಕೆಗೆ: ಪ್ರಸ್ತುತ ಈ ಶೌಚಾಲಯಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು ಅದಕ್ಕೆ ಬೇಕಾದ ಸ್ಥಳವನ್ನು ಪಾಲಿಕೆ ನೀಡಲಿದೆ. ನೀಡಿದ ಸ್ಥಳದಲ್ಲಿ ಏಜೆನ್ಸಿ ಪಡೆದುಕೊಂಡವರೇ ಕಟ್ಟಡವನ್ನು ನಮ್ಮ ಪ್ಲಾನ್ ಪ್ರಕಾರ ಕಟ್ಟಬೇಕು. ಕಟ್ಟಡದ ಗೋಡೆಗಳ ಮೇಲೆ ಜಾಹಿರಾತು ಪ್ರದರ್ಶನ ಮಾಡಿ ಅದರಿಂದ ಬರುವ ಆದಾಯದಿಂದ ಆ ಶೌಚಾಲಯವನ್ನು ಏಜೆನ್ಸಿಯವರೇ ನಿರ್ವಹಣೆ ಮಾಡಬೇಕು. ಮುಂದಿನ 14 ವರ್ಷಗಳ ಕಾಲ ಬಾಡಿಗೆ ಆಧಾರದಲ್ಲಿ ಇವು ಕಾರ್ಯಾಚರಿಸಲಿದ್ದು, ನಂತರ ಪಾಲಿಕೆ ವ್ಯಾಪ್ತಿಗೆ ಒಳಪಡಲಿವೆ.

ಸೂಪರ್ ಎಂಟಕ್ಕೆ ಆಸ್ಟ್ರೇಲಿಯಾ ಪ್ರವೇಶ

ಕ್ರಿಕೆಟ್ ಶಿಶು ನಮೀಬಿಯಾ ವಿರುದ್ಧ 9 ವಿಕೆಟ್ ಜಯ | ಸ್ಪಿನ್ನರ್ ಆ್ಯಡಂ ಜಂಪಾಗೆ 4 ವಿಕೆಟ್

ಆಂಟಿಗುವಾ: ಕ್ರಿಕೆಟ್ ಶಿಶು ನಮೀಬಿಯಾ ವಿರುದ್ಧ 9 ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿದ ಆಸ್ಟ್ರೇಲಿಯಾ ಸೂಪರ್ 8 ಪ್ರವೇಶಿಸಿದೆ.

ಇಲ್ಲಿನ ವಿವಿಯನ್ ರಿಚರ್ಡ್ಸನ್ ಮೈದಾನದಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನಮೀಬಿಯಾ ತಂಡ 17 ಓವರ್‌ಗಳಲ್ಲಿ 72ರನ್‌ಗಳಿಗೆ ಸರ್ವಪತನ ಕಂಡಿತು. ಆಸ್ಟ್ರೇಲಿಯಾ ಕ್ರಿಕೆಟ್ ತಂಡ 5.4 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 74 ರನ್ ಪೇರಿಸಿ ಸುಲಭ ಗೆಲುವು ಪಡೆಯಿತು. 73 ರನ್‌ಗಳ ಸುಲಭ ಗೆಲುವು ಪಡೆದ ಆಸ್ಟ್ರೇಲಿಯಾಕ್ಕೆ ಆರಂಭಿಕರಾದ ಡೇವಿಡ್ ವಾರ್ನರ್ ಮತ್ತು ಟ್ರಾವಿಸ್ ಹೆಡ್ ಮೊದಲ ವಿಕೆಟ್‌ಗೆ 21 ರನ್ ಸೇರಿಸಿದರು. 20 ರನ್‌ಗಳಿಸಿದ್ದ ವಾರ್ನರ್ ವೇಗಿ ವೀಸೆಗೆ ಬಲಿಯಾದರು. ಟ್ರಾವಿಸ್ ಹೆಡ್ ಅಜೇಯ 34, ಮಿಚೆಲ್ ಮಾರ್ಷ್ ಅಜೇಯ 18 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಇದಕ್ಕೂ ಮುನ್ನ ಮೊದಲು ಬ್ಯಾಟಿಂಗ್ ಮಾಡಿದ ನಮೀಬಿಯಾ ಸ್ಪಿನ್ನರ್ ಆಡಮ್ ಜಂಪಾ ಸ್ಪಿನ್ ದಾಳಿಗೆ ತತ್ತರಿಸಿತು. ಮೈಕಲ್ ವಾನ್ 10, ನಿಕೊಲಾಸ್ ಡಾವಿನ್ 2, ಜಾನ್ ಫ್ರೈಲಿಂಗ್ 1, ನಾಯಕ ಗೆರಾರ್ಡ್ ಎರಾಸ್ಮಸ್ ತಂಡದ ಪರ 36 ರನ್ ಹೊಡೆದು ಗರಿಷ್ಠ ಮೊತ್ತ ದಾಖಲಿಸಿದರು. ನಂತರ ಬಂದ ಬ್ಯಾಟರ್‌ಗಳು ವಿಫಲರಾಗಿ ಪೆವಿಲಿಯನ್ನತ್ತ ಹೆಜ್ಜೆ ಹಾಕಿದರು. ಜೆಜೆ ಸ್ಮಿತ್ 3, ಗ್ರೀನ್, ವೀಸೆ ತಲಾ ತಲಾ 1 ರನ್, ರೂಬೆನ್ 7, ಜಾಕ್ ಬ್ರಾಸೆಲ್ ಅಜೇಯ 2 ರನ್ ಗಳಿಸಿದರು. ಆಸೀಸ್ ಪರ ಆಡಾಮ್ ಜಂಪಾ 12ಕ್ಕೆ 4, ಹೇಜಲ್ವುಡ್ ಹಾಗೂ ಸ್ಟೋಯ್ನಿಸ್ ತಲಾ 2 ವಿಕೆಟ್, ಕಮಿನ್ಸ್ ಮತ್ತು ನೆಲ್ಲಿಸ್ ತಲಾ 1 ವಿಕೆಟ್ ಪಡೆದರು.

ಶ್ರೀಲಂಕಾ ಬಹುತೇಕ ಹೊರಕ್ಕೆ

ಲಾಡರ್ಹಿಲ್ (ಯುಎಸ್‌ಎ).ಜೂ.12 - ಶ್ರೀಲಂಕಾ ಕ್ರಿಕೆಟ್ ತಂಡ ಟಿ20 ವಿಶ್ವಕಪ್ ಟೂರ್ನಿಯಿಂದ ಬಹುತೇಕ ಹೊರಬಿದ್ದಿದೆ. ನೇಪಾಳ ವಿರುದ್ಧ ನಡೆಯಬೇಕಿದ್ದ ಟಿ20 ಪಂದ್ಯ ಮಳೆಯಿಂದಾಗಿ ಒಂದು ಎಸೆತವನ್ನು ಕಾಣದೇ ರದ್ದಾಗಿದೆ. ಲಂಕಾ ತಂಡಕ್ಕೆ ಈ ಕದನ ಮಾಡು ಇಲ್ಲವೇ ಮಡಿ ಪಂದ್ಯವಾಗಿತ್ತು. ಜೂ.16ರಂದು ಲಂಕಾ ತಂಡ ತನ್ನ ಕೊನೆಯ ಲೀಗ್ ಪಂದ್ಯವನ್ನು ನೆದರ್ಲ್ಯಾಂಡ್ಸ್ ತಂಡದ ವಿರುದ್ಧ ಆಡಲಿದೆ. ಡಿ ಗುಂಪಿನಲ್ಲಿ ಸ್ಥಾನ ಪಡೆದಿದ್ದ ಶ್ರೀಲಂಕಾ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ್ದು ಸಾಕಷ್ಟು ಸುಧಾರಿಸಿಕೊಳ್ಳಬೇಕಿದೆ. ಆಡಿದ್ದ ಮೂರು ಪಂದ್ಯಗಳಲ್ಲಿ ಲಂಕಾ 2 ಪಂದ್ಯಗಳನ್ನು ಸೋತು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿದೆ.

ಸ್ಕೋರ್ ವಿವರ

ನಮೀಬಿಯಾ 72/10 (17ಓವರ್)

ಮೈಕಲ್ ವಾನ್	ಸಿ ಮ್ಯಾಕ್ಸ್‌ವೆಲ್ ಬಿ ಹೇಜಲ್‌ವುಡ್	10
ಡಾವಿನ್	ಸಿ ಮ್ಯಾಕ್ಸ್‌ವೆಲ್ ಬಿ ಹೇಜಲ್‌ವುಡ್	2
ಫ್ರೈಲಿಂಕ್	ಸಿ ಮಾರ್ಷ್ ಬಿ ಕಮಿನ್ಸ್	1
ಎರಾಸ್ಮಸ್	ಸಿ ಮ್ಯಾಕ್ಸ್‌ವೆಲ್ ಬಿ ಸ್ಟೋಯ್ನಿಸ್	36
ಸ್ಮಿತ್	ಎಲ್‌ಬಿ ಬಿ ಎಲ್ಲಿಸ್	3
ಗ್ರೀನ್	ಎಲ್‌ಬಿ ಬಿ ಜಂಪಾ	1
ವೀಸೆ	ಸಿ ಹೇಜಲ್‌ವುಡ್ ಬಿ ಜಂಪಾ	1
ರೂಬೆನ್	ಸಿ ಮ್ಯಾಕ್ಸ್‌ವೆಲ್ ಬಿ ಜಂಪಾ	7
ಬೆರ್ನಾರ್ಡ್	ಬಿ ಜಂಪಾ	0
ಬ್ರಸ್ಸೆಲ್	ಅಜೇಯ	2
ಶಿಕೊಂಗೊ	ಸಿ ಡೇವಿಡ್ ಬಿ ಸ್ಟೋಯ್ನಿಸ್	0

ಇತರೆ : ಬೈಸ್ 4, ಎಲ್‌ಬಿ 1, ವೈಡ್ 4
ಒಟ್ಟು 9, ವಿಕೆಟ್ ಪತನ: 1-14, 2-15, 3-15, 4-18, 5-21, 6-31, 7-43, 8-43, 9-72, 10-72.

ಬೌಲಿಂಗ್

ಹೇಜಲ್‌ವುಡ್	4-0-18-2
ಸ್ಟೋಯ್ನಿಸ್	3-0-9-2
ಕಮಿನ್ಸ್	3-1-16-1
ಜಂಪಾ	4-0-12-4
ಎಲ್ಲಿಸ್	3-1-12-1

ಆಸ್ಟ್ರೇಲಿಯಾ 74/1 (5.4 ಓವರ್)

ವಾರ್ನರ್	ಸಿ ಟ್ರಂಪೆಲ್‌ಮನ್ ಬಿ ವೀಸೆ 20	
ಹೆಡ್	ಅಜೇಯ	34
ಮಾರ್ಷ್	ಅಜೇಯ	18

ಇತರೆ (ಎಲ್‌ಬಿ 1, ವೈಡ್ 1) ಒಟ್ಟು 2, ವಿಕೆಟ್ ಪತನ: 1-21

ಬೌಲಿಂಗ್

ರೂಬೆನ್	2-0-19-0
ವೀಸೆ	1-0-15-1
ಶಿಕೊಂಗೊ	1-0-19-0
ಎರಾಸ್ಮಸ್	1-0-6-0
ಬ್ರಾಸೆಲ್	0.4-0-14-0



ಮೋಸದ ಗೋಲು: ತನಿಖೆಗೆ ಆಗ್ರಹಿಸಿದ ಎಐಎಫ್‌ಎಫ್

ಹೊಸದಿಲ್ಲಿ: ವಿಶ್ವಕಪ್ ಕ್ವಾಲಿಫೈಯರ್ ಪಂದ್ಯದಲ್ಲಿ ಭಾರತ ವಿರುದ್ಧ ಮೋಸದಿಂದ ಗೋಲು ಹೊಡೆದ ಕತಾರ್ ವಿರುದ್ಧ ತನಿಖೆಯಾಗಬೇಕೆಂದು ಭಾರತ ಫುಟ್ಬಾಲ್ ಫೆಡರೇಶನ್ (ಎಐಎಫ್‌ಎಫ್) ದೂರು ನೀಡಿದೆ. ಅನ್ಯಾಯಕ್ಕೆ ನ್ಯಾಯ ಕೊಡಿ ಎಂದು ಹೇಳಿದೆ.

ಜಾಸ್ಸಿಮ್ ಬಿನ್ ಹಾಮದ್ ಮೈದಾನದಲ್ಲಿ ಭಾರತ ಮೋಸ ದಾಟಕ್ಕೆ ಬಲಿಯಾಯಿತು. ಕತಾರ್‌ಗೆ ಗೋಲು ನೀಡಿದ ದಕ್ಷಿಣ ಕೊರಿಯಾದ ರೆಫರಿ ಕಿಮ್ ವೂ ವಿರುದ್ಧ ಸರಿಯಾದ ತನಿಖೆಯಾಗಬೇಕೆಂದು ಎಐಎಫ್‌ಎಫ್ ಆಗ್ರಹಿಸಿದೆ. ಗೆಲುವು ಮತ್ತು ಸೋಲು ಪಂದ್ಯದ ಒಂದು ಭಾಗ. ನಾವು ಅದನ್ನು ಸ್ವೀಕರಿಸಿದ್ದೇವೆ. ಆದರೆ ಭಾರತ ವಿರುದ್ಧ ಎರಡು ಗೋಲುಗಳ ಪೈಕಿ ಒಂದು ಗೋಲಿನ ಬಗ್ಗೆ ನಾವು ಪ್ರಶ್ನಿಸುತ್ತಾ ಬಂದಿದ್ದೇವೆ. ಆದರೆ ಇದಕಿನ್ನು ಉತ್ತರ ಸಿಕ್ಕಿಲ್ಲ. ಫಿಫಾ ಕ್ವಾಲಿಫೈರ್‌ಗೆ ನಾವು ಪತ್ರ ಬರೆದಿದ್ದೇವೆ. ಎಎಫ್‌ಸಿ ರೆಫರಿಗಳ ಮುಖ್ಯಸ್ಥರು ಮತ್ತು ಪಂದ್ಯದ ಕಮೀಷನರ್‌ಗೆ ಲೋಪದ ಬಗ್ಗೆ ವಿವರಿಸಿದ್ದೇವೆ. ಸರಿಯಾದ ತನಿಖೆಗೆ ಆಗ್ರಹಿಸಿರುವುದಾಗಿ ತಿಳಿಸಿದ್ದಾರೆ. ಫಿಫಾದ ನಿಯಮದ ಪ್ರಕಾರ ಗೋಲ್‌ನ ಗೆರೆಯಿಂದ ಹೊರ ಹೋಗಿರುವುದರಿಂದಡೆಡ್‌ಚೆಂಡುಪರಿಗಣಿಸಲಾಗುತ್ತದೆ. ಇದನ್ನ ರೆಫರಿ ಗುರುತಿಸದೇ ಭಾರತಕ್ಕೆ ಅನ್ಯಾಯ ಮಾಡಿದ್ದಾರೆ.

ಕತಾರ್ ಮಾಡಿದ ಮೋಸ ಏನು?: ಏಷ್ಯನ್ ಚಾಂಪಿಯನ್ ಕತಾರ್ ಮಾಡಿದ ದ್ರೋಹದಿಂದಾಗಿ ಭಾರತ ಫುಟ್ಬಾಲ್ ತಂಡ 1-2 ಗೋಲುಗಳಿಂದ ಸೋಲು ಕಂಡಿದೆ. ಇದರೊಂದಿಗೆ ವಿಶ್ವಕಪ್ ಅರ್ಹತಾ ಟೂರ್ನಿಯಿಂದ ಹೊರ ಬಿದ್ದಿದೆ. 2ನೇ ಹಂತದ ನಿರ್ಣಾಯಕ ಪಂದ್ಯದಲ್ಲಿ ಮೊದಲ ಬಾರಿಗೆ 3ನೇ ಸುತ್ತಿಗೇರುವ ನಿರೀಕ್ಷೆಯಲ್ಲಿತ್ತು.

ಪಂದ್ಯದ 75ನೇ ನಿಮಿಷದಲ್ಲಿ ಕತಾರ್ ಮಾಡಿದ ಮೋಸ ಭಾರತಕ್ಕೆ ದೊಡ್ಡ ಆಘಾತ ನೀಡಿತು.

ಚೆಂಡುಗೋಲು ಪೆಟ್ಟಿಗೆಯ ಪಕ್ಕದಲ್ಲಿದ್ದ ಗೆರೆಯನ್ನು ದಾಟಿ ಹೊರಕ್ಕೆ ಹೋಗಿತ್ತು. ಆ ಕ್ಷಣ ಭಾರತದ ಗೋಲ್ ಕೀಪರ್ ಚೆಂಡು ಹೋರಹೋಗಿರುವುದನ್ನು ಕಂಡು ನಿಟ್ಟುಸಿರು ಬಿಟ್ಟರು ಆದರೆ ಕತಾರ್ ತಂಡದ ಅಲ್-ಹಸನ್ ಚೆಂಡನ್ನು ಒಳಕ್ಕೆ ಎಳೆದು ಗೋಲು ಪೆಟ್ಟಿಗೆಯ ಮುಂದಿದ್ದ ಯೂಸುಫ್ ಅಯೆಮ್‌ಗೆ ಪಾಸ್ ಮಾಡಿದರು. ಯೂಸುಫ್ ಗೋಲು ಹೊಡೆದು ಸಂಭ್ರಮಿಸಿದರು. ಭಾರತೀಯ ಆಟಗಾರರು ಇದಕ್ಕೆ ಆಕ್ಷೇಪಿಸಿ ಪ್ರತಿಭಟಿಸಿದರು. ಆದರೆ ರೆಫರಿ ಕೇಳಲಿಲ್ಲ. ಈ ಘಟನೆ ಭಾರತೀಯ ಆಟಗಾರರಿಗೆ ಅರಗಿಸಿಕೊಳ್ಳಲಾಗಲಿಲ್ಲ. 85ನೇ ನಿಮಿಷದಲ್ಲಿ ಕತಾರ್ ಮತ್ತೊಂದು ಗೋಲು ಹೊಡೆದು ಅಂತರವನ್ನು ಹೆಚ್ಚಿಸಿಕೊಂಡಿತು.

ಈ ಸೋಲಿನೊಂದಿಗೆ ಭಾರತ 2027ರ ಎಎಫ್‌ಸಿ ಏಷ್ಯನ್ ಕಪ್‌ಗೆ ನೇರ ಪಡೆಯುವಲ್ಲಿ ವಿಫಲವಾಯಿತು.

ನ್ಯಾಯ ಕೊಡಿ ಎಂದ ಭಾರತ ಫುಟ್ಬಾಲ್ ಸಂಸ್ಥೆ

ನ್ಯೂಜಿಲ್ಯಾಂಡ್‌ಗೆ ವಿಂಡೀಸ್ ಎದುರಾಳಿ

ತಾರೌಬಾ: ಟೂರ್ನಿಯಿಂದಲೇ ಹೊರಬೀಳುವ ಭೀತಿಯಲ್ಲಿರುವ ನ್ಯೂಜಿಲ್ಯಾಂಡ್ ಕ್ರಿಕೆಟ್ ತಂಡ ಇಂದು ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ. ಈ ಬಾರಿಯ ಟಿ20 ವಿಶ್ವಕಪ್ ನ್ಯೂಜಿಲ್ಯಾಂಡ್ ಕಳಪೆ ಆಟದ ಜತೆಗೆ ಅದೃಷ್ಟವು ಕೈಕೊಟ್ಟಿದೆ. ಮೊದಲ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ 84 ರನ್‌ಗಳ ಅಂತರದಿಂದ ಸೋತಿದ್ದು ದೊಡ್ಡ ಹಿನ್ನಡೆ ನೀಡಿತು. ಎರಡನೆ ಪಂದ್ಯ ಮಳೆಗೆ ಬಲಿಯಾಗಿದ್ದರಿಂದ ಅಂಕವನ್ನು ಹಂಚಿಕೊಳ್ಳಬೇಕಾಯಿತು. ಇಂದು ವೆಸ್ಟ್ ಇಂಡೀಸ್ ವಿರುದ್ಧ ಸೋತರೆ ಟೂರ್ನಿ ಯಿಂದ ಕೇನ್ ಪಡೆ ಹೊರ ಬೀಳಲಿದೆ. ಇನ್ನು ವೆಸ್ಟ್ ಇಂಡೀಸ್ ತಂಡ ಕೂಡ ಮೊದಲ ಪಂದ್ಯದಲ್ಲಿ ಪಪುವಾ ನ್ಯೂ ಗಿನಿ ವಿರುದ್ಧ ಕಠಿಣ ಗೆಲುವು ಸಾಧಿಸಿದೆ. ನಂತರ ಉಗಾಂಡ ವಿರುದ್ಧ 134 ರನ್‌ಗಳ ಗೆಲುವು ಸಾಧಿಸಿತು. ಇಂದು ನ್ಯೂಜಿಲೆಂಡ್ ತಂಡವನ್ನು ಮಣಿಸಿದರೆ ಸೂಪರ್ 8ಕ್ಕೆ ಪ್ರವೇಶ ಪಡೆಯಲಿದೆ. ನ್ಯೂಜಿಲೆಂಡ್ ತಂಡದಿಂದ ವೆಸ್ಟ್ ಇಂಡೀಸ್ ಕಠಿಣ ಸವಾಲು ಎದುರಿಸಲಿದೆ. ವೆಸ್ಟ್‌ಇಂಡೀಸ್ ಮತ್ತು ನ್ಯೂಜಿಲೆಂಡ್ ತಂಡಗಳು ಇದುವರೆಗೂ 19 ಬಾರಿ ಟಿ20 ಆವೃತ್ತಿಯಲ್ಲಿ ಮುಖಾಮುಖಿಯಾಗಿವೆ. ಇದರಲಿ 6 ಬಾರಿ ವೆಸ್ಟ್‌ಇಂಡೀಸ್ ಗೆದ್ದರೆ ನ್ಯೂಜಿಲೆಂಡ್ 11 ಬಾರಿ ಗೆದ್ದಿದೆ. 2 ಬರಿ ಫಲಿತಾಂಶ ರಹಿತವಾಗಿದೆ.

ಇಂದು ಬಾಂಗ್ಲಾದೇಶಕ್ಕೆ ನೆದರ್‌ಲ್ಯಾಂಡ್ಸ್ ಸವಾಲು

ಕಿಂಗ್ಸ್‌ಟೌನ್: ಮತ್ತೊಂದು ಕುತೂಹಲಕಾರಿ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ನೆದರ್‌ಲ್ಯಾಂಡ್ಸ್ ತಂಡ ಸೆಣಸಲಿದೆ. ಇಲ್ಲಿನ ಅರ್ನೋಸ್ ಮೈದಾನದಲ್ಲಿ ನಡೆಯಲಿರುವ ಡಿ ಗುಂಪಿನ ವಿಶ್ವಕಪ್‌ನಲ್ಲಿ ನೆದರ್‌ಲ್ಯಾಂಡ್ಸ್ ತಂಡ ಇಂದು ಅಗ್ನಿ ಪರೀಕ್ಷೆ ಎದುರಿಸಲಿದೆ. ನೆದರ್‌ಲ್ಯಾಂಡ್ಸ್ ಈ ಟೂರ್ನಿಯಲ್ಲಿ ನೇಪಾಳ ತಂಡವನ್ನು ಮಣಿಸಿತು. ನಂತರ ದಕ್ಷಿಣ ಆಫ್ರಿಕಾ ವಿರುದ್ಧ ಗೆಲುವಿನ ಸನಿಹಕ್ಕೆ ಸಾಗಿ ಸೋಲು ಕಂಡಿತು. ಬ್ಯಾಟಿಂಗ್ ಸಮಸ್ಯೆ ತಂಡದ ಸೋಲಿಗೆ ಕಾರಣವಾಗುತ್ತಿದೆ. ಬಾಂಗ್ಲಾದೇಶ ಮತ್ತು ನೆದರ್‌ಲ್ಯಾಂಡ್ಸ್ ತಂಡಗಳು ಟಿ20 ಆವೃತ್ತಿಯಲ್ಲಿ ಇದುವರೆಗೂ 4 ಬಾರಿ ಮುಖಾಮುಖಿಯಾಗಿವೆ. ಈ ನಾಲ್ಕು ಮುಖಾಮುಖಿಯಲ್ಲೂ ಬಾಂಗ್ಲಾದೇಶ ಗೆದ್ದಿದೆ. ಹೀಗಾಗಿ ಇಂದಿನ ಪಂದ್ಯದಲ್ಲೂ ಬಾಂಗ್ಲಾ ಗೆಲ್ಲುವ ನೆಚ್ಚಿನ ತಂಡವಾಗಿದೆ. ಬಾಂಗ್ಲಾ ತಂಡಕ್ಕೂ ಬ್ಯಾಟಿಂಗ್ ಸಮಸ್ಯೆ ಇದೆ. ಬಾಂಗ್ಲಾ ಪರ ತೌಹಿದ ಹೃದಯ್, ಮೊಹ್ಮದ್‌ಉಲ್ಲಾ, ತನ್ಜಿಮ್ ಹಸನ್ ಶ್ಯಾಕಿನ್ ಅಹ್ಮದ್ ಮತ್ತು ಮುಸ್ತಾಫಿಜುರ್ ತಂಡದ ತಾರಾ ಆಟಗಾರರಾಗಿದ್ದಾರೆ.

ಕಿರು ಸುದ್ದಿ

ಸಾಧಾರಣ ಮೊತ್ತದ ಗುರಿ ನೀಡಿದ ಅಮೆರಿಕ

ನ್ಯೂಯಾರ್ಕ್: ಎಡಗೈ ವೇಗಿ ಅರ್ಷದೀಪ್ ಅವರ ಮಾರಕ ದಾಳಿಗೆ ತತ್ತರಿಸಿದ ಅಮೆರಿಕ ತಂಡ ಭಾರತಕ್ಕೆ 111 ರನ್‌ಗಳ ಗುರಿ ನೀಡಿದೆ. ಇಲ್ಲಿನ ನಸ್ಸೌ ಕೌಂಟಿ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಇಳಿಸಲ್ಪಟ್ಟ ಯುಎಸ್‌ಎ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 110 ರನ್ ಗಳಿಸಿದೆ. ಅಮೆರಿಕ ಪರ ಸ್ಟೀವನ್ ಟೇಲರ್ ಅವರ 24 ರನ್ ಮತ್ತು ನಿತೀಶ್ ಕುಮಾರ್ ಅವರ 27 ರನ್‌ಗಳ ನೆರವಿನಿಂದ ಯುಎಸ್‌ಎ ತಂಡದ ಬ್ಯಾಟಿಂಗ್ ಇನ್ನಿಂಗ್ಸ್ ಆರಂಭಿಸಿದ ಶಯಾನ್ ಜಹಾಂಗೀರ್ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಅರ್ಷ್‌ದೀಪ್ ಸಿಂಗ್ ಬೌಲಿಂಗ್‌ನಲ್ಲಿ ಎಲ್‌ಬಿ ಆಗಿ ಔಟಾದರು. ನಂತರ ಬಂದ ಆಂಡ್ರೀಸ್ ಗೌಸ್ ಕೇವಲ 2 ರನ್ ಗಳಿಸಿ ಅದೇ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಹಂಗಾಮಿ ನಾಯಕ ಆರೋನ್ ಜೋನ್ಸ್ 22 ಎಸೆತಗಳಲ್ಲಿ 11 ರನ್ ಗಳಿಸಿ ಪೆವಿಲಿಯನ್ ಸೇರಿದರು. ಆ ಬಳಿಕ ಆರಂಭಿಕ ಬ್ಯಾಟರ್ ಸ್ಟೀವನ್ ಟೇಲರ್ 30 ಎಸೆತಗಳಲ್ಲಿ 2 ಸಿಕ್ಸರ್‌ಗಳ ಮೂಲಕ 24 ರನ್ ಗಳಿಸಿ ಔಟಾದರು. ಕೊನೆಯಲ್ಲಿ ಶಾಡ್ಲಿ ವ್ಯಾನ್ ಶಾಲ್ಕ್ವಿಕ್ 10 ರನ್, ಜಸ್ದೀಪ್ ಸಿಂಗ್ 2 ರನ್ ಗಳಿಸಿ ಯುಎಸ್‌ಎ ತಂಡದ ಮೊತ್ತವನ್ನು 110ರ ಗಡಿ ಮುಟ್ಟಿಸಿದರು. ಬೌಲಿಂಗ್‌ನಲ್ಲಿ ಭಾರತ ತಂಡದ ಪರ ಅರ್ಷ್‌ದೀಪ್ ಸಿಂಗ್ 4 ಓವರ್‌ಗಳಲ್ಲಿ 9 ರನ್ ನೀಡಿ 4 ವಿಕೆಟ್ ಕಬಳಿಸಿದರೆ, ಹಾರ್ದಿಕ್ ಪಾಂಡ್ಯ 4 ಓವರ್‌ಗಳಲ್ಲಿ 14 ರನ್ ನೀಡಿ 2 ವಿಕೆಟ್ ಪಡೆದರು. ಉಳಿದಂತೆ ಅಕ್ಷರ್ ಪಟೇಲ್ 3 ಓವರ್‌ಗಳಲ್ಲಿ 24 ರನ್ ನೀಡಿ 1 ವಿಕೆಟ್ ತಮ್ಮದಾಗಿಸಿಕೊಂಡರು.

ಟಿ20 ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಭಾರತ

ದುಬೈ: ಐಸಿಸಿ ಇತ್ತೀಚಿನ ಟಿ20 ಅಂತರಾಷ್ಟ್ರೀಯ ತಂಡದ ಶ್ರೇಯಾಂಕವನ್ನು ಬುಧವಾರ ಅಂದರೆ ಇಂದು ಬಿಡುಗಡೆ ಮಾಡಿದೆ. ಈ ಶ್ರೇಯಾಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಭಾರತ ತಂಡದ ಪ್ರಾಬಲ್ಯ ಮುಂದುವರಿದಿದೆ. ಆದರೆ 2024ರ ಟಿ20 ವಿಶ್ವಕಪ್‌ನಲ್ಲಿ ಸತತ ಎರಡು ಸೋಲುಗಳನ್ನು ಅನುಭವಿಸಿರುವ ಪಾಕಿಸ್ತಾನ ತಂಡ ಶ್ರೇಯಾಂಕ ಪಟ್ಟಿಯಲ್ಲೂ ಪಾತಳಕ್ಕೆ ಕುಸಿದಿದೆ. 2024ರ ಟಿ20 ವಿಶ್ವಕಪ್‌ನಲ್ಲಿ ಈಗಾಗಲೇ 24 ಪಂದ್ಯಗಳು ಮುಗಿದಿವೆ. ಇದರರ್ಥ ಮಿನಿ ವಿಶ್ವಸಮರ ತನ್ನ ಅರ್ಧಪಯಣವನ್ನು ಮುಗಿಸುವ ಸನಿಹದಲ್ಲಿದೆ. ಈ ನಡುವೆ ಐಸಿಸಿ ನೂತನ ಟಿ20 ತಂಡಗಳ ರ‍್ಯಾಂಕಿಂಗ್ ಪ್ರಕಟಿಸಿದ್ದು, ಟಿ20 ವಿಶ್ವಕಪ್‌ನಲ್ಲಿ ತಂಡಗಳು ನೀಡಿರುವ ಪ್ರದರ್ಶನ ರ‍್ಯಾಂಕಿಂಗ್ ಮೇಲೆ ಭಾರಿ ಪರಿಣಾಮ ಬೀರಿವೆ. ಐಸಿಸಿ ಇತ್ತೀಚಿನ ಟಿ20 ಅಂತರಾಷ್ಟ್ರೀಯ ತಂಡದ ಶ್ರೇಯಾಂಕವನ್ನು ಬುಧವಾರ ಅಂದರೆ ಇಂದು ಬಿಡುಗಡೆ ಮಾಡಿದೆ. ಈ ಶ್ರೇಯಾಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಭಾರತ ತಂಡದ ಪ್ರಾಬಲ್ಯ ಮುಂದುವರಿದಿದೆ. ಆದರೆ 2024ರ ಟಿ20 ವಿಶ್ವಕಪ್‌ನಲ್ಲಿ ಸತತ ಎರಡು ಸೋಲುಗಳನ್ನು ಅನುಭವಿಸಿರುವ ಪಾಕಿಸ್ತಾನ ತಂಡ ಶ್ರೇಯಾಂಕ ಪಟ್ಟಿಯಲ್ಲೂ ಪಾತಳಕ್ಕೆ ಕುಸಿದಿದೆ. ನೂತನ ಅಂತಾರಾಷ್ಟ್ರೀಯ ಟಿ20 ತಂಡಗಳ ಶ್ರೇಯಾಂಕದ ಪಟ್ಟಿಯಲ್ಲಿ 241 ರೇಟಿಂಗ್ ಅಂಕಗಳನ್ನು ಹೊಂದಿರುವ ಪಾಕಿಸ್ತಾನ ಪ್ರಸ್ತುತ ಏಳನೇ ಸ್ಥಾನಕ್ಕೆ ಕುಸಿದಿದೆ. ಇದಲ್ಲದೆ ಸತತ ಎರಡು ಪಂದ್ಯಗಳನ್ನು ಸೋತಿರುವ ಪಾಕ್ ಪಡೆ ಲೀಗ್ ಹಂತದಲ್ಲೇ ತನ್ನ ಪ್ರಯಾಣವನ್ನು ಮುಗಿಸುವ ಆತಂಕದಲ್ಲಿದೆ.

ದಕ್ಷಿಣ ಭಾರತದ ಖೇಲೋ ಇಂಡಿಯಾ ಮಹಿಳಾ ವುಶು | ಕರ್ನಾಟಕಕ್ಕೆ 6 ಬೆಳ್ಳಿ, 13 ಕಂಚು

ಏಳು ಚಿನ್ನ ಗೆದ್ದು ಪ್ರಾಬಲ್ಯ ಮೆರೆದ ತಮಿಳುನಾಡು

ಬಾಗಲಕೋಟೆ: ನಗರದ ಬಿ.ವ್ವಿ.ವ್ವಿ.ಸಂಘ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ವುಶುಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ದಕ್ಷಿಣ ಭಾರತದ ಖೇಲೋ ಜ್ಯೂನಿಯರ್ ಮತ್ತು ಸಿನಿಯರ್ ಮಹಿಳಾ ಕ್ರೀಡಾಕೂಟ ಬುಧವಾರ ಮುಂದುವರಿದಿದ್ದು, ತಮಿಳುನಾಡು ರಾಜ್ಯದ ಕ್ರೀಡಾಪಟುಗಳು ಏಳು ಚಿನ್ನ ಪಡೆದು ಉತ್ತಮ ಸಾಧನೆ ಮಾಡುತ್ತಿದ್ದಾರೆ. ದಕ್ಷಿಣ ಭಾರತದ ಖೇಲೋ ಇಂಡಿಯಾ ಸಿನಿಯರ್ ಹಾಗೂ ಜ್ಯೂನಿಯರ್ ವಿಭಾಗದಲ್ಲಿ ತಮಿಳುನಾಡು ಕ್ರೀಡಾಪಟುಗಳು 7 ಚಿನ್ನ, ಓಡಿಸ್ಸಾ 3ಚಿನ್ನ, ಕೇರಳ 3ಚಿನ್ನ, ತೆಲಂಗಾಣ 1 ಚಿನ್ನ ಪಡೆದರೆ, ಕರ್ನಾಟಕ 6 ಬೆಳ್ಳಿ 13 ಕಂಚು ಪಡೆದು ಮುನ್ನಡೆ ಸಾಧಿಸಿದ್ದು ಇಂದಿನ ಪಂದ್ಯಾವಳಿಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು , ಓಡಿಸ್ಸಾ 3ನೇ ಸ್ಥಾನದಲ್ಲಿ ಮುನ್ನಡೆ ಪಡೆದುಕೊಂಡಿದೆ.

- ಸಿನಿಯರ್ ವಿಭಾಗ

ಟಾಂಗ್‌ಕೌನ್ ವಿಭಾಗ : ಕೌಶಿಕಾ ರೌತ್ರೀ (ಓಡಿಸ್ಸಾ ಚಿನ್ನ), ಸಂಜನಾ ಹಂಚಿನಮನಿ (ಕರ್ನಾಟಕ ಬೆಳ್ಳಿ), ರೇಣುಶ್ರೀ ನಂದಿನಿ (ಕರ್ನಾಟಕ)ಹಾಗೂ ಪ್ರತಿಕ್ಷಾ ಹಿರೇಮಠ(ಕರ್ನಾಟಕ ಕಂಚು).

ನಾಂಕೌನ್ ವಿಭಾಗದಲ್ಲಿ: ಗೋಪಿಕಾ ಪಿ.ಪಿ.,(ಕೇರಳ ಚಿನ್ನ), ಕೊಟ್ಟಳ ಮೂಜಿತಾಶ್ರುತಿ (ಆಂಧ್ರಪ್ರದೇಶ ಬೆಳ್ಳಿ), ಒಡಲಕೊಂಡ ಭಾರತಿ (ತೆಲಂಗಾಣ) ಹಾಗೂ ಗೌರಿ ಹಿರೇಮಠ (ಕರ್ನಾಟಕ ಕಂಚು).

ತೈಜಿಕೌನ್ ವಿಭಾಗ : ನಿರಂಜನಾ ಪಿ (ಕೇರಳ ಚಿನ್ನ), ಪಂಚಮಿ ಸಿಂಗ್ (ಓಡಿಸ್ಸಾ ಬೆಳ್ಳಿ), ರಾಣಿ ಲಾಯದಗುಂದಿ (ಕರ್ನಾಟಕ) ಹಾಗೂ ಒರಿಗೆಲಾ ಅನಿತಾ(ತೆಲಂಗಾಣ ಕಂಚು).

ಬಾಗುವಾರ್‌ಘೂಂಗ್ ವಿಭಾಗ: ಜ್ಯೋತ್ಸ್ನಾ ರಾಣಿ ಜೆನಾ (ಓಡಿಸ್ಸಾ ಚಿನ್ನ), ಎಸ್.ಸುಮಿತ್ರೀ (ತಮಿಳನಾಡು ಬೆಳ್ಳಿ), ಪವಿತ್ರಾ ಭೂತಾಳಿ (ಕರ್ನಾಟಕ) ಹಾಗೂ ಜತಿಕಾಪ್ರೇಮ ಪಿ.ಕೆ(ಕೇರಳ ಕಂಚು).

ಜಿಯಾನ್ಸು ವಿಭಾಗ: ಜ್ಯೋತ್ಸ್ನಾ ರಾಣಿ ಮುದುಳಿ (ಓಡಿಸ್ಸಾ ಚಿನ್ನ), ಸೌಜನ್ಯ ಲಾಯದಗುಂದಿ (ಕರ್ನಾಟಕ ಬೆಳ್ಳಿ), ರುಕ್ಮಿಣಿ ಮುರಕಾಟೆಟ್ಟಿ (ಕರ್ನಾಟಕ) ಹಾಗೂ ಲೋಲಮ ರಾಜಶ್ರೀ(ತೆಲಂಗಾಣ ಕಂಚು).

ನಂದಾವ್ಲೋ ವಿಭಾಗ: ಮೋಡುಕಂಟಿ ಪವಿತ್ರಾ ಚರಿ, (ತೆಲಂಗಾಣ ಚಿನ್ನ), ತೇಜಶ್ವಿನಿ ಹೊಟ್ಟಿ (ಕರ್ನಾಟಕ ಬೆಳ್ಳಿ), ಅಂಕಿತಾ ಕುಲಕರ್ಣಿ (ಕರ್ನಾಟಕ)ಹಾಗೂ ಅನುಷಾ ಬಾರಿಕ್ (ಓಡಿಸ್ಸಾ ಕಂಚು). **ತೈಜಿಜಿಯನ್ ವಿಭಾಗ:** ಒಡೆಪಲ್ಲೀ ನವೀನಾ (ತೆಲಂಗಾಣ ಚಿನ್ನ),ಅಕ್ಷತಾ ಪಾಟೀಲ (ಕರ್ನಾಟಕ ಬೆಳ್ಳಿ), ತನ್ಯ ಶ್ರೀವಾಸ್ತವ (ಓಡಿಸ್ಸಾ) ಹಾಗೂ ಅನುಪಮ ಮೇಲಿನಮನಿ (ಕರ್ನಾಟಕ ಕಂಚು).

ಕಿಯಾಂಗ್ಸು ವಿಭಾಗ: ಪಿ.ಎ.ಶ್ರುೀಯಾ (ತಮಿಳನಾಡು ಚಿನ್ನ), ಸಹನಾ ಕೊಣ್ಣೂರ (ಕರ್ನಾಟಕ ಬೆಳ್ಳಿ),ಮಲ್ಲರಮ್ ಕವಿತಾ (ತೆಲಂಗಾಣ) ಹಾಗೂ ರೀತಾ ಸೆಥಿ (ಓಡಿಸ್ಸಾ ಕಂಚು).

- ಜ್ಯೂನಿಯರ್ ವಿಭಾಗದಲ್ಲಿ

ಟಾಂಗ್‌ಕೌನ್ ವಿಭಾಗ: ಡಿ.ಬಾಲಹರ್ಷಿಣಿ (ತಮಿಳನಾಡು ಚಿನ್ನ), ಗೌರಿ ನಂದನ ಎಸ್.ಪಿ(ಕೇರಳ ಬೆಳ್ಳಿ), ಶ್ರೀನಂದಾ ಎಸ್ ,(ಕೇರಳ) ಹಾಗೂ ದಿವ್ಯಕಾಂತಿ ಓರಂ (ತಮಿಳನಾಡು ಕಂಚು).

ಜಿಯಾನ್ಸು ವಿಭಾಗ: ಲಕ್ಷ್ಮೀಪ್ರಭಾ ಎಸ್(ತಮಿಳನಾಡು ಚಿನ್ನ), ಪಾರಿಯಾ ಹಿಸಾನಂ (ತೆಲಂಗಾಣ ಬೆಳ್ಳಿ), ಎಸ್.ಇಸ್ಕಿತಾ (ತಮಿಳನಾಡು) ಹಾಗೂ ಮಮಲಿ ಜೆನಾ (ಓಡಿಸ್ಸಾ ಕಂಚು).

ಕಿಯಾಂಗ್ಸು ವಿಭಾಗ: ಮಿಸ್ಬಾ ಫಾಥಿಮಾ ಎ.ಆರ್ (ತಮಿಳನಾಡು ಚಿನ್ನ), ಖುಷಿ ವರ್ಮಾ (ಕರ್ನಾಟಕ ಬೆಳ್ಳಿ), ಜಿ.ಪೂಜಿತಾ (ತೆಲಂಗಾಣ) ಹಾಗೂ ಈಶ್ವರಿ ಬಳಗಿ (ಕರ್ನಾಟಕ ಕಂಚು).

ನಾಂಕೌನ್ ವಿಭಾಗ: ಶ್ರೀಲಿನಾ ಎಮ್ (ತಮಿಳನಾಡು ಚಿನ್ನ), ನುಪುರ ಪಟ್ನಾಯಿಕ್ (ಓಡಿಸ್ಸಾ ಬೆಳ್ಳಿ), ಅಪರ್ಣಾ ಎ (ಕೇರಳ) ಹಾಗೂ ಥರಿನಿತಾ ಡಿ (ತಮಿಳನಾಡು ಕಂಚು).

ನಂದಾವ್ಲೋ ವಿಭಾಗ: ವೇಧಾಶ್ರುತಿ ಎಸ್ (ತಮಿಳನಾಡು ಚಿನ್ನ), ಐಶಾ ಎನ್ (ಕೇರಳ ಬೆಳ್ಳಿ), ನಿಕ್ಷೀತಾ ವಿ.ಎಸ್(ತಮಿಳನಾಡು) ಹಾಗೂ ಸುಹಾಸಿನಿ ರಜಪೂತ(ಕರ್ನಾಟಕ ಕಂಚು).

ತೈಜಿಕೌನ್ ವಿಭಾಗ: ನೇಹಾ ಸೌಪಾಯಿ (ಕೇರಳ ಚಿನ್ನ), ಹರಿನಾ ಬಿ (ತಮಿಳನಾಡು ಬೆಳ್ಳಿ), ನಂದಿತಾ ಗೌಡರ (ಕರ್ನಾಟಕ) ಹಾಗೂ ಅಗ್ನಾ ಎಮ್.ಪಿ (ಕೇರಳ ಕಂಚು).

ತೈಜಿಜಿಯನ್ ವಿಭಾಗ: ಆಧಿರಾಯಿ ಎಸ್.ಬಿ (ತಮಿಳನಾಡು ಚಿನ್ನ), ಲುಬಾ ಸುನೀರ್ ಹಮ್ಸಾ (ಕೇರಳ ಬೆಳ್ಳಿ), ಜ್ಯೋತಿ ಬಾಗಲೋಟಿ (ಕರ್ನಾಟಕ) ಹಾಗೂ ರಬೀಯಾ ಜವಿಯಾ ಎ.ಜೆ(ತಮಿಳನಾಡು ಕಂಚು)

ತೈಜಿಶಾನ್ ವಿಭಾಗ: ಎಮ್.ಭವತರಾಣಿ (ತಮಿಳನಾಡು ಚಿನ್ನ), ಪಾಯಲ್ ಪಟ್ನಾಯಕ (ಓಡಿಸ್ಸಾ ಬೆಳ್ಳಿ),ಮಹೇಶ್ವರಿ ಜವೀನ ನದಾಫ (ಕರ್ನಾಟಕ) ಹಾಗೂ ಸವಿತಾ ಹುಬ್ಬಳ್ಳಿ (ಕರ್ನಾಟಕ ಕಂಚು). ಪದಗಳನ್ನು ಪಡೆದಿದ್ದಾರೆ.

ಗುರುವಾರ ಬೆಳಗ್ಗೆ 8 ಗಂಟೆಯಿಂದ ಫೈಟಿಂಗ (ಸಾಂಡಾ) ರೋಮಾಂಚನಕಾರಿ ಫೈನಲ್ ಮ್ಯಾಚ್‌ಗಳು ಜರುಗಲಿದ್ದು, ಮದ್ಯಾಹ್ನ 12 ಗಂಟೆಗೆ ಸಮಗ್ರ, ವೀರಾಗ್ರಣಿ ಪ್ರಶಸ್ತಿ ಪ್ರಧಾನ ಹಾಗೂ ಸಮಾರೋಪ ಸಮಾರಂಭ ಜರುಗಲಿದೆ.

ದೇಸಾಯಿಯ ಒಲವಿನ ಹಾಡಿಗೆ ಅಶ್ವಿನಿ ಸಾಥ್

ಶ್ರೀ ವೀರಭದ್ರೇಶ್ವರ ಕ್ರಿಯೇಟಿವ್ ಫಿಲಂಸ್ ಲಾಂಛನದಲ್ಲಿ ಮಹಾಂತೇಶ ವಿ.ಚೋಳಚಗುಡ್ಡ ಅವರು ಕಥೆ ಬರೆದು ನಿರ್ಮಿಸುತ್ತಿರುವ ಹಾಗೂ ನಾಗಿರೆಡ್ಡಿ ಭಡ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ದೇಸಾಯಿ ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರ. ಉತ್ತರ ಕರ್ನಾಟಕ ಶೈಲಿಯ ಕಥಾಹಂದರ ಒಳಗೊಂಡಿರುವ ಈ ಚಿತ್ರಕ್ಕೆ ಕಳೆದ ಇಪ್ಪತ್ತು ವರ್ಷಗಳಿಂದ ಕನ್ನಡ ಹಾಗೂ ತೆಲುಗು ಚಿತ್ರರಂಗದಲ್ಲಿ ಸಕ್ರಿಯರಾಗಿರುವ ನಾಗಿರೆಡ್ಡಿ ಬಢ ಅವರೇ ಚಿತ್ರಕಥೆ ಬರೆದಿದ್ದಾರೆ. ನಿರ್ಮಾಪಕರು ಹಾಗೂ ನಿರ್ದೇಶಕರು ಇಬ್ಬರಿಗೂ ದೇಸಾಯಿ ಮೊದಲ ಚಿತ್ರವಾಗಿದೆ, ಈ ಚಿತ್ರದ ಒಲವು ಮೂಡುವ ಕಾಲವು ಎಂಬ ಸಾಹಿತ್ಯ ಹೊಂದಿದ ಹಾಡನ್ನು ಇತ್ತೀಚೆಗೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಬಿಡುಗಡೆ ಮಾಡಿ, ಚಿತ್ರದ ಟೀಸರ್ ಹಾಗೂ ಹಾಡು ತುಂಬಾ ಚೆನ್ನಾಗಿದೆ. ಸಿನಿಮಾ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಗಾಯಕ ವಿಜಯ್ ಪ್ರಕಾಶ್ ಹಾಗೂ ಅನುರಾಧ ಭಟ್ ಈ ಹಾಡಿಗೆ ದನಿಯಾಗಿದ್ದಾರೆ. ಲವ್ 360 ಖ್ಯಾತಿಯ ಪ್ರವೀಣ್ ಕುಮಾರ್ ಹಾಗೂ ಮೈಸೂರಿನ ಬೆಡಗಿ ರಾಧ್ಯ ಅವರು ಈ ಚಿತ್ರದ ನಾಯಕ ನಾಯಕಿ ಪಾತ್ರಗಳಲ್ಲಿ ನಟಿಸಿದ್ದಾರೆ.

ಉತ್ತರ ಕರ್ನಾಟಕ ಭಾಗದಲ್ಲಿ ಹಿಂದಿನಿಂದಲೂ ದೇಸಾಯಿ ಮನೆತನಕ್ಕೆ ಅದರದೇ ಆದ ವಿಶಿಷ್ಟ ಪರಂಪರೆಯಿದೆ. ಈ ದೇಸಾಯಿ ಮನೆತನದಲ್ಲಿ ನಡೆಯುವ ಘಟನೆಗಳನ್ನಿಟ್ಟುಕೊಂಡು ನಿರ್ಮಾಪಕ ಮಹಾಂತೇಶ್ ವಿ. ಚೋಳಚಗುಡ್ಡ ಅವರು ದೇಸಾಯಿ ಚಿತ್ರಕ್ಕೆ ಕಥೆ ಬರೆದು ನಿರ್ಮಾಣ ಮಾಡಿದ್ದಾರೆ

ಈ ವೇಳೆ ಅಶ್ವಿನಿ ಪುನೀತ್ ರಾಜಕುಮಾರ್ ಅವರ ಜೊತೆ ಮಾತನಾಡಿದ ನಿರ್ಮಾಪಕ ಮಹಾಂತೇಶ್ ವಿ. ಚೋಳಚಗುಡ್ಡ, ಮೇಡಂ ಪುನೀತ್ ರಾಜಕುಮಾರ್ ಅವರನ್ನು ಈ ಚಿತ್ರದಲ್ಲಿ ನಾಯಕರಾಗಿ ಮಾಡಬೇಕೆಂದು ನನಗೆ ಆಸೆಯಿತ್ತು ಎಂಬ ವಿಷಯವನ್ನು ತಿಳಿಸಿದರು. ಚಿತ್ರದ ನಾಯಕ ಪ್ರವೀಣ್‌ಕುಮಾರ್, ನಾಯಕಿ ರಾಧ್ಯ, ನಿರ್ದೇಶಕ ನಾಗಿರೆಡ್ಡಿ ಭಡ ಹಾಗೂ ಶೋಭಾ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ನಾಯಕ ಪ್ರವೀಣ್ ಕುಮಾರ್ ಮಾತನಾಡುತ್ತ ನನ್ನ ಹಿಂದಿನ ಲವ್ 360 ಚಿತ್ರದ ಪಾತ್ರವೇ ಬೇರೆ. ಈ ಚಿತ್ರದ ಪಾತ್ರವೇ ಬೇರೆ. ಈ ಚಿತ್ರಕ್ಕಾಗಿ ನಾನು ಸಾಕಷ್ಟು ತಯಾರಿ ಮಾಡಿಕೊಂಡಿದ್ದೇನೆ. ಚಿತ್ರದಲ್ಲಿ ಪ್ರವೀಣ್ ದೇಸಾಯಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನನ್ನದು ಅಟಗಾರ(ಅಥ್ಲೆಟಿಕ್)ನ ಪಾತ್ರ. ಲವ್ 360 ಚಿತ್ರದ ನಂತರ ಒಳ್ಳೆಯ ಪಾತ್ರಕ್ಕಾಗಿ ಕಾಯುತ್ತಿದ್ದಾಗ ನಿರ್ದೇಶಕ ನಾಗಿರೆಡ್ಡಿ ಅವರು ಹೇಳಿದ ದೇಸಾಯಿ ಚಿತ್ರದ ಕಥೆ ನನಗೆ ತುಂಬಾ ಇಷ್ಟವಾಯಿತು ಎಂದು ಹೇಳುತ್ತಾರೆ. ಬರಟ ಪ್ರಶಾಂತ್, ಚೆಲುವರಾಜು, ಮಧುಸೂದನ್‌ರಾವ್, ಕಲ್ಯಾಣಿ, ಹರಿಣಿ, ನಟನ ಪ್ರಶಾಂತ್, ಮಂಜುನಾಥ್ ಹೆಗಡೆ, ಸೃಷ್ಟಿ(ಕಾಂತಾರ) ಮುಂತಾದವರು ಈ ಚಿತ್ರದ ಇತರೆ ತಾರಾಬಳಗದಲ್ಲಿದ್ದಾರೆ. ಜೈಆನಂದ್ ಅವರ ಛಾಯಾಗ್ರಹಣ, ಸಾಯಿಕಾರ್ತಿಕ್ ಅವರ ಸಂಗೀತ ನಿರ್ದೇಶನ ಹಾಗೂ ದೀಪು ಎಸ್. ಕುಮಾರ್ ಅವರ ಸಂಕಲನ ಈ ಚಿತ್ರಕ್ಕಿದೆ. ಯಲ್ಲಪ್ಪ ವಿ ಚೋಳಚಗುಡ್ಡ ಸಹ ನಿರ್ಮಾಪಕರಾಗಿರುವ ಈ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣ ಉತ್ತರ ಕರ್ನಾಟಕದಲ್ಲೇ ನಡೆದಿದೆ.

ದರ್ಶನ್ ನಿರ್ಲಕ್ಷಿಸಿದ ಚಿತ್ರೋದ್ಯಮ

ಗರ್ಭಿಣಿ ಸೊಸೆ; ರೋದಿಸಿದ ತಾಯಿ

ಕೆ. ಜಿ. ಕುಮಾರ್

ಚಿತ್ರೋದ್ಯಮ ದರ್ಶನ್‌ಗೆ ಸದ್ಯ ಅಘೋಷಿತ ನಿರ್ಬಂಧ ವಿಧಿಸಿದೆ; ಇದಕ್ಕೆ ಹಲವು ರೀತಿಯ ಕಾರಣಗಳೂ ಇವೆ. ಕನ್ನಡದ ಸ್ಟಾರ್‌ಗಳು ಚಿತ್ರೋದ್ಯಮದ ಯಾವ ಸಂಘಟನೆಯಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ; ಫಿಲಂಚೇಂಬರ್ ಬಾಗಿಲನ್ನೇ ನೋಡದ ಸ್ಟಾರ್‌ಗಳಿದ್ದಾರೆ. ಈ ಅಸಮಾಧಾನ ಎಲ್ಲರಲ್ಲೂ ಇದೆ; ಇದರಲ್ಲಿ ಮುಂಚೂಣಿಯಲ್ಲಿರುವವರು ದರ್ಶನ್. ಈ ಕಾರಣದಿಂದ ದರ್ಶನ್ ಎದುರಿಸುತ್ತಿರುವ ಸಮಸ್ಯೆಯನ್ನು ಆತನೇ ನೋಡಿಕೊಳ್ಳಲಿ ಎನ್ನುವ ಭಾವನೆ ಎಲ್ಲರಲ್ಲೂ ಬಂದಾಗಿದೆ. ಹೀಗಾಗಿ ದರ್ಶನ್‌ರತ್ತ ಯಾರೂ ಸುಳಿದಿಲ್ಲ. ಒಟ್ಟಿನಲ್ಲಿ ದರ್ಶನ್ ವರ್ತನೆಗೇ ಇಡೀ ಚಿತ್ರೋದ್ಯಮವೇ ಆಕ್ರೋಶ ವ್ಯಕ್ತಪಡಿಸಿದೆ ಮತ್ತು ಖಂಡಿಸಿದೆ.

'ನನ್ನ ಸೊಸೆ ಮೂರು ತಿಂಗಳ ಗರ್ಭಿಣಿ, ಈ ತಿಂಗಳು ಆಕೆಯ ವಿವಾಹಕ್ಕೆ ಒಂದು ವರ್ಷ ತುಂಬುತ್ತದೆ, ಇಂತಹ ಸನ್ನಿವೇಶದಲ್ಲಿ ಆತನನ್ನು ಅಪಹರಿಸಿ, ಬೆಂಗಳೂರಿಗೆ ಕರೆತಂದು ಕೊಲೆ ಮಾಡುತ್ತಾರೆ; ಆತನ ಮೃತದೇಹದಲ್ಲಿ ಆಗಿರುವ ಗಾಯಗಳನ್ನು ನೋಡಿದಾಗ ತಾಯಿಯಾದ ತನಗೆ ಹೃದಯ ಕಲಕಿಹೋಗುತ್ತದೆ, ಈ ಕಾರಣಕ್ಕಾಗಿ ಕೊಲೆಗಡುಕರಿಗೆ ತಕ್ಕ ಶಿಕ್ಷೆ ಆಗಬೇಕು'

–ಇದು ದರ್ಶನ್ ಬಂಟರಿಂದ ಕೊಲೆಯಾದ ರೇಣುಕಾಸ್ವಾಮಿ ತಾಯಿ ರತ್ನಪ್ರಭಾ ಆಕ್ರೋಶದಲ್ಲಿ ನುಡಿದ ಮಾತುಗಳು.

ದರ್ಶನ್ ಸಿನಿಮಾಗಳಲ್ಲಿ ಉತ್ತಮ ಗುಣದ ಪಾತ್ರ ಮಾಡಿರಬಹುದು, ಆದರೆ ಆತನಲ್ಲಿ ಅದೊಂದು ರಾಕ್ಷಸೀಪ್ರವೃತಿ ಇದೆ ಎಂದು ಹೇಳಿದ ರತ್ನಪ್ರಭಾ ತನ್ನ ಮಗ ದರ್ಶನ್ ಅಭಿಮಾನಿ ಯಾವತ್ತೂ ಆಗಿಲ್ಲ, ಈ ಕುರಿತು ಬಂದಿರುವ ಮಾತುಗಳು ಸುಳ್ಳು ಎಂದು ಸ್ಪಷ್ಟಪಡಿಸಿದರು.

ಕರ್ನಾಟಕ ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್ 'ದರ್ಶನ್ ವರ್ತನೆ ಖಂಡನಾರ್ಹ, ಆತ ಮಾಡಿದ್ದು ತಪ್ಪು, ಇದರಿಂದ ಚಿತ್ರೋದ್ಯಮಕ್ಕೆ ಕೆಟ್ಟಹೆಸರು ಬಂದಿದೆ. ಇನ್ನು ಆತನನ್ನು ಬ್ಯಾನ್ ಮಾಡಬೇಕು ಎನ್ನುವ ತೀರ್ಮಾನವನ್ನು ಕಲಾವಿದರ ಸಂಘ ತೆಗೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ಚಿತ್ರೋದ್ಯಮದಲ್ಲಿ ನಾಯಕ ಪಟ್ಟದಲ್ಲಿರುವ ಸಾ.ರಾ.ಗೋವಿಂದು 'ಯಾರೂ ದರ್ಶನ್ ನಡವಳಿಕೆಯನ್ನು ಒಪ್ಪುವುದಿಲ್ಲ, ಎದುರಾಗುವ ಅನಾಹುತ ಮತ್ತು ಶಿಕ್ಷೆಯನ್ನು ಆತ ಅನುಭವಿಸಲೇಬೇಕು' ಎಂದಿದ್ದಾರೆ.

ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಅವರ ಮಾತು: ದರ್ಶನ್‌ರನ್ನು ಚಿತ್ರೋದ್ಯಮದಿಂದಲೇ ಬ್ಯಾನ್ ಮಾಡುವುದು ಸದ್ಯದ ಸ್ಥಿತಿಯಲ್ಲಿ ಸಾಧ್ಯವಿಲ್ಲ. ಈಗ ಆತ ವಿಚಾರಣಾ ಖೈದಿ, ಅತ ಮಾಡಿದ್ದು ಶಿಕ್ಷಾರ್ಹ ಎನ್ನುವ ತೀರ್ಪು ಬಂದದ್ದೇ ಆದರೆ ಆಗ ಬ್ಯಾನ್ ಮಾಡಲು ಯೋಚಿಸಬಹುದು.

ನಟಿ ಉಮಾಶ್ರೀ ಕೂಡಾ ದರ್ಶನ್ ಪ್ರವೃತ್ತಿಯನ್ನು ಖಂಡಿಸಿದ್ದಾರೆ. ನಟನೊಬ್ಬ ಕೊಲೆ ಮಾಡುವುದು, ಮಾಡಿಸುವುದು ಬಹು ಘೋರ ಅಪರಾಧ, ಅದಕ್ಕೆ ತಕ್ಕ ಶಿಕ್ಷೆ ಆಗಲಿ ಎಂದು ಆಗ್ರಹಿಸಿದ್ದಾರೆ. ಭಾ.ಮಾ. ಹರೀಶ್ ಕೂಡಾ ದರ್ಶನ್ ಕೃತ್ಯದಿಂದ ಚಿತ್ರರಂಗದ ಮಾನ ಹಾಳಾಗಿದೆ ಮತ್ತು ಎಲ್ಲರೂ ಇಲ್ಲಿ ತಲೆತಗ್ಗಿಸುವಂತಾಗಿದೆ. ಇಲ್ಲಿ ದರ್ಶನ್ ದಂಡು ಶಿಕ್ಷೆಗೆ ಅರ್ಹ ಎಂದಿದ್ದಾರೆ.

ದರ್ಶನ್ ಪ್ರಕರಣವನ್ನು ಶಿಕ್ಷಾರ್ಹವೆಂದು ಯಾರು ನಿರ್ಧರಿಸಬೇಕು; ಆದರೆ ಚಾನೆಲ್‌ಗಳೇ ತನಿಖೆ ಮಾಡುತ್ತಿವೆ, ಶಿಕ್ಷೆಯನ್ನೂ ಪ್ರಕಟಿಸುತ್ತಿವೆ. ಇಲ್ಲಿ ಆಗುವ ಪರಿಣಾಮವನ್ನು ತಾನೂ ಎದುರಿಸಿದ್ದೇನೆ. ಈಗ ದರ್ಶನ್ ವಿಚಾರಣೆಯಲ್ಲಿದ್ದಾರೆ; ತಪ್ಪು ಎಂದಾದಲ್ಲಿ ಯಾವ ಶಿಕ್ಷೆಗೂ ಆತ ಅರ್ಹ, ಆದರೆ ಈಗಲೇ ನಿರ್ಧರಿಸುವುದು ಸರಿಯಲ್ಲ ಎಂದು ಕಟುವಾಗಿ ಮಾತನಾಡಿದ್ದು ನಟಿ ಸಂಜನಾ ಗಲ್ರಾನಿ.

ಇನ್ನು ದರ್ಶನ್ ಪತ್ನಿ ವಿಜಯಲಕ್ಷ್ಮಿ ನಡೆ ಅಚ್ಚರಿಪಡಿಸುವಂತಿದೆ. ಆಕೆ ದರ್ಶನ್ ಜತೆಗಿನ ಎಲ್ಲಾ ಫೋಟೋಗಳನ್ನು ಹಠಾತ್ ಡಿಲೀಟ್ ಮಾಡಿದ್ದಾರೆ. ಅದು ತನಗೂ ದರ್ಶನ್‌ಗೂ ಯಾವುದೇ ಸಂಬಂಧ ಇಲ್ಲ ಎನ್ನುವಂತಿದೆ.

ದರ್ಶನ್ ಮತ್ತು ಇತರರಿಗೆ ನ್ಯಾಯಾಲಯ ಆರು ದಿನದ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಕಳೆದ ರಾತ್ರಿ ಸ್ಟೇಷನ್ನಲ್ಲೇ ಕಳೆದ ದರ್ಶನ್‌ಗೆ ಪೊಲೀಸರು ದೊನ್ನೆಪಲಾವ್ ತಂದುಕೊಟ್ಟಿದ್ದಾರೆ. ಬೆಳಗ್ಗೆ ಇಡ್ಲಿ ನೀಡಿದ್ದಾರೆ. ಟೀಶರ್ಟ್ ಬದಲಾಯಿಸಿದ್ದಾರೆ. ತನಿಖೆಯಲ್ಲಿ ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಯುವಾಗ ದರ್ಶನ್ ಮುಂದೆ ನಿಂತಿದ್ದರಾ ? ಅಥವಾ ಕೊಲೆನಡೆದ ನಂತರ ಸ್ಥಳಕ್ಕೆ ಬಂದ್ರಾ, ಎನ್ನುವ ಕುರಿತು ಸದ್ಯಕ್ಕೆ ಯಾವುದೇ ಖಚಿತ ಮಾಹಿತಿ ಇಲ್ಲ. ರೇಣುಕಾಸ್ವಾಮಿ ಪ್ರಾಣ ಹೋಯಿತು ಎಂದು ಗೊತ್ತಾದಾಗ ಕ್ರುದ್ಧಗೊಂಡ ದರ್ಶನ್ ಆರ್.ಆರ್. ನಗರದ ಪವಿತ್ರಾಗೌಡ ಮನೆಗೆ ಬಂದು ಕೋಪದಲ್ಲಿ ಆಕೆಗೆ ನಾಲ್ಕು ಥಳಿಸಿ ನಿನ್ನಿಂದ ಇಷ್ಟೆಲ್ಲಾ ಆಗಿಹೋಯಿತು ಎಂದು ಕೂಗಾಡಿದ್ದಾರೆ. ಪವಿತ್ರಾಗೌಡ ಒಂದುಕಡೆ ಭೀತಿ ಇನ್ನೊಂದೆಡೆ ನೋವು ತಾಳಲಾರದೆ ಅದೇಕ್ಷಣ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ.

ಯಾವಾಗಲೂ ಬೌನ್ಸರ್‌ಗಳನ್ನು ಇಟ್ಟುಕೊಂಡು ಹೊರಬರುವ ದರ್ಶನ್ ಪೊಲೀಸ್ ಕಸ್ಟಡಿಗೆ ತಗುಲಿಕೊಂಡ ನಂತರ ಆತನ ಸುತ್ತ ಪೊಲೀಸರು ಕಾವಲಿದ್ದಾರೆ. ಈ ಸಮಯದಲ್ಲಿ ಆತನ ಪ್ರತಿಷ್ಠೆಯನ್ನು ಪೊಲೀಸರು ಕಡಿಮೆ ಮಾಡಿದ್ದಾರೆ. ಸ್ವತ: ದರ್ಶನ್ ಮೌನಕ್ಕೆ ಜಾರಿದ್ದಾರೆ. ಬುಧವಾರ ರೇಣುಕಾಸ್ವಾಮಿ ಸತ್ತುಬಿದ್ದಿದ್ದ ಪಟ್ಟಣಗೆರೆ ಶೆಡ್ ಹಾಗೂ ಹೆಣ ಎಸೆದಿದ್ದ ಜಾಗದಲ್ಲಿ ಮಹಜರು ಆಗಿದೆ. ಪೊಲೀಸರು ಒಟ್ಟು ಹದಿಮೂರು ಮಂದಿ ಅಪರಾಧಿಗಳನ್ನು ಬೇರೆಬೇರೆ ಮಾಡಿ ಹೇಳಿಕೆ ಪಡೆಯುತ್ತಿದ್ದಾರೆ. ಇಲ್ಲಿ ಒಂದೇ ಅಭಿಪ್ರಾಯ ಹೇಗೆ ಬರುತ್ತದೆ ? ಎಂಬುದನ್ನು ಕಾದುನೋಡಬೇಕು. ಅದು ಇಡೀ ತನಿಖೆಯ ವ್ಯವಸ್ಥೆಯನ್ನು ಬದಲಿಸಬಹುದು.

ಒಂದು ಮೂಲದ ಪ್ರಕಾರ ಈಗ ಪೊಲೀಸ್ ಕಸ್ಟಡಿಯಲ್ಲಿರುವ ವಿಚಾರಣಾ ಅಪರಾಧಿಗಳು ಕೊಲೆಯಲ್ಲಿ ದರ್ಶನ್ ಪಾತ್ರವಿಲ್ಲ ಎಂದು ಹೇಳಿದರೆ, ಈ ಪ್ರಕರಣ ಮತ್ತೊಂದು ದಾರಿಯಲ್ಲಿ ಸಾಗಲಿದೆ. ಅಂತಹ ಪ್ರಯತ್ನ ಈಗ ನಡೆದಿದೆಯಾ ? ಎನ್ನುವ ಮಾತೂ ಈಗ ಹರಡಿಹೋಗಿದೆ. ಈಗ ವಿಚಾರಣೆಯಲ್ಲಿರುವ ಯಾವುದೇ ಅಪರಾಧಿ ಸಾಕ್ಷಿದಾರನಾದರೆ ದರ್ಶನ್‌ಸಹಿತ ಎಲ್ಲರಿಗೂ ಶಿಕ್ಷೆಯೂ ಗ್ಯಾರಂಟಿ.

ದರ್ಶನ್ ಪೊಲೀಸ್ ಕಸ್ಟಡಿ ಜೂನ್ 16ಕ್ಕೆ ಕೊನೆಗೊಳ್ಳುತ್ತದೆ; ಪೊಲೀಸರು ವಿಚಾರಣೆ ಇನ್ನೂ ಬಾಕಿ ಇದೆ, ಮತ್ತಷ್ಟು ದಿನ ಕಸ್ಟಡಿಗೆ ಕೊಡಿ ಎಂದು ಇಲ್ಲಿ ಕೇಳಲೂಬಹುದು. ಆದರ ನಿರ್ಣಯ ನ್ಯಾಯಾಲಯಕ್ಕೆ ಸೇರಿದ್ದು.

ಒಟ್ಟಿನಲ್ಲಿ ಪೊಲೀಸ್ ಕಸ್ಟಡಿ ಮುಗಿದ ನಂತರ ನ್ಯಾಯಾಲಯ ಎಲ್ಲರನ್ನೂ ಜ್ಯುಡಿಷಿಯಲ್ ಕಸ್ಟಡಿಗೂ ಕೊಡಬಹುದು, ಆಗ ಎಲ್ಲರಿಗೂ ಜೈಲು ಎಂಟ್ರಿ ಗ್ಯಾರಂಟಿ. ದರ್ಶನ್‌ಗೆ ಮಾತ್ರ ಎರಡನೇ ಪ್ರವೇಶ.

ದರ್ಶನ್ ತಾಯಿ ಮೀನಾ ಹಾಗೂ ಸಹೋದರ ದಿನಕರ್ ಸದ್ಯ ಮೌನಕ್ಕೆ ಜಾರಿದ್ದಾರೆ; ಇದರ ಹಿಂದಿನ ಅರ್ಥವೇನು ಎಂಬುದು ಗೊತ್ತಾಗುತ್ತಿಲ್ಲ. ದರ್ಶನ್ ಜೈಲುವಾಸದಿಂದ ಆತನ ಮೈಸೂರಿನ ತೋಟ ನೋಡಿಕೊಳ್ಳುವವರು ಮುಂದೇನು ? ಎನ್ನುವ ಚಿಂತೆಯಲ್ಲಿದ್ದಾರೆ. ಇದರ ನಡುವೆ ದರ್ಶನ್ ಪರವಾಗಿ ಹೆಸರಾಂತ ವಕೀಲರು ವಕಾಲತ್ ಹಾಕುವ ಸಿದ್ಧತೆ ನಡೆದಿದೆ.

ಹೋಟೆಲ್ ಹುಡುಗರ ಕನಸು

ಹೋಟೆಲ್ ಕೆಲಸ ಮಾಡುವ ಐವರು ಹುಡುಗರ ಸುತ್ತ ನಡೆಯುವ ಕಥೆ ಇಟ್ಟುಕೊಂಡು ಪ್ರತೀಕ್ ಪ್ರಜೋಷ್ ಅವರು ಆಕ್ಷನ್ ಕಟ್ ಹೇಳಿರುವ ಚಿತ್ರ ಚಿಲ್ಲಿ ಚಿಕನ್. ಸದ್ಯದಲ್ಲೇ ತೆರೆಕಾಣಲಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದಲ್ಲಿ ನಡೆಯಿತು.

ಬೆಂಗಳೂರಿನ ಹೋಟೆಲೊಂದರಲ್ಲಿ ದುಡಿಯುತ್ತಾ ಚೈನೀಸ್ ರೆಸ್ಟೋರೆಂಟ್ ಒಂದನ್ನು ಪ್ರಾರಂಭಿಸಬೇಕೆಂಬ ಕನಸು ಕಾಣುವ ಈ ಹುಡುಗರ ಕನಸಿಗೆ ಏನೆಲ್ಲಾ ಅಡೆತಡೆಗಳು ಎದುರಾಗುತ್ತವೆ ಎನ್ನುವ ಕಥೆ ಈ ಚಿತ್ರದಲ್ಲಿದೆ. ಬೆಂಗಳೂರಿನಲ್ಲಿ ನಡೆದ ನೈಜಘಟನೆಯೊಂದು ಈ ಚಿತ್ರಕ್ಕೆ ಪ್ರೇರಣೆ. ಕಳೆದ ತಿಂಗಳು ಟೀಸರನ್ನು ಬಿಡುಗಡೆ ಮಾಡಿದ್ದ ಚಿತ್ರತಂಡ ಇದೀಗ ಟ್ರೇಲರನ್ನು ಹೊರತಂದಿದೆ. ಸಂಗೀತನಿರ್ದೇಶಕ ಸಿದ್ಧಾಂತ ಸುಂದರ್ ಅವರಿಗೆ ಈ ಚಿತ್ರದ ಕಥೆ ಹೊಳೆದದ್ದೇ ಒಂದು ಚೈನೀಸ್ ರೆಸ್ಟೋರೆಂಟ್‌ನಲ್ಲಿ, ಅದನ್ನು ನಿರ್ದೇಶಕ ಪ್ರತೀಕ್ ಪ್ರಜೋಶ್ ಅವರಿಗೆ ಹೇಳುತ್ತಾರೆ. ಅವರು ಆ ಒನ್‌ಲೈನ್ ಕಥೆಯ ಮೇಲೆ ಸಾಕಷ್ಟು ವರ್ಕ್ ಮಾಡಿ ಸಿನಿಮಾರೂಪಕ್ಕೆ ತಂದು ಬಿಡುಗಡೆಗೆ ಸಿದ್ಧಗೊಳಿಸಿದ್ದಾರೆ.



ಈ ಕುರಿತು ಮಾತನಾಡುವ ಸಂಗೀತ ನಿರ್ದೇಶಕರು 'ಸದ್ಯ ಎಲ್ಲೆಡೆ ನಮ್ಮ ಚಿತ್ರದ ಬಗ್ಗೆ ಜನ ಮಾತಾಡ್ತಾ ಇದ್ದಾರೆ. ಪ್ರತೀಕ್ ಅವರು ಈ ಸಿನಿಮಾ ಮಾಡಲು ನೂರುಸಲ ಪ್ರಯತ್ನ ಮಾಡಿದ್ದಾರೆ. ಅವರಿಗೆ ಇದು ನೂರನೇ ಸಿನಿಮಾ ಎನ್ನಬಹುದು. ನೈಜ ಘಟನೆಯನ್ನು ಇಟ್ಟುಕೊಂಡು ಸಿನಿಮಾ ಮಾಡೋದು ಸುಲಭವಲ್ಲ, ಚಿತ್ರ ನಿಜಕ್ಕೂ ಚೆನ್ನಾಗಿ ಮೂಡಿಬಂದಿದೆ. ಚಿತ್ರದಲ್ಲಿ 5 ಹಾಡುಗಳಿದ್ದು ರ್‍ಯಾಪರ್ ಮಾರ್ಟಿನ್ ಯೋ ಸಾಹಿತ್ಯ ಬರೆದಿದ್ದಾರೆ. ಇದು ಕನ್ನಡಿಗರಷ್ಟೇ ಅಲ್ಲ ಕನ್ನಡಿಗರಲ್ಲದವರೂ ಸಹ ನೋಡಲೇಬೇಕಾದ ಚಿತ್ರ. ಇದರಲ್ಲಿ ಒಳ್ಳೇ ಕಥೆಯ ಜೊತೆಗೆ ಉತ್ತಮ ಮನರಂಜನೆಯೂ ಇದೆ ಎಂದು ಹೇಳಿದರು.

ನಿರ್ದೇಶಕ ಪ್ರತೀಕ್ ಪ್ರಜೋಶ್ ಮಾತನಾಡಿ ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದ್ದು, ಸದ್ಯದಲ್ಲೇ ರಿಲೀಸಾಗಲಿದೆ ಎಂದಷ್ಟೇ ಹೇಳಿದರು. ಚಿತ್ರದ ನಾಯಕ ಬಿ.ವಿ. ಶೃಂಗಾ ಮಾತನಾಡುತ್ತ ನಾವೆಲ್ಲಾ ಈ ಸಿನಿಮಾ ಮೂಲಕ ದೊಡ್ಡ ಸಾಹಸಕ್ಕೆ ಕೈಹಾಕಿದ್ದೇವೆ, ನಾನಿಲ್ಲಿ ರೆಸ್ಟೋರೆಂಟ್ ಮಾಲೀಕನ ಪಾತ್ರ ಮಾಡಿದ್ದು, ಈ ಕಥೆ ಕೇಳಿದಾಗ ಇಂದಿನ ಜನರೇಷನ್‌ಗೆ ಹೇಳಬೇಕಾದ ಒಂದಷ್ಟು ವಿಷಯ ಇದರಲ್ಲಿದೆ ಅನಿಸಿತು. ಹ್ಯೂಮರ್, ಫ್ಯಾಮಿಲಿ ಡ್ರಾಮಾ ಕಥೆಯನ್ನು ನಿರ್ದೇಶಕರು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಮಿಡಲ್‌ಕ್ಲಾಸ್ ಕುಟುಂಬದಿಂದ ಬಂದ ನಾನು, ಚೈನೀಸ್ ರೆಸ್ಟೋರೆಂಟ್ ಮಾಡಲು ಹೋಗಿ ಹೇಗೆಲ್ಲಾ ಅಲೆದಾಡುತ್ತೇನೆ ಅಂತ ಚಿತ್ರದಲ್ಲಿದೆ ಎಂದರು.

ನಟಿ ನಿತ್ಯಶ್ರೀ ಮಾತನಾಡಿ ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿಯಲ್ಲಿ ಅಭಿನಯಿಸಿರೋ ನನಗೆ ಕನ್ನಡದಲ್ಲಿ 2ನೇ ಚಿತ್ರ. ಎಲ್ಲಾ ಕಲಾವಿದರು ಕನ್ನಡ ಕಲಿತು ಅವರೇ ಡಬ್ಬಿಂಗ್ ಮಾಡಿದ್ದಾರೆ ಎಂದು ಹೇಳಿದರು. ನಂತರ ನಾಯಕಿ ರಿನಿ, ಮಣಿಪುರದ ನಟ ಬಿಜು ತಾಂಜಂ, ಅಸ್ಸಾಂ ಕಲಾವಿದ ಹಿರಾಕ್ ಸೋನಾವಾಲ್, ಉತ್ತರಖಂಡದ ನಟ ಜಿಂಪಾ ಭುಟಿಯಾ, ನಿರ್ಮಾಪಕ ದೀಪ್ ಭೀಮಾಜಿಹಾನಿ ತಮ್ಮ ಅನುಭವ ಹಂಚಿಕೊಂಡರು. ಈ ಚಿತ್ರತಂಡ ಬೆಂಗಳೂರಿನಲ್ಲಿ ಒಡೆದು ಹಾಕಿರುವ ಕಾವೇರಿ ಥಿಯೇಟರ್ ಬಗ್ಗೆ ಒಂದು ಸಾಂಗ್ ಮಾಡಿ ಅದನ್ನು ಟ್ರಿಬ್ಯೂಟ್ ಕೊಡುತ್ತಿದೆ. ಈ ಗೀತೆಗೆ ಪತ್ರಕರ್ತ

ಅನುಪಮ
ANUPAMA - DTS
(10-30, 1-30, 4-30, 7-30)
ಮಾಗಡಿರಸ್ತೆ (4ಆಟ)
ಪ್ರಸನ್ನ

ಸಿದ್ಧೇಶ್ವರ, ವೆಂಕಟೇಶ್ವರ, ನವರಂಗ್, ಬಾಲಾಜಿ, ವೆಂಕಟೇಶ್ವರ, PVR INOX, cinépolis, GOPALAN, ROCKLINE, KINI CINEMAS, INNOVATIVE, CINEPHILE, MIRAJ
ವೈಭವ್, ಶ್ರೀನಿವಾಸ, ಕೃಷ್ಣ, ವಿನಾಯಕ, ಭಾರತಿ, ವೆಂಕಟೇಶ್ವರ, ಅಶೋಕ, ವಿ.ಸಿನಿಮಾಸ್, ವಿನಾಯಕ, ಕಾಮಾಕ್ಯ, ವಿ ಸಿನಿಮಾಸ್, ವೈಭವ್, ಶ್ರೀರಾಮ, ವಾಣಿ, ಬಾಲಾಜಿ, ನಾರಾಯಣಿ, ಬಾಲಾಜಿ, ಬಾಲಾಜಿ, ಸಂಗಮೇಶ್ವರ, ಅನ್ನಪೂರ್ಣೇಶ್ವರಿ
ಗಾಯತ್ರಿ, PVR INOX, ಶಾಂತಲಾ, ಗಾಯತ್ರಿ, PVR INOX, VISION CINEMAS, ಮಹಾವೀರ, ಸಹ್ಯಾದ್ರಿ, ಬಸವೇಶ್ವರ, ಕೃಷ್ಣ, ರಾಜರಾಜೇಶ್ವರಿ, ಮಹಾವೀರ, ಸಾಧನಾ, ಮುರುಗನ್, ಶಾರದ, ಭಾರ್ಗವಿ, ಗೀತಾಂಜಲಿ, MOVIETIME, ವೆಂಕಟೇಶ್ವರ, ಸೂಪರ್‌ಸ್ಟಾರ್, MOVIETIME, ಲಕ್ಷ್ಮಿ
ಜ್ಯೋತಿ, ಶಂಕರ್, Bharath Cinemas, ಶ್ರೀದೇವಿ, ಶ್ರೀಲೇಖ, ಅನ್ನಪೂರ್ಣೇಶ್ವರಿ, ಶ್ರೀಶೈಲ, ವಿನಾಯಕ, SP, PVR INOX, cinépolis, Bharath Cinemas, PVR INOX, ಸುಧಾ, PVR INOX, cinépolis
ವಿಜಯ, PVR INOX, ಪ್ರಕಾಶ್, PVR INOX, KAPEEL, ಕೃಷ್ಣ, ಜಯಶ್ರೀ, ಶಿವಶಕ್ತಿ, ಶಕ್ತಿ, ಸರಸ್ವತಿ, ನಾರಾಯಣ, MAGNUM, ತ್ರಿವೇಣಿ, PVR INOX, MIRAJ, MIRAJ, ಸಪ್ನ, ಮೋಹಿದ್ದೀನ್, ಶಾರದ, ಅಪರ್ಣ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at Newsline Printers Bangalore, No.A356, 1st Main, 1st Stage, Industrial Estate, Bangalore560058 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26